
ಸಾಹಿತ್ಯ ಮಾಲಿಕೆ

ಅಂತರಂಗದತ್ತ ನಯನ

ಡಾ. ಜಿ. ಕೃಷ್ಣಪ್ಪ



GULBARGA

ಸಾಹಿತ್ಯಮಾಲಿಕೆ

ಅಂತರಂಗದತ್ತ ನಯನ

(ವಿಮರ್ಶಾ ಲೇಖನಗಳು)

ಡಾ. ಜಿ. ಕೃಷ್ಣಪ್ಪ

ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು
ಮುಖ್ಯಬೀದಿ, ಗುಲಬರ್ಗಾ – 585 101

ANTHARANGADATTA NAYANA— Articles by **Dr. G. Krishnappa.** Published by **Basamma B. Konek, Basava Prakashana & Book Sellers,** Main Road, Gulbarga - 585101. Phone : 08472-222431, Mobile: 94498 25431

ಪ್ರಥಮ ಮುದ್ರಣ: 2010

ಉಪಯೋಗಿಸಿದ ಕಾಗದ: 70 ಜಿಎಸ್ಎಂ ಮ್ಯಾಪ್ಲಿಥೋ

ISBN: 978-81-920007-9-4

ಪುಟಗಳು: 108

ಬೆಲೆ: 75/-

ಅಕ್ಷರ ಜೋಡಣೆ: ಶ್ರೀಧರ್

ಪ್ರಕಾಶಕರು
ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು
ಮುಖ್ಯಬೀದಿ, ಗುಲಬರ್ಗಾ - 585 101

ಮುದ್ರಣ :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
23, 3ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು - 18
ದೂರವಾಣಿ : 26604835

ನಲುಮೆ ನುಡಿ

ಬೇಂದ್ರೆಯವರನ್ನೇ ಹಾಸಿ ಹೊದ್ದು ಅವರ ಬಗ್ಗೆ ಮಾತನಾಡುತ್ತ, ಪ್ರಚಾರ ಮಾಡುತ್ತ 'ಬೇಂದ್ರೆ ಮಿಷನ್'ನ ಸಾಕಾರದಂತಿರುವ ಡಾ. ಜಿ. ಕೃಷ್ಣಪ್ಪನವರು 'ಅಂತರಂಗದತ್ತ ನಯನ' ಎಂಬ ತಮ್ಮ ಈ ವಿಮರ್ಶಾಸಂಕಲನಕ್ಕೆ ನನ್ನ ಕೆಲವು ಮಾತುಗಳನ್ನು ಬಯಸಿದ್ದಾರೆ. ವಿಮರ್ಶಕನಲ್ಲದ, ಒಂದು ರೀತಿಯಲ್ಲಿ ವಿಮರ್ಶೆ ಎಂದರೆ ಹೆದರುವ ನನ್ನಿಂದಲೇ ಏನನ್ನಾದರೂ ಬರೆಸಬೇಕೆಂಬ ಅವರ ಅಭಿಲಾಷೆಗೆ ನಾನು ಬೆರಗಾಗಿದ್ದೇನೆ. ಇದರಿಂದ ಆಗುವ ಡ್ಯಾಮೇಜಿಗೂ ನಾನು ಹೊಣೆಯಲ್ಲ ಎಂದು ಅವರಿಗೆ ಎಚ್ಚರಿಸಿದ್ದೇನೆ. ಕುವೆಂಪು ಹೇಳುವಂತೆ ಅವರು 'ಬಿಯದ'ನಾಗಿಲ್ಲದ ಕಾರಣ ಹಾಗೂ ಅವರದ್ದು 'ಸಹೃದಯ ವಿಮರ್ಶೆ'ಯಾದ್ದರಿಂದ ಒಂದೆರಡು ವಾಕ್ಯಗಳನ್ನು ಬರೆಯಲು ಒಪ್ಪಿಕೊಂಡು ಆ ಕೆಲಸ ನಿರ್ವಹಿಸುತ್ತಿದ್ದೇನೆ.

ಬೇಂದ್ರೆಯವರ ಸತತ ನೆನಹಿನಲ್ಲಿರುವ ಕೃಷ್ಣಪ್ಪನವರು ಬೇರೆ ಏನನ್ನೂ ಓದಿಯೇ ಇಲ್ಲವೇನೋ ಎಂದು ಹಲವರಿಗೆ ಅನ್ನಿಸಬಹುದು, ನನಗೂ ಆ ಅನುಮಾನವೇ ಇತ್ತು. ಆದರೆ ಈ ಸಂಕಲನದಲ್ಲಿ ಅವರು ಬೇಂದ್ರೆಯವರಿಂದ ಹಿಡಿದು ಸುಗತ ಶ್ರೀನಿವಾಸರಾಜು ಅವರವರೆಗಿನ ಹಲವರು ಹಿರಿಕಿರಿಯರ ಕೃತಿಗಳ ಬಗ್ಗೆ ತಮ್ಮ ಧ್ಯಾನವನ್ನು ಹರಿಸಿ, ಅವರ ಕೃತಿಗಳ ಅಂತರಂಗದತ್ತ ತಮ್ಮ ನಯನವನ್ನು ನಟ್ಟು ಅಲ್ಲಿನ ಅರ್ಥವಂತಿಕೆ ಅನುಭವಸ್ವರೂಪಗಳನ್ನು ಎತ್ತಿ ತೋರಿಸುವ ಕೆಲಸ ಮಾಡುವ ಮೂಲಕ ತಮ್ಮ ವ್ಯಾಪಕವಾದುದಷ್ಟೇ ಅಲ್ಲ, ಸಮಕಾಲೀನವಾದ ಓದಿನ ಬಗ್ಗೆ ಋಜುವಾತು ಪಡಿಸಿದ್ದಾರೆ.

ಬೇಂದ್ರೆಯವರ ಬಗ್ಗೆ ಅತ್ಯಂತ ಅಧಿಕೃತವಾಗಿ ಈಗ ಮಾತನಾಡಬಲ್ಲವರೆಂದರೆ ಡಾ. ಜಿ. ಕೃಷ್ಣಪ್ಪನವರೆಂದೇ ಹೇಳಬೇಕಾಗುತ್ತದೆ. ಆಮೂರ ಅವರಿದ್ದಾರೆ, ನಿಜ. ಆದರೆ ಕೃಷ್ಣಪ್ಪನವರು ಬೇಂದ್ರೆಯವರ ಕಾವ್ಯದ ಅನೇಕ ಕತ್ತಲಬಿಂದುಗಳ ಮೇಲೆ ಚೆಲ್ಲಿದ ಬೆಳಕನ್ನು ಗಮನಿಸಿ ಬೇಂದ್ರೆ ಪಂಡಿತರೆನಿಸಿದ ಆಮೂರರಲ್ಲದೆ, ಕೀರ್ತಿನಾಥ ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ ಅವರುಗಳೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ್ದಾರೆಂದರೆ, ಕೃಷ್ಣಪ್ಪನವರು ಬೇಂದ್ರೆಯವರ ಕಾವ್ಯಸಾಗರದ ಆಳವನ್ನು ಹೊಕ್ಕಿರುವ ಬಗೆ ಅರಿವಾಗುತ್ತದೆ. ಬೇಂದ್ರೆಯವರ ಕಾವ್ಯದಲ್ಲಿನ ಅನುಭಾವದ ಬಗ್ಗೆ ನನ್ನಂತಹವರಿಗೆ ಗಾಬರಿ, ಮಹಾ ವಿಮರ್ಶಕರೆನಿಸಿಕೊಂಡವರೂ ಬೇಂದ್ರೆಯವರ 'ಅರಳು-ಮರಳು' ಸಂಕಲನಕ್ಕಿಂತ ಹಿಂದಿನ ಕಾವ್ಯವನ್ನೇ ಹೆಚ್ಚಾಗಿ ವಿಶ್ಲೇಷಿಸುತ್ತಿದ್ದಾಗ, ಅದೇ ಬೇಂದ್ರೆಯವರ ನಿಜವಾದ ಕಾವ್ಯ

ಎನ್ನುತ್ತಿದ್ದಾಗ, ಕೃಷ್ಣಪ್ಪನವರು ಅವುಗಳೊಡನೆ ಆ ಮುಂದಿನ ಕವಿತೆಗಳನ್ನೂ ಅರ್ಥೈಸುವ ಪರಿ ಎಂಥವರನ್ನೂ ಬೆರಗುಗೊಳಿಸುವಂಥದು. ಅವರ ವ್ಯಾಖ್ಯಾನದ ಕೈದೀವಟಿಗೆಯ ಬೆಳಕಲ್ಲಿ ಬೇಂದ್ರೆ ಕಾವ್ಯದ ಕಗ್ಗತ್ತಲ ತಾಣಗಳು ಬೆಳಗುತ್ತವೆ, ಓದುಗನಿಗೆ ನಿಜವಾದ ಬೇಂದ್ರೆ ಕಾಣಸಿಕೊಂಡಂತಾಗುತ್ತದೆ.

ಈ ಸಂಕಲನದಲ್ಲಿಯೂ ಬೇಂದ್ರೆ ಕಾವ್ಯದ ಬಗ್ಗೆ ಮೂರು ಲೇಖನಗಳಿವೆ. ಅವು ಅವರ ಬೇಂದ್ರೆ ಪಾಂಡಿತ್ಯದ ಒಂದೆರಡು ಹನಿಗಳು ಮಾತ್ರ. ಮಿಕ್ಕ ಲೇಖನಗಳು ವಿವಿಧ ಲೇಖಕರ, ಬಿಡಿ ಹಾಗೂ ಸಮಗ್ರ, ಕೃತಿಗಳನ್ನು ಪರಿಚಯ ಮಾಡಿಕೊಡುವ ಪ್ರಯತ್ನಗಳಾಗಿವೆ. ಈಗಾಗಲೇ ಸ್ಪಷ್ಟಪಡಿಸಿದಂತೆ ಕೃಷ್ಣಪ್ಪನವರದು ಕೃತಿಯನ್ನು ತೂಕ ಮಾಡಲು ತಕ್ಕಡಿ ಹೊತ್ತ ಪರಿಶೀಲನೆಯಲ್ಲ, ಅವರನ್ನು ಅರ್ಥಮಾಡಿಕೊಳ್ಳಲು ಮಾಡಿದ ಪ್ರಯತ್ನಗಳು, ಕೃತಿಗಳನ್ನು ಓದುವಾಗ ತಮಗಾದ ಅನುಭವದ ನಿರೂಪಣೆ. ಪರಿಶೀಲನೆಗಾಗಿ ಇವುಗಳನ್ನು ಆಯ್ದುಕೊಂಡಿರುವುದೇ ಆಯಾ ಕೃತಿಕಾರರ ಮತ್ತು ಕೃತಿಗಳ ಬಗ್ಗೆ ಲೇಖಕರಿಗೆ ಆದರವಿದೆ ಎಂಬುದರ ಪ್ರತೀಕ. ಹೀಗಾಗಿ ತಮ್ಮ ನಚ್ಚಿನ ಕೃತಿಗಳ ವೈಶಿಷ್ಟ್ಯವನ್ನು ಇತರರ ಮುಂದೆ ಬಿಡಿಸಿ ಬಿಡಿಸಿ ತೋರಿಸುವುದು ಅವರ ಉದ್ದೇಶ, ಅದರಲ್ಲಿ ಅವರಿಗೆ ಸಂತೋಷ.

ಕೃಷ್ಣಪ್ಪನವರು ಕೃತಿ ಸಮೀಕ್ಷೆ ಮಾಡಿ ಆಯಾ ಲೇಖಕರ ಬರವಣಿಗೆಯ ಐನಾತಿ ಗುಣಗಳನ್ನು ಗುರುತಿಸುವ ಪರಿ ನೋಡಿ: ಬೇಂದ್ರೆಯವರ ಕಾವ್ಯದಲ್ಲಿನ ಸ್ತ್ರೀಯ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಬೇಂದ್ರೆಯವರು ಸ್ತ್ರೀ ಎಂದರೆ ಶಾಂತಿ-ಪ್ರೇಮಗಳ ಮೂರ್ತರೂಪ ಎಂಬ ಭಾವನೆಯನ್ನು ಹೊತ್ತಿದ್ದ ಪರಿಯನ್ನು ವಿವರಿಸುವುದು; ತೀನಂಶ್ರೀ ಅವರನ್ನು ಆರ್ದ್ರತೆಯಿಂದ ಸಾಹಿತ್ಯವಿಶ್ಲೇಷಣೆ ಮಾಡುವ ಸತ್‌ಪರಂಪರೆಯ ಹಿರಿಯರು ಎನ್ನುವುದು: ಅಕ್ಕಿ ಅವರ ಸಾಮಾಜಿಕ ಕವನಗಳದ್ದು 'ಜೋಳದ ಸತ್ತ್ವ, ಪೋಷಕದ್ರವ್ಯದ ಸಜ್ಜೆಯ ಖಡಕ್ ರೀತಿ' ಎಂದು ಬಣ್ಣಿಸುವುದು; ಉಕಾ ಸುಬ್ಬರಾಯಾಚಾರ್ ಅವರ ಬಗೆಗಿನ ಲೇಖನಗಳ ಸಂಗ್ರಹದಲ್ಲಿ ಎಲ್ಲರೂ ಅವರ 'ಬಿಳಿತನ'ವನ್ನು ಗುರುತಿಸುವ ರೀತಿಯನ್ನು ಕಾಣುವುದು; ಬೊಳುವಾರು ಮಹಮದ್ ಕುಞ್ಞ ಅವರು ತಮ್ಮ ಕತೆಗಳಲ್ಲಿ ಎತ್ತಿ ಹಿಡಿಯುವುದು 'ಭಾರತಧರ್ಮ'ವನ್ನು ಎನ್ನುವುದು; ತಿ.ತಾ. ಶರ್ಮರ ಆತ್ಮಕಥೆಯನ್ನು ವ್ಯಕ್ತಿತ್ವವೊಂದು ಸತ್ಯದ ಹಾದಿ ಹಿಡಿದು ವಿಕಾಸಗೊಂಡ ಘಟನೆಗಳ ಸರಮಾಲೆ ಎನ್ನುವುದು; ಚದುರಂಗರು ತಮ್ಮ 'ಹೆಜ್ಜಾಲ'ದ ಮೂಲಕ ಮರೆತುಹೋದ ಸಂಸ್ಕೃತಿಯೊಂದರ ಪುನರ್‌ನಿರ್ಮಾಣ ಮಾಡಿದ್ದಾರೆಂದು ಹೇಳುವುದು; ವಿಸಾಜಿ ಅವರು ನವೋದಯದ ಭಾವಲಹರಿಯ ಕವಿ ಎಂದು ಒಂದೇ ಮಾತಿನಲ್ಲಿ ಅವರ ವೈಶಿಷ್ಟ್ಯವನ್ನು ಸೆರೆಹಿಡಿಯುವುದು; ಸುಜನಾ ಅವರ ಕನ್ನಡಪರ ಕಾಳಜಿಯ ಹಿಂದಿನ 'ನಮ್ಮ ಜಮೀನನ್ನು ಉಳಿಸಿಕೊಂಡು ನಾವು ಬಾಳಬೇಕಾಗಿದೆ' ಎಂಬ ಎಚ್ಚರದ ದನಿಯನ್ನು ಗುರುತಿಸುವುದು; ಸೂಗಯ್ಯ ಹಿರೇಮಠರ ಕಾವ್ಯದ ಹಿಂದಿನ ಬಂಡಾಯದ ಧ್ವನಿಯಲ್ಲಿನ ವಿಭಿನ್ನ ನೆಲೆಯನ್ನು ಕಾಣುವುದು; ಕನಕದಾಸನನ್ನು ಕುರಿತ ತಮ್ಮ ಕೃತಿಯಲ್ಲಿ ಸುಧಾಕರ ಅವರು ಬಳಸುವ ಜಾನಪದ ಸೊಗಡಿನ ವಿಮರ್ಶಾ ಪರಿಭಾಷೆಯ

ಮೇಲ್ಮೆಯನ್ನು ಎತ್ತಿ ತೋರುವುದು–ಹೀಗೆ ಕೃಷ್ಣಪ್ಪನವರು ಕೃತಿಗಳ ನಾಡಿ ಹಿಡಿಯುತ್ತಾರೆ, ಓದುಗರು ಅವುಗಳನ್ನು ಕುರಿತು ಆಲೋಚಿಸುವಂತೆ ಮಾಡುತ್ತಾರೆ.

ಇಲ್ಲಿನ ಹಲವು ಲೇಖನಗಳು ದೀರ್ಘವಾಗಿ ಕೃತಿಕಾರರ ಸಮಗ್ರ ಕೃತಿಗಳನ್ನು ತಪಶೀಲಾಗಿ ವಿಶ್ಲೇಷಿಸುವುದಾಗಿದ್ದರೆ, ಮತ್ತೆ ಕೆಲವು ಸಂಕಲನಗಳ ಸಮೀಕ್ಷೆಗಳು, ಮತ್ತೂ ಕೆಲವು ಏಕಕೃತಿ ಪರಿಶೀಲನೆಗಳು. ಯಾವ ಬಗೆಯ ಪರಿಶೀಲನೆಯನ್ನೇ ನಡೆಸಲಿ, ಡಾ. ಕೃಷ್ಣಪ್ಪನವರು ತಮ್ಮ ಸಮಚಿತ್ತತೆಯನ್ನು ಕಳೆದುಕೊಳ್ಳುವುದಿಲ್ಲ. ಅದಕ್ಕೆ ಕಾರಣ ಅವರ ಸಹೃದಯತೆ, ಕೃತಿಗಳಲ್ಲಿನ ಒಳಿತನ್ನು ಹೀರಿಕೊಳ್ಳಬೇಕೆಂಬ ಹಂಬಲ. ವಿಮರ್ಶೆಯಲ್ಲಿ ಹಿಂದಿನ ಕೃತಿಕಾರರ ಬಗ್ಗೆ ಬರೆಯುವುದು ಸುಲಭ, ಆದರೆ ಸಮಕಾಲೀನರ ಬಗ್ಗೆ ಯಾರೇ ಬರೆಯಲಿ, ಅವರೆಷ್ಟೇ ಸಮತೂಕದವರಾಗಿರಲಿ, ಅವರ ವಿಮರ್ಶೆಯ ಹಿಂದೆ ಎಲ್ಲೋ ಒಂದು ಕಡೆ ಪೂರ್ವಾಗ್ರಹದ ಎಳೆಯೊಂದು ಏಕತಾರಿಯಂತೆ ಗುಂಯ್‌ಗುಡುವ ಸಂಭವವಿರುತ್ತದೆ. ಹೀಗಾಗಿ ಸಮಕಾಲೀನರ ಕೃತಿಗಳ ಬಗ್ಗೆ ಬೆಲೆಕಟ್ಟುವ ಗೋಜಿಗೆ ಹೋಗದೆ (ಸ್ಪರ್ಧೆಗಳಲ್ಲಿಯೋ, ಪ್ರಶಸ್ತಿ ನೀಡಬೇಕಾದ ಹೊಣೆ ಹೊತ್ತ ತೀರ್ಪು ನೀಡಬೇಕಾದಾಗಲೋ ಆದರೆ ಅದು ಬೇರೆ ವಿಚಾರ) ಬಂಡುಣುವ ಭ್ರಮರಗಳಾಗುವುದೇ ಶ್ರೇಯಸ್ಕರ. ಅಂಥ ಬಂಡುಣ್ಣುವ ಕೆಲಸವನ್ನು ಕೃಷ್ಣಪ್ಪನವರು ಮಾಡಿದ್ದಾರೆ, ತಮ್ಮ ಸದಭಿರುಚಿಯನ್ನು ಮೆರೆದಿದ್ದಾರೆ, ಆರ್ದ್ರಹೃದಯವನ್ನು ತೆರೆದಿದ್ದಾರೆ, ದಂಡಧಾರಿತನವನ್ನು ತೊರೆದಿದ್ದಾರೆ. ಅವರಿಗೆ ಒಳಿತಾಗಲಿ.

ಬೆಂಗಳೂರು　　　　　　　　　　　　　　　　ಪಿ. ವಿ. ನಾರಾಯಣ
ನವೆಂಬರ್ ೧೫, ೨೦೧೦

ಪ್ರಕಾಶಕರ ಮಾತು

ಪ್ರಕಾಶನ ಸಂಸ್ಥೆ ಕಟ್ಟಿ ಬೆಳೆಯಿಸುವುದು ಸುಲಭದ ಮಾತಲ್ಲ. ಒಂದೇ ದಿನದಲ್ಲಿ ಜಾದು ಮಾಡಿದಂತೆ ಬೆಳೆಯುವ ಕೆಲಸವಲ್ಲ. ದಿನನಿತ್ಯ ದುಡಿಯಬೇಕು. ಕಷ್ಟಪಟ್ಟು ಬೆಳೆಯಬೇಕು. ಆ ದಿಸೆಯಲ್ಲಿ ನಮ್ಮ ಯಜಮಾನರಾದ ಬಸವರಾಜ ಕೊನೇಕ್ ಅವರು ತಾವು ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೊ ಮತ್ತು ಪ್ರಕಾಶನ ಸಂಸ್ಥೆ ಹುಟ್ಟುಹಾಕಿ ಬೆಳೆಸಿದರಲ್ಲದೆ ನಮ್ಮನ್ನು ಬೆಳೆಯುವಂತೆ ಪ್ರೋತ್ಸಾಹಿಸಿ ಬಸವ ಪ್ರಕಾಶನವೆಂಬ ಸಹೋದರಿ ಸಂಸ್ಥೆಯನ್ನು ಬೆಳೆಯಿಸಲು ಸೂಕ್ತ ಮಾರ್ಗದರ್ಶನ ಮಾಡಿದರು. ಅವರ ಮಾರ್ಗದರ್ಶನದಲ್ಲಿ ನಮ್ಮ ಪ್ರಕಾಶನಕಾರ್ಯ ಸುಗಮವಾಗಿ ಸಾಗಿದೆ. ಆರೋಗ್ಯಕರವಾದ ಹಾಗೂ ಸ್ಪರ್ಧಾತ್ಮಕವಾದ ರೀತಿಯಲ್ಲಿ ಪುಸ್ತಕಗಳು ಮುದ್ರಿಸಿ ಮಾರುಕಟ್ಟೆಗೆ ಸರಬರಾಜು ಮಾಡುತ್ತಿದ್ದೇವೆ. ಹೀಗಾಗಿ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಹಾಗೂ ಎಲ್ಲ ಶಾಲಾ ಕಾಲೇಜುಗಳಿಗೆ ಹೆಚ್ಚು ಅನುಕೂಲವಾಗಿದೆ. ಈಗ ಎಲ್ಲರೂ ತೃಪ್ತಿಕರವಾಗಿದ್ದಾರೆ. ಅವರ ತೃಪ್ತಿಯೇ ನಮಗೆ ಪರಮ ಸಂತೋಷಕರವಾದ ಪ್ರಸಾದವೆಂದು ಭಾವಿಸುತ್ತೇವೆ. ಪುಸ್ತಕಗಳು ಓದುವ ಸಂಸ್ಕೃತಿ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಓದಗರಿಗೆ ಪುಸ್ತಕ ಓದುವಂತೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆಂದು ವಿನಮ್ರವಾಗಿ ತಿಳಿಸುತ್ತೇವೆ. ಜನಸಾಮಾನ್ಯರೂ ಓದಿ, ಅರ್ಥೈಸಿಕೊಂಡು ವಿಷಯದ ಸಾರವನ್ನು ತಿಳಿದುಕೊಳ್ಳಬೇಕೆಂಬ ಆಶಯದಿಂದ ಜನಪ್ರಿಯ ಮಾಲಿಕೆ, ದರ್ಶನ ಮಾಲಿಕೆ, ಮಕ್ಕಳ ಮಾಲಿಕೆ ಹಾಗೂ ಸಾಹಿತ್ಯ ಮಾಲಿಕೆ, ಪರಿಚಯ ಮಾಲಿಕೆ ಹೊರತರುತ್ತಲಿದ್ದೇವೆ. ಓದುವ ಸಂಸ್ಕೃತಿಗೆ ಇವು ಹೊಸ ಸೇರ್ಪಡೆಯಾದರೆ ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

ನಮ್ಮ ಪ್ರಕಾಶನದ ಬೆನ್ನೆಲುಬಾಗಿ ನಿಂತುಕೊಂಡ ಪರಾಮರ್ಶಕ ಹಾಗೂ ಪರಿಶೀಲನ ಸಮಿತಿ ಸದಸ್ಯರಿಗೆ, ಲೇಖಕ ಮಿತ್ರರಿಗೆ, ಸಾಹಿತಿ - ವಿದ್ವಾಂಸರಿಗೆ, ಓದುಗರಿಗೆ, ಕಾಲೇಜು ಪ್ರಾಂಶುಪಾಲರಿಗೆ, ಗ್ರಂಥಾಲಯ ಅಧಿಕಾರಿಗಳಿಗೆ, ಪುಸ್ತಕ ವ್ಯಾಪಾರಿ ಬಂಧುಗಳಿಗೆ, ಹಿತೈಷಿಗಳಿಗೆ, ಅಭಿಮಾನಿ ವರ್ಗಕ್ಕೆ, ಮುಖಪುಟ ವಿನ್ಯಾಸಕಾರರಾದ ಕೆ.ಕೆ. ಮಕಾಳೆ, ಕೃಷ್ಣ ರಾಯಚೂರು, ವಿ.ರಾಜ್, ಅವರಿಗೂ; ಅಕ್ಷರ ಜೋಡಣೆ ಮಾಡಿದ ಶ್ರೀಧರ್ ಹಾಗೂ ಸುಂದರವಾಗಿ ಮುದ್ರಿಸಿದ ವಿಶ್ವಾಸ್ ಪ್ರಿಂಟ್ಸ್‌ನ ಮಾಲೀಕರಿಗೂ ಹಾಗೂ ಸಿಬ್ಬಂದಿಯವರಿಗೆ, ಕೃತಜ್ಞತೆಗಳು ಸಲ್ಲಿಸುತ್ತೇವೆ.

ದೀಪಾವಳಿ, ಪಾಡ್ಯ
೨೦೧೦

ಶ್ರೀಮತಿ ಬಸಮ್ಮ ಬ. ಕೊನೇಕ್
ಪ್ರಕಾಶಕರು

ಪ್ರಸ್ತಾವನೆ

ಜನರ ಜೀವನವನ್ನು ಸಂಸ್ಕಾರಗೊಳಿಸುವ ಕವಿ, ಸಾಹಿತಿಗಳ ಕೃತಿಗಳು ಈ ನಾಡಿನ ಪುಣ್ಯವಾಗಿದೆ. ಅಲ್ಲಿ ವ್ಯಕ್ತವಾದ ಸೂಕ್ಷ್ಮಭಾವಗಳು, ಬೌದ್ಧಿಕ ಪರಿಣತಿಯ ಕುಶಲ ಕಲಾಶೈಲಿಯನ್ನು ಕಂಡು ಅದರ ಆಂತರ್ಯವನ್ನು ನನ್ನದಾಗಿಸಿಕೊಳ್ಳಲು ಪ್ರಯತ್ನಿಸಿದಾಗ ರೂಪುಗೊಂಡ ವಿಮರ್ಶೆ ಇಲ್ಲಿದೆ. ಇದು ಕೃತಿಗಳ ಆಶಯವನ್ನು ಸಹೃದಯ ಓದುಗರಿಗೆ ತಿಳಿಯುವಂತೆ ಮಾಡುವ ಒಂದು ಕಿರುಪ್ರಯತ್ನ. ನನ್ನ ಈ ವಿಮರ್ಶಾ ಲೇಖನಗಳನ್ನು ಪ್ರಕಟಿಸಿದ ಸಂಯುಕ್ತ ಕರ್ನಾಟಕ, ಜಾಣಗೆರೆ ಪತ್ರಿಕೆ, ಬಹುಜನ ಕನ್ನಡಿಗರು, ಅಭಿವ್ಯಕ್ತಿಯ ಸಂಪಾದಕರುಗಳಿಗೆ ವಂದಿಸುವೆ. ನನ್ನ ಗುರುಗಳಾದ ಡಾ. ಕೆ. ಅನಂತರಾಮು, ಡಾ. ವಾಮನ ಬೇಂದ್ರೆ ಪ್ರೊ. ಸುಧಾಕರ ಮತ್ತು ಡಾ. ಎಂ. ಬಸವಣ್ಣ ಅವರ ಮಾರ್ಗದರ್ಶನಕ್ಕೆ ಸದಾ ಋಣಿಯಾಗಿರುವೆ.

ಕನ್ನಡ ನಾಡು ನುಡಿಯ ಚಿಂತಕರಾಗಿ ಯುವಕರಲ್ಲಿ ಕನ್ನಡತನವನ್ನು ರೂಪಿಸುತ್ತಿರುವ ಡಾ. ಪಿ.ವಿ. ನಾರಾಯಣ ಅವರು ಈ ಕೃತಿಗೆ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರ ಪ್ರೀತಿ ದೊಡ್ಡದು. ಅವರಿಗೆ ನನ್ನ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಗುಲ್ಬರ್ಗದಲ್ಲಿ ಕನ್ನಡ ಕೃತಿಗಳನ್ನು ಪ್ರಕಾಶನ ಮಾಡಿ ಕನ್ನಡ ಕೈಂಕರ್ಯವನ್ನು ಒಂದು ವ್ರತದಂತೆ ನಡೆಸಿಕೊಂಡು ಹೋಗುತ್ತಿರುವ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆಯ ಶ್ರೀ ಬಸವರಾಜ ಕೊನೆಕ್ ಅವರಿಗೆ ನನ್ನ ಕೃತಜ್ಞತೆಗಳು. ಈ ಕೃತಿಯ ಅಕ್ಷರ ಜೋಡಣೆ ಮಾಡಿದ ಶ್ರೀಧರ್, ಅಂದವಾಗಿ ಮುದ್ರಿಸಿದ ವಿಶ್ವಾಸ್ ಪ್ರಿಂಟ್ಸ್ ಅವರಿಗೆ ವಂದನೆಗಳು. ಈ ವಿಮರ್ಶಾ ಲೇಖನಗಳನ್ನು ಸಹೃದಯ ಸಾಹಿತ್ಯಾಸಕ್ತರು ಓದಿ ನನ್ನನ್ನು ಪ್ರೋತ್ಸಾಹಿಸಬೇಕೆಂದು ಪ್ರಾರ್ಥನೆ.

ನಂ. ೨೨, ಶ್ರೀಗುರುದತ್ತ ನಿಲಯ
೧ನೇ ಕ್ರಾಸ್, ನೇತಾಜಿ ನಗರ
ಮತ್ತೀಕೆರೆ, ಬೆಂಗಳೂರು ೫೬೦ ೦೫೪
ಮೊಬೈಲ್: ೯೯೭೨೧೦೯೨೦೯

ಡಾ. ಜಿ. ಕೃಷ್ಣಪ್ಪ

ಪರಿವಿಡಿ

ಬೇಂದ್ರೆ ಕಾವ್ಯ: ಅನುಭವ ಮತ್ತು ಅನುಭಾವ

ಭವವು ಬೇಕು, ಅನುಭವವು ಬೇಕು, ಅನುಭಾವ ಬೇಕು ಒಳಗೆ
ಸ್ವಯಂಭುತ್ವದಾ ಜ್ಞಾನಬೇಕು, ಆ ಧೀಸಮಾಧಿ ಬೆಳಗೆ[೧]

ಎಂಬ ವಚನದಲ್ಲಿ ಬೇಂದ್ರೆಯವರು ಭವದಿಂದ ಪಡೆದ ಅನುಭವವು ಅನುಭಾವವಾಗುವುದು ತನ್ನ ಆಂತರ್ಯದ ಬೆಳಕಿನಲ್ಲಿ ಎಂದು ಹೇಳಿದ್ದಾರೆ. ಬೇಂದ್ರೆಯವರು 'ಭಾವಗೀತ' ಪ್ರಕಾರದ ಪ್ರಮುಖ ಕವಿಗಳು. " 'ಭಾವದ ಮೂಲಾರ್ಥ ಇರುವಿಕೆ.' ಇದರ ನಿಷ್ಪತ್ತಿಗೆ ಅನುಗುಣವಾಗಿ ಸಂಸ್ಕೃತದಲ್ಲಿ ಇದರ ಅರ್ಥಗಳು ಅನೇಕವಾಗಿವೆ.... ಇವುಗಳಲ್ಲಿ ಮುಖ್ಯವೂ ಪ್ರಸ್ತುತವೂ ಆದದ್ದು 'ಚಿತ್ತವೃತ್ತಿ'."[೨] ಭವವನ್ನು ಮೈದುಂಬಿಸಿಕೊಂಡು ಅದರ ವಿಭಿನ್ನ ಮುಖವನ್ನು ನುಡಿಯಲ್ಲಿ ಅನಾವರಣಗೊಳಿಸುವ ಸೌಂದರ್ಯಾನುಭವವೇ 'ಭಾವಗೀತೆ'. ತನ್ನನ್ನು ತೀವ್ರವಾಗಿ ಕಾಡಿದ ವಸ್ತುವನ್ನು ಧ್ಯಾನಸ್ಥನಾಗಿ ಆಲೋಚಿಸುತ್ತ ರಸಾನಂದಕ್ಕೆ ಒಳಗಾಗಿ ಅದನ್ನು ಆತ್ಮಗತವಾಗಿಸಿಕೊಳ್ಳುವುದು ಅನುಭವ. "ಅನುಭವಕ್ಕೂ ಅನುಭಾವಕ್ಕೂ ಒಂದು ದೊಡ್ಡ ಭೇದವಿದೆ. ಅನುಭವವು ಜಗತ್ತಿನ ಕಾರಣವನ್ನು ಹುಡುಕುತ್ತಿದೆ; ಅನುಭಾವವು ಜಗತ್ತಿನ ಕರ್ತೃವನ್ನೆ ಹುಡುಕುತ್ತಿದೆ."[೩] "ಅನುಭಾವವು ಒಳಗಿನ ಭಾವ ಪರಿಪಾಕವು. ಅದರಿಂದ ಜೀವನ ಸಾಕ್ಷಿರೂಪದ ಆಳವೇ ಬೇರೆ ನೆಲೆಗಾಣುವುದು"[೪] ಎಂಬುದು ಬೇಂದ್ರೆಯವರ ಚಿಂತನೆ.

ಬೇಂದ್ರೆಯವರ ಅನುಭಾವ ಗಟ್ಟಿಗೊಂಡದ್ದು ಭಾರತೀಯ ಸಂತ ಪರಂಪರೆಯಿಂದ. ಅವರ ಕಾವ್ಯ ಆ ಪರಂಪರೆಯ ಮುಂದುವರಿದ ಕೊಂಡಿಯಂತಿದೆ. ಅವರು ಸಂತಕವಿ. ಬೇಂದ್ರೆಯವರ ಬಾಲ್ಯ ಸ್ತ್ರೀಪೋಷಿತವಾದುದು. ಅವರ ಅಜ್ಜಿ ಗೋದೂಬಾಯಿ ಮತ್ತು ತಾಯಿ ಅಂಬವ್ವ ಶ್ರೀ ಬ್ರಹ್ಮಚೈತನ್ಯರ ಶಿಷ್ಯರಾಗಿದ್ದರು. ಅವರ ಮನೆಯಲ್ಲಿ ಸದಾ ನಡೆಯುತ್ತಿದ್ದ ಚಿದಂಬರ ಭಜನೆ ಮತ್ತು ರಾಮಭಜನೆ, ದೈವೀ ಗ್ರಂಥಗಳ ಪಠಣ ಅವರನ್ನು ಭಕ್ತಿಮಾರ್ಗದತ್ತ ಕೊಂಡೊಯ್ದಿತು. ಬೇಂದ್ರೆಯವರಿಗೆ ತಾಯಿಯೇ ಬೆಳಕು, ತಾಯಿಯೇ ಜ್ಞಾನ. ಹಾಗಾಗಿ ಅವರು ಬಾಲ್ಯದಿಂದ ಬೆಳಕಾದ ತಾಯಿಯನ್ನು ಆರಾಧಿಸುತ್ತ ಹೀಗೆ ನುಡಿದರು:

ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆವೆವು.[೫]

ತಾಯಿಯ ಬೆಳಕು ಎಂಬುದೊಂದು ಅನುಭಾವ. ಅದರ ವಿಸ್ತೃತರೂಪ ಅನಂತಶಕ್ತನನ್ನು ಕುಟುಂಬದ ಹೊರಗಡೆ ಪ್ರಕೃತಿಯಲ್ಲಿ, ಜನಜೀವನದ ಸತ್ಯ ನಡೆಯಲ್ಲಿ, ತನ್ನ ಆತ್ಮಶೋಧದಲ್ಲಿ ಕಾಣುವುದಾಗಿದೆ. ಬೇಂದ್ರೆಯವರು ತನ್ನ ಗುರುಗಳನ್ನು 'ಗುರುಚತುರ್ಮುಖ' ಲೇಖನದಲ್ಲಿ ಹೀಗೆ ನೆನೆದಿದ್ದಾರೆ.

ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್[೬]

ಈರೀತಿ ಕವಿ ರವೀಂದ್ರ ಮತ್ತು ಯೋಗಿ ಅರವಿಂದರನ್ನು ಕಾವ್ಯದಲ್ಲಿ ಬಣ್ಣಿಸಿ, ಇನ್ನೀರ್ವರು ಗುರುಗಳಾದ ಅಯರಿಶ್ ಕವಿ ಜಾರ್ಜ್‌ರಸಲ್ (A.E.) ಮತ್ತು ಖಲೀಲ್ ಜಿಬ್ರಾನ್‌ರನ್ನು "'ಏ, ಈ' ಕವಿ ನನ್ನ ಜೀವನದ ಲೋಲಕವಲ್ಲಿ ಕಿರಣದಂತೆ ಸೇರಿದ್ದಾನೆ; ಜಿಬ್ರಾನ ನನಗೆ ಎಣ್ಣೆಮಜ್ಜನ ಮಾಡಿಸಿ ಎರೆದು, ತೊಟ್ಟಿಲ ನಿದ್ರೆಯಲ್ಲಿಯೇ ಕನಸಿನ ಆಕಾಶಕ್ಕೆ ಎತ್ತೆತ್ತಿ ಒಯ್ದಿದ್ದಾನೆ"[೭] ಎಂದು ಗದ್ಯದಲ್ಲಿ ಚಿತ್ರಿಸಿದ್ದಾರೆ.

ಬೇಂದ್ರೆಯವರು ಪಡೆದ ತಾಯಿಯ ವಾತ್ಸಲ್ಯವನ್ನೇ ಅರವಿಂದ ಶ್ರೀಮಾತೆಯವರಲ್ಲಿ ಕಂಡು ಅವರಿಗೆ ತನ್ನನ್ನು ಪೂರ್ಣವಾಗಿ ಸಮರ್ಪಿಸಿಕೊಂಡರು. ವಾತ್ಸಲ್ಯದ ಅರಿವೇ ಅವರ ಜೀವನದ ಶ್ರುತಿಯಾಗಿ, ವಾತ್ಸಲ್ಯರೂಪಿ ಪರಬ್ರಹ್ಮನಲ್ಲಿ ಲೀನವಾಗಿ ಅನುಭಾವದ ನೆಲೆಗೆ ಏರಿತು. ಅವರಿಗೆ ಮಾತೆಯೇ ಮಾತು, ಮಾತೇ ಮಾತೆಯಾಯಿತು. ಅದನ್ನೇ ಅವರು ತಮ್ಮ ಜೀವನದ ಆದರ್ಶವಾಗಿಸಿಕೊಂಡು ಕಾವ್ಯದಲ್ಲಿ ಬೆಳಗಿಸಿ ಕಾವ್ಯರ್ಷಿಯಾದರು.

* * *

ಬೇಂದ್ರೆಯವರು ಧಾರವಾಡದಲ್ಲಿ ಒಂದು ಬಡ ಸಾಧಾರಣ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಆ ನೆಲದ ಜನಪದರಲ್ಲಿ ಒಂದಾಗಿ ಬೆಳೆದವರು. ಅವರು ಮಡಿ ಮೈಲಿಗೆ ರಹಿತವಾಗಿ ಎಲ್ಲ ಬಗೆಯ ಜನರೊಡನೆ ಚಿಣಿಪಣಿ, ಚೆಂಡು, ಬುಗರಿ, ಗಾಳಿಪಟ, ಕುಸ್ತಿ ಕಲಿತು ಬೆಳೆದವರು. ಅವರು ತಿಪ್ಪೆಯಲ್ಲಿ ಬೆಳೆದ ಮಾವನ್ನು, ಪೀಪಿಯಾಗಿಸಿಕೊಂಡು ಊದಿ ಅದರ ನಾದವನ್ನು ತನ್ನಲ್ಲಿ ಮೈದುಂಬಿಸಿಕೊಂಡವರು.

ತೇಯ್ದದ್ದೆ ತೇಯ್ದದ್ದು ತುಟಿಗೆರೆ ಬಿಚ್ಚಿರಲು
ಉಸಿರೆ ಆಗುವದಣ್ಣಾ ಸಾಕಾರವು!
ಯಾವ ತಿಪ್ಪೆಯ ಬಸಿರ ಬಿರುಕಿಗೆ ಮೂಡಿತ್ತೊ
ಮಾವಿನ ಪೀಪಿಯ ಆಕಾರವು?[೮]

ರವದಿ, ಕಡ್ಡಿ ಮತ್ತು ತಿಪ್ಪೆಯ ಬಸುರಿನ ಮಾವುಗಳು ಅವರ ಕೈಯಲ್ಲಿ ಸಾಧಾರಣದಿಂದ ಅಸಾಧಾರಣ ಅಂತಸ್ತಿಗೆ ಏರುತ್ತಿದ್ದವು. ಇದು ಬಡತನದ ಮುಕ್ತಬಾಲ್ಯದ ಬೇಂದ್ರೆ ಮನಸ್ಸು ಶುದ್ಧ ಅಶುದ್ಧ, ನೀಚ ಉಚ್ಚ, ಬಡತನ ಸಿರಿತನ, ವೇಶ್ಯೆ ಗೃಹಿಣಿ, ಶೂದ್ರ ಬ್ರಾಹ್ಮಣಗಳ

ಸೋಂಕಿಗೆ ಒಳಗಾಗದೆ ಎಲ್ಲವನ್ನೂ ಗ್ರಹಿಸುತ್ತ ಅದರ ಗುಣಗೌರವವನ್ನು ತನ್ನದಾಗಿಸಿಕೊಂಡಿದ್ದರ ಪ್ರತೀಕವಾಗಿದೆ. ಆ ಬಾಲ್ಯದ ನಾದದ ಅನುಭವವೇ ಬೇಂದ್ರೆಯವರ ಕಾವ್ಯದಲ್ಲಿ 'ನಾದಲೀಲೆ'ಯಾಗಿ ಹರಿದು ನಾದದ ಭಾವಾನಂದದಲ್ಲಿ ಅನುಭಾವದತ್ತ ಸಾಗಿದೆ.

ನಾದಬೇಕು ನಾದಬೇಕು
ನಾದಾನ ನಾದಬೇಕು
ನಾದಕ್ಕೆ ಪ್ರತಿ ನಾದಬೇಕು
ನಾದನs ಆದಮ್ಯಾಲೆ ಬ್ಯಾರೆಯಾಕ ವಾದ ಬೇಕು?

ಗುರುಶಿಷ್ಯರ ಸಂವಾದ ಬೇಕು
ಅಭೇದಲ್ಲಾ ಭೇದ ಬೇಕು
ಭೇದಾಭೇದ ಅಭೇದ ಬೇಕು
ನಾದ ಬೇಕು ನಾದ ಬೇಕು ಕೊನೆತನಕಾನೂ ನಾದ ಬೇಕು

ಅಂತರಂಗದಾ ಶೋಧ ಬೇಕು
ಪರಬ್ರಹ್ಮದಾ ಬೋಧ ಬೇಕು
ಎಂದಿಗು ಶ್ರೀಗುರು ಪಾದ ಬೇಕು
ನಾದ ಬೇಕು ನಾದ ಬೇಕು ತುದಿ ಮುಟ್ಟಾನು ನಾದ ಬೇಕು[೯]

ಬೇಂದ್ರೆಯವರಿಗೆ ಮುಸಲ್ಮಾನರ ಹೆಣದ ಮೆರವಣಿಗೆ ಬಗೆಗೆ ತುಂಬಾ ಗೌರವ. ತಡೆರಹಿತ ಬಾಲ್ಯದಲ್ಲಿ ಕಂಪಿಗೆ, ಸತ್ಯಕ್ಕೆ, ಆನಂದಕ್ಕೆ ಮನಸ್ಸು ತೆರೆದುಕೊಂಡಿರುತ್ತದೆ. ಅಲ್ಲಿ ಜಾತಿ, ಮತ, ಪಂಥದ ಕೆಸರು ಅಂಟಿರುವುದಿಲ್ಲ. ಅಂತಹ ಬಾಲ್ಯದ ಅನುಭವವನ್ನು ಬೇಂದ್ರೆಯವರು ಇಳಿವಯಸ್ಸಿನಲ್ಲಿ ಮೆಲುಕು ಹಾಕುವಾಗ ಚಿತ್ರಿಸಿರುವುದು ಮುಸಲ್ಮಾನರಲ್ಲಿ ತುಂಬಾ ಹಿಂದುಳಿದ ಪಂಗಡದವರೆಂದು ಕರೆಯುವ ಪೆಂಡಾರಿ ಸಾಬನ ಮೆರವಣಿಗೆ. ಅದು ಬೇಂದ್ರೆಯವರು ಸಾಧಾರಣರಲ್ಲಿ ಸಾಧಾರಣರನ್ನು ಪ್ರೀತಿಸುತ್ತಿದ್ದುದರ ದ್ಯೋತಕ. ಅವನ ಘೋರ ಬಡತನ, ಅಸಹಾಯಕ ಸ್ಥಿತಿಯ ರೀತಿ ಸಾವಿಗೆ ಕಾರಣವಾಗಿರುವುದನ್ನು ಬೇಂದ್ರೆಯವರು ಹೀಗೆ ಚಿತ್ರಿಸಿದ್ದಾರೆ.

ಊದು ಬತ್ತಿಯ ಕಂಪು ಕಲ್ಮಾದ ದನಿ ಇಂಪು
ಕಳಿಸಲು ಬರುತ್ತಿತ್ತು ಹತ್ತು ಜನ
ಹ್ಯಾಂಗಾರೆ ಸತ್ತರು ಶೃಂಗಾರವಾಗಿದ್ದ
ಪೆಂಡಾರಿ ಸಾಬನು ಕೊನೆಯ ದಿನ[೧೦]

'ಹ್ಯಾಂಗಾರೆ ಸತ್ತರು' ಎಂಬ ನುಡಿಯಲ್ಲಿ ಅವನ ಜೀವನದ ಎಲ್ಲಾ ದೈನ್ಯ ಮಡುಗಟ್ಟಿದೆ. ಬೇಂದ್ರೆಯವರು–ಬ್ರಾಹ್ಮಣ ಸತ್ತರೆ ಅವನ ಹಿಂದೆ ಯಾರೂ ಅಳುವವರಿರುವುದಿಲ್ಲ.

ಸ್ಮಶಾನಕ್ಕೆ ಹೆಂಗಸರು ಮಕ್ಕಳು ಬರುವಂತಿಲ್ಲ. ಆ ಹೆಣವನ್ನು ಹೊತ್ತುಕೊಂಡವರಲ್ಲಿ ಹಸಿವಿನ ಬಾಧೆಯಿಂದ ಪ್ರೇತಕಳೆ ಆವರಿಸಿತ್ತು–ಎಂದು ಸಾವನ್ನು ಪ್ರೇತವಾಗಿ ಕಾಣುವ ಮನಸ್ಸನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಹಾರುವನು ಸತ್ತರೆ ಬೆನ್ಗುಂಟ ಅತ್ತರೇ
ಹೊತ್ತವರ ಮುಖದಲ್ಲು ಪ್ರೇತಕಳೆ[೧೧]

ಇದು ಬಾಲಕ ಬೇಂದ್ರೆಯವರಲ್ಲಿ ಜಾತ್ಯಾತೀತ ಮನೋಭಾವ ರೂಢಿಗೊಂಡ ಬಗೆ. ಇದು ಬೇಂದ್ರೆಯವರು ಭವವನ್ನು–ತನ್ನ ಪಂಚೇಂದ್ರಿಯಗಳು ಗ್ರಹಿಸಿದ್ದನ್ನು ಅನುಭವವಾಗಿ ಅಭಿವ್ಯಕ್ತಿಸಿರುವ ರೀತಿ. ಅದು Sense Perception. ಆದರೆ ಆ ಅನುಭವಗಳ ಚಿಂತನೆಯಲ್ಲಿ ಕಾವುಗೊಂಡ ಮನಸ್ಸು ತಾನು ಹೇಳಲಾಗದ, ಅಭಿವ್ಯಕ್ತಿ ಪಡಿಸಲಾಗದ ತರಂಗಗಳ ಪ್ರಭಾವಕ್ಕೆ ಒಳಗಾಗುತ್ತದೆ. ಅದಕ್ಕೆ Sensory basis ಇರುವುದಿಲ್ಲ. ಅದು ಅನುಭಾವ. ಅದಕ್ಕೆ ಅನುಭವದ ಹಿನ್ನೆಲೆ ಇದ್ದರೂ ಅದನ್ನು ಮೀರಿದ್ದು. ವಾಲ್ಮೀಕಿ ಮಾನಿಷಾಧ –ಎಂಬ ಅಂತಃಕರಣದ ಅನುಭಾವಕ್ಕೆ ಒಳಗಾದದ್ದು. ಅದು ದೇಶ, ಕಾಲ, ನಿಮಿತ್ತವನ್ನು ಮೀರಿದ ಅನಂತಶಕ್ತನ ಅರಿವಿನತ್ತ ಸಾಗಿದ ಚಿಂತನೆ. ಅದು ಜಾತಿ, ಮತ, ಪಂಥ, ಧರ್ಮದ ಎಲ್ಲೆ ಮೀರಿದ ವಿಶ್ವಮಾನವ ನೆಲೆಯ ಅಚಿಂತ್ಯಾನುಭವ. ಅದು ಬೇಂದ್ರೆಯವರಲ್ಲಿ ಕಾವ್ಯವಾಗಿ ಪ್ರಕಟಗೊಂಡಿದ್ದು ಹೀಗೆ:

ಭವದ ಬೆನ್ನಲಿ ಅನುಭವ ಬಂತು, ಅನುಭಾವ
ಭಾವದ ತಳಿಯಲ್ಲಿ ಮೈದೋರಿತು
ಸಹಾನುಭೂತಿಗೆ ಸ್ವಾನುಭೂತಿಯು ಕೂಡಿ
ಉದ್ಭವ ವಿಭೂತಿಯು ಒಡಮೂಡಿತು[೧೨]

* * *

ಪ್ರಕೃತಿಯನ್ನು ಚೈತನ್ಯಮಯವಾಗಿಸುವ ಶ್ರಾವಣದಲ್ಲಿ ಒಂದಾದ ಬೇಂದ್ರೆಯವರ ಮನಸ್ಸು ಆ ಮಾಸವು ಸೃಷ್ಟಿಸುವ ಧಾರ್ಮಿಕ ವಾತಾವರಣದಲ್ಲಿ 'ಸಣ್ಣ ಸೋಮವಾರ' ಕವನವನ್ನು ರಚಿಸಿದೆ. ಅದು ಅವರು ಬಾಲ್ಯದಲ್ಲಿ ಮೈದುಂಬಿಸಿಕೊಂಡ ಕುಣಿತ, ಉಲ್ಲಾಸ, ಧಾರವಾಡ ಪ್ರಕೃತಿ, ಜನಸಾಮಾನ್ಯರ ಭಕ್ತಿಯಾಗಿದೆ. ಅದು ನಿಸ್ವಾರ್ಥ, ನಿರಪೇಕ್ಷ ಭಾವದಲ್ಲಿ ಈ ನಾಡಿನ ದುಡಿವ ಜನ ಶ್ರೀಸಾಮಾನ್ಯರು ನಮ್ರತೆಯಿಂದ ನಿಶ್ಚಲಮನದವರಾಗಿ ಪ್ರಾರ್ಥಿಸುವ ರೀತಿ. ಅದು ಏಕಮನದವರಾಗಿ ಧ್ಯಾನಿಸುತ್ತ ತಮ್ಮನ್ನು ತಾವು ಆ ಅನಂತಶಕ್ತನಿಗೆ ಸಮರ್ಪಿಸಿಕೊಂಡಾಗ ದೊರಕುವ ನೆಮ್ಮದಿ, ಶಾಂತಿ. ಆಸ್ತಿಕಶ್ರದ್ಧೆಗೆ ಒಳಗಾದ ಜನಪದರ ಅನುಭವ ಇಲ್ಲಿ ಮಡುಗಟ್ಟಿದೆ.

ಬಂತಣ್ಣ ಸಣ್ಣ ಸೋಮವಾರ
ಕಾಣಬೇಕಣ್ಣ ಸೋಮೇಶ್ವರ॥

ಗರ್ಭಗುಡಿಯೊಳಗ ಲಿಂಗ
ನಿದ್ದಿಯೊಳಗ ನೋಡಿಧಾಂಗ
ಕಣ್ಣುಮುಚ್ಚತಾವ ನಮೋ ಎಂದು.

ಗವಿಯೊಳಗಿನ ದಾರಿ
ಹರದಾರಿ ಹರದಾರಿ
ಮಿಂಚಿತ್ತು ಚಂದ್ರಕ್ವಾರಿ ಒಂದು

ನಿಂತ ಮೈಯಾಗಿ ಖಂಬ
ಸೋರ್ಯಾವ ಜಂಬಗಿಂಬ
ಹಿಡಿದಾನ ಕೈಯ್ಯ ಶಿವನೆ ಬಂದು[೧೩]

ಭಕ್ತಿಯಲ್ಲಿ ಮಿಂದು, ಶ್ರಾವಣದ ಮಳೆಯಲ್ಲಿ ತೋಯ್ದುಹೋದ ಬೇಂದ್ರೆಯವರ ಐಂದ್ರಯಿಕ ಸೌಂದರ್ಯಾನುಭವವು ಕಾಲ್ಪನಿಕ ಸೌಂದರ್ಯದಲ್ಲಿ ತೇಲಾಡಿ, ಬೌದ್ಧಿಕವಾಗಿ ನುಡಿದಿದೆ

ಹರ ಹರ ಮಹಾದೇವಾ
ಈಸಾಡತಾವ ಜೀವಾ
ಮಾನಸ ಸರೋವರ ಹೊಕ್ಕು[೧೪]

* * *

'ನವೆನವೆದರೂನು ಸವಿದೋರುತ್ತಿತ್ತು ನಿನ್ನಾಟ ಪಾಟ। ಉಕ್ಕಂದಾ । ಆನಂದಾ'[೧೫] ಎಂದು ತೀರಿಹೋದ 'ಆನಂದ' ಎಂಬ ಹೆಸರಿನ ತಮ್ಮ ಒಂಬತ್ತನೇ ಮಗುವನ್ನು ಕುರಿತು ಬೇಂದ್ರೆಯವರು ಕಾವ್ಯರಚಿಸಿದ್ದಾರೆ. ಆ ವಾತ್ಸಲ್ಯದ ಸವಿಯನ್ನು ನೆನೆದು ದುಃಖಪಡುವಾಗಲೇ ಬೇಂದ್ರೆಯವರು 'ಈ ಸಾವು ಒಂದು ಹೊಸಭಾವವಾಗಿ ತೆರೆದಿಹುದೊ ಲೋಕ । ಬೇರೊಂದಾ ಆನಂದಾ' ಎಂದು ನುಡಿದಿರುವುದು ಅವರಲ್ಲಿಯ ಅಪರೂಪ ಅನುಭಾವವಾಗಿದೆ. ಸಾವಿನಲ್ಲಿಯೂ ಒಂದು ಹೊಸ ಭಾವಸೃಷ್ಟಿಯನ್ನು ಕಾಣುವ ಬೇಂದ್ರೆಯವರು ಚರಮಗೀತೆಯನ್ನು ಪ್ರಾರ್ಥನಾಗೀತೆಯಾಗಿ ರಚಿಸಿದ್ದಾರೆ. ಪ್ರತಿ ಚರಣದ ಕೊನೆಯಲ್ಲಿ ಅನುರಣಿಸುವ 'ಆನಂದಾ' ಶಬ್ದವು–ಸಾವು ಆನಂದ ರೂಪವಾಗಲಿ ಎಂದು ಆಶಿಸುತ್ತದೆ.

ಜೀವನಗತಿಯ ಸಾವಿನಲ್ಲೂ ಆನಂದಕ್ಕೆ ಪ್ರಾರ್ಥಿಸುವ ಬೇಂದ್ರೆ ಪರಿಯನ್ನು ನೋಡಿದರೆ ಬಾಳಿನಲ್ಲಿ ಅರಳುವಿಕೆಗಾಗಿ ಆಶಿಸುವ ಕವಿಚೈತನ್ಯದ ದರ್ಶನವಾಗುತ್ತದೆ.

* * *

ನನ್ನ ಅಧ್ಯಯನದ ಪ್ರಕಾರ ಬೇಂದ್ರೆಯವರ ಕಾವ್ಯದಲ್ಲಿ ಅನುಭಾವವು ಎರಡು ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ. ಒಂದು ಜಾನಪದ ಕಿರು ಸಂಸ್ಕೃತಿಯ ಮಾತೃಶಕ್ತಿ ಆರಾಧನೆ ಹೊಂದಿದ ಶ್ರದ್ಧೆ, ಭಕ್ತಿ, ಸಮರ್ಪಣೆಯ ದೇಸಿ ಚಿಂತನೆ; ಇನ್ನೊಂದು ಪ್ರಧಾನ ಸಂಸ್ಕೃತಿಯ ವೇದ ಉಪನಿಷತ್ತು, ಯೋಗಶಾಸ್ತ್ರಗಳ ಮಾರ್ಗದ ಆಲೋಚನೆ.

ಜಾನಪದ ಹಿನ್ನೆಲೆಯಲ್ಲಿ ತಾತ್ವಿಕ ಚಿಂತನೆಯು ಮೂರ್ತಿರೂಪಗೊಳ್ಳುತ್ತದೆ. ಬೇಂದ್ರೆಯವರ ದೇಸಿ ಚಿಂತನೆಯು ಜಾನಪದ ನಂಬಿಕೆ, ಮಾತೃತತ್ವ, ಪುರಾಣ ಕಲ್ಪನೆಯ ಮಿಥ್ ಆಗಿದೆ. ನಮ್ಮ ದೇಶದ ಜಾನಪದ ಸಂಸ್ಕೃತಿಯಲ್ಲಿ ಶಕ್ತಿದೇವತೆಯ ಆರಾಧನೆ ಒಂದು ಮಿಥ್. ವಿಶ್ವದಲ್ಲಿ ಹಲವು ಗೋಚರ ಮತ್ತು ಅಗೋಚರ ಸತ್ಯಗಳಿವೆ. ಮಿಥ್ ಆಯಾ ನಾಡಿನ ಸಾಂಸ್ಕೃತಿಕ ಪರಿಸರದಲ್ಲಿ ಪೌರಾಣಿಕ ಹಿನ್ನೆಲೆಯಲ್ಲಿ ಪ್ರತಿಭಾಪೂರ್ಣವಾಗಿ ಮೂಡಿ ಬಂದ ನಂಬಿಕೆ. ಅದು ಸಂಕೀರ್ಣ ಭಾವದ ಮನುಷ್ಯನಿಗೆ ಸಾಂತ್ವನ ನೀಡುವ ಶಕ್ತಿ. ಜಾನಪದ ಪ್ರತಿಭೆಯ ಬೇಂದ್ರೆ ತನ್ನ ತಾಯಿಯನ್ನು ಕುರಿತು ಹೇಳುವಾಗ 'ತಾಯಿ ನಿನ್ನ ಮುಂದೆ ದೇವನಾವ?' ಎಂದು ಪ್ರಶ್ನಿಸಿದ್ದಾರೆ. ಅವರು ವಿಶ್ವಮಾತೆ, ಭೂಮಿತಾಯಿ, ಭಾರತಮಾತೆ, ಕನ್ನಡ ತಾಯಿ ಮತ್ತು ತನ್ನನ್ನು ಹಡೆದ ತಾಯಿ ಅಂಬಿಕೆಯರನ್ನು ಆರಾಧಿಸಿದ್ದಾರೆ. 'ಈ ಐದು ಐದೆಯರೆ ಪಂಚಪ್ರಾಣಗಳಾಗಿ ಈ ಜೀವದೇಹನಿಹನು' ಎಂದು ತನ್ನ ಸೃಷ್ಟಿಯ ಹಿಂದಿರುವ ಮಾತೃಶಕ್ತಿಯನ್ನು ಅನನ್ಯವಾಗಿ ವರ್ಣಿಸಿದ್ದಾರೆ.

ಬೇಂದ್ರೆಯವರು 'ಧಾರವಾಡದ ತಾಯಿ', 'ಓ ತಾಯಿ-ಮಾಯಿ', 'ಯಾವೂರಾಕಿ ನೀ ಮಾಯಕಾರತಿ?' ಮುಂತಾದ ಕವನಗಳಲ್ಲಿ ಜಗನ್ಮಾತೆ ತಾಯಿಗೆ ತನ್ನ ಇತಿಮಿತಿಯನ್ನು ನಿವೇದಿಸಿಕೊಳ್ಳುತ್ತ ಅವಳ ಲೌಕಿಕ ರಕ್ಷಣಾಸೂತ್ರದಲ್ಲಿ ಒಂದಾಗಿದ್ದಾರೆ. ಅಂತಹ ಶಕ್ತಿದೇವತೆಯಲ್ಲಿ ಮುಚ್ಚುಮರೆಯಿಲ್ಲದೆ–ತಾನು ಈ ದೇಹದ ಸುಖದಲ್ಲಿ ಮುಳುಗಿ ಪಡೆವ ಸುಖವನ್ನು ತಿಳಿಸುತ್ತ–ಅದರಿಂದ ಹೊರ ಬರಲಾಗದ ತವಕವನ್ನು ವ್ಯಕ್ತಪಡಿಸುತ್ತ, ಅದರಿಂದ ಮುಕ್ತನಾಗಲು ನಿನ್ನ ಕೃಪೆ ಬೇಕೆಂದು ಪ್ರಾರ್ಥಿಸಿರುವುದು ಶುದ್ಧ ಜಾನಪದ ರೀತಿಯಾಗಿದೆ. ಅನುಭವದ ಅನುಸಂಧಾನದಲ್ಲಿ ಅದರ ಸಿಹಿಕಹಿ, ಉಪ್ಪು ಒಗರಿನ ಅಂಟು ಅವರ ಕಾವ್ಯದಲ್ಲಿ ಸಹಜವಾಗಿ ಅನಾವರಣವಾಗಿದೆ. ಅವರ ಕಾವ್ಯ ಜೀವನಾನುಭವದ ಶ್ರೀಮಂತಿಕೆಯಿಂದ ಕೂಡಿದ್ದು ನೋವು ಬಸಿದು ಪಡೆದ ಜೀವದ್ರವ್ಯವಾಗಿದೆ. 'ಶುದ್ಧನಿದ್ದವಗೆದ್ದ' ಎಂಬ ಅವರ ಚಿಂತನೆ ಅನುಭವದಲ್ಲಿಯೇ ಕುಡಿಯೊಡೆದು ಪಲ್ಲವಿಸಿದ ಕಂಪು. ಬೇಂದ್ರೆಯವರು ಧಾರವಾಡದ ತಾಯಿ ದುರ್ಗೆಯನ್ನು ಪ್ರಾರ್ಥಿಸುತ್ತ:

> **ಧಾರವಾಡದ ತಾಯೇ । ನನಗಾ । ಧಾರ ನಿನ್ನದಲ್ಲದಿಲ್ಲ**
> **ಭಾರ ನಿನ್ನ ಮೇಲೆ ಇರಲು । ಯಾರಿಗಾರು ಎಂಬರೇನ**[೮]

ಎಂದು ಶರಣುಹೋಗಿ ತನ್ನಲ್ಲಿಯ ಅಹಂ ಮತ್ತು ಕಾಮದ ಕತ್ತಲಿನಿಂದ ಪಾರಾಗಲು ಪ್ರೇಮವಾಹಿನಿಯಾದ ತಾಯಿ ದುರ್ಗೆಯು ತನ್ನಲ್ಲಿ ಹರಿಯಬೇಕೆಂದು ನಿವೇದಿಸಿಕೊಂಡಿದ್ದಾರೆ.

ಮರ್ಗೆಯ ಪ್ರೇಮ ತನ್ನನ್ನು ಶುದ್ಧಗೊಳಿಸುತ್ತದೆ ಎಂಬ ಭಾವನೆ ಬೇಂದ್ರೆಯವರ ಅಂತರ್ಯದ ಮನಸ್ಸು ಭೌತಿಕಶುದ್ಧಿಗೆ ಒಳಗಾದದ್ದನ್ನು ಸೂಚಿಸುತ್ತದೆ. ತಾಯಿಯನ್ನು ಆರಾಧಿಸಲು ಶ್ಲಾಘಿಸಲು ತೊಡಗುವುದೇ ಜನಪದರು ತಾಯಿಗೆ ತೋರಿಸುವ ಕೃತಜ್ಞತೆಯಾಗಿದೆ. ದೇಹದ ಭೌತಿಕಾನುಭವದಿಂದ ದೂರ ಹೋಗಿ ಏನನ್ನೋ ತಿಳಿದೆ ಎನ್ನುವುದು ಜಾನಪದರಲ್ಲಿ ಇಲ್ಲ. ಅದು ಈ ನೆಲದ ಸುಖದಲ್ಲಿ ಇದ್ದೇ ಅದರಿಂದ ದೂರ ಸಾಗುವ ಸಾಧನಾಪಥ. ಅದಕ್ಕೆ ಜಗನ್ಮಾತೆ ತಾಯಿಯ ಆಶೀರ್ವಾದ ಬೇಕು. ಲೌಕಿಕದ ಸಂಭ್ರಮದಲ್ಲಿಯೇ ಅದನ್ನು ನಿಯಂತ್ರಿಸುತ್ತ ಅಲೌಕಿಕದತ್ತ ಮುಖ ಮಾಡುವುದು ಜನಪದರ ಆತ್ಮಶೋಧ.

ಬೇಂದ್ರೆಯವರು ಈ ಮೃಣ್ಮಯ ಶರೀರವು ಚಿನ್ಮಯದತ್ತ ಸಾಗುವಾಗ ಅದಕ್ಕೆ ಶ್ರೀರಕ್ಷೆಯಾಗಿರುವ ಮಾತೃಶಕ್ತಿಯನ್ನು ಕುರಿತು 'ಓ ತಾಯಿ-ಮಾಯಿ'[೧೬] ಕವನವನ್ನು ರಚಿಸಿದ್ದಾರೆ. ಅದನ್ನು ವಿಮರ್ಶಿಸುತ್ತ ಶಂಕರ ಮೊಕಾಶಿ ಪುಣೇಕರ ಅವರು 'ಕೇವಲ ಕಿರಿಯಾಳ ಬುದ್ಧಿಯವರು ಕೊನೆಯವರೆಗೆ ವ್ಯಕ್ತಿವಿಶಿಷ್ಟತೆಯನ್ನು ಸವಿಯುವರು. ಅನುಭವ ಹೆಚ್ಚಿದಂತೆ ಸ್ವಕೇಂದ್ರಿತ ಮನೋವೃತ್ತಿಗಳ ಅಸತ್ಯರಮ್ಯತೆಗೆ, ಮಾಯಾಜಾಲಕ್ಕೆ ಬೇಸತ್ತು ಕವಿ ತನ್ನ ಚಿರ ಆತ್ಮವಂತಿಕೆಯನ್ನು ತನ್ನದೇ ಮನಸ್ಸಿನ ಆಳದಲ್ಲಿಯೂ ತನ್ನ ಸಮಾಜ ಸಂಸ್ಕೃತಿಗಳಲ್ಲಿಯೂ ಮಡುಕಾಡತೊಡಗುತ್ತಾನೆ''[೧೮] ಎಂದು ಹೇಳಿದ್ದಾರೆ.

ಓ ತಾಯಿ, ಮಾಯಿ, ಶಿವಜಾಯಿ, ಕಾಯಿನನ! ಯಾಕ ತೆರೆವೆ ಬಾಯಿ?
ಯಾ ಹಾದಿಲಿಂದ ನಾ ಹೋದರೇನು ಆಗ್ತೇನ ಅಲ್ಲೆ ನಾಯಿ.
ಪ್ರತಿ ರೋಮಕೂಪದಾಗ ಕಾಮ ತುಂಬಿ ತುಳಕ್ಯಾಡತಽದ ಇಲ್ಲಿ
ನೀ ಜಪ್ಪಿಸಿರಲು ನಿನ ತಪ್ಪಿಸ್ಯಾರೆ ನಾ ಹೋಗಬಲ್ಲೆನೆಲ್ಲಿ?

ತನ್ನನ್ನು ನೇರ್ಪಡಿಸು ಎಂದು ಮಾತೃಶಕ್ತಿಗೆ ಸಮರ್ಪಿಸಿಕೊಳ್ಳುತ್ತ, ಸಾಧಕ ತನ್ನನ್ನು ತಾನು ಸರಿಪಡಿಸಿಕೊಂಡು ತಾಯಿಯ ಮರೆಹೊಕ್ಕಾಗ ಆಕೆ ಅವನನ್ನು ಮಗುವಿನಂತೆ ಮುದ್ದಾಡುತ್ತಾಳೆ. ಅದು ಅವನಿಗೂ ಬೇಕಾಗಿದೆ.

ನೀನು ಕೂಡ ಕೈಮರಿಗೆ ನಕ್ಕು ಕಣ್‌ಕೆಂಪು ಮಾಡಬೇಕು
ಏ ಸುಳ್ಳು ಅಂತ ತಪ್ಪಿದರ ತೊರಿದು ನನ ತಂಪು ಮಾಡಬೇಕು

* * *

ಪ್ರಧಾನ ಸಂಸ್ಕೃತಿಯ ಮಾರ್ಗ ಕಾವ್ಯದಲ್ಲಿ ತಾತ್ತ್ವಿಕತೆಯ ವಿಚಾರವು ಅಮೂರ್ತವಾಗಿದೆ. ಆ ಅನುಭವವನ್ನು ವಿಶಿಷ್ಟ ಪ್ರತಿಮೆ, ರೂಪಕಗಳಲ್ಲಿ ನೀಡಿರುವುದು ಬೇಂದ್ರೆಯವರ ಪ್ರತಿಭೆ. ಅವರ ಅಧ್ಯಾತ್ಮ ಚಿಂತನಾಕವನಗಳನ್ನು ಮಾಸ್ತಿಯವರು 'ಬುದ್ಧಿಯ ಅಥವಾ ಆತ್ಮದ ಅರಿವನ್ನು ಕೊಡುವ ಗೀತ' ಎಂದು ಕರೆದಿದ್ದಾರೆ.

ಬೇಂದ್ರೆಯವರ 'ಏಳು ಕನ್ನಿಕೆಯರು' ಕವನವು ನಿದ್ದೆ ಎಚ್ಚರ, ಲೌಕಿಕ ಅಲೌಕಿಕ, ನೈತಿಕ ಅನೈತಿಕ, ಏಳು ಬೀಳುಗಳ ದ್ವಂದ್ವಗಳಿಂದ ಕೂಡಿದೆ. ಆ ದ್ವಂದ್ವ ಸಂಘರ್ಷ ಮನೋಭಾವಗಳ ತಾಕಲಾಟದಲ್ಲಿ ತಾತ್ವಿಕ ಚಿಂತನೆ ಅಡಗಿದೆ. ಕವಿಯು ನಿದ್ದೆಗಡಲಿನಲ್ಲಿರುವಾಗ ಏಳು ಕನ್ನಿಕೆಯರು ಬಂದು 'ಏಳು' ಎಂದು ಎಬ್ಬಿಸುವರು. ಆಗ ಕವಿಯು ಆ ದೇವತೆಗಳ ದಿವ್ಯಸನ್ನಿಧಿ ತನಗೆ ದೊರಕಿತೆಂದು ಏಳುತ್ತಾರೆ. ಆ ದೇವತೆಗಳು ದೀಪಮಾಲೆ ಕಂಬದಂತೆ ಸುತ್ತುವರಿದಿದ್ದಾರೆ. ಆ ತೇಜ ಅಡೆತಡೆ ಇಲ್ಲದೆ ಹರಿಯುತ್ತಿರಲು ಅದನ್ನೇ ಒರಗಿ ಆ ಬೆಳಕಿನ ಕುಡಿ ಕುಡಿಯಲು ತಾನು ಗೊಮ್ಮಟನಂತೆ ನಿಲ್ಲುತ್ತಾರೆ. ಗೊಮ್ಮಟ ಪ್ರತಿಮೆಯು ಜಿತೇಂದ್ರಿಯತ್ವದ, ವೀರ, ತ್ಯಾಗ, ಊರ್ಧ್ವಗಾಮಿತ್ವದ ಅಧ್ಯಾತ್ಮ ಸಂಕೇತವಾಗಿದೆ.

ನಿಂತೆ ನಡುವೆ ಗೊಮ್ಮಟನೊಲು
ನಿರಂತರವನು ಒರಲಿಸುತ್ತು
ದೀಪಮಾಲೆ ಕಂಬದಲ್ಲಿ
ದೀಪದ ಕುಡಿ ಕುಡಿಯಲೋ
ದೀಪದ ಕುಡಿ ಕುಡಿಯೊಲು[೧೯]

ಸಾಧನಾಮಾರ್ಗ ಎಂಬುದು ಎಲ್ಲ ಲೌಕಿಕವಾದ ಸಾಂಸಾರಿಕ, ಭೌತಿಕ ಆಸೆ ಆಕಾಂಕ್ಷೆಗಳ ತೇವಾಂಶಗಳನ್ನು ಇಲ್ಲವಾಗಿಸಿಕೊಂಡ ಗರಿಗರಿಯಾದ ಹಂಸಮಾರ್ಗ. ಆ ನೆಲೆಯಲ್ಲಿ ಸಾಧಕ ತನಗೆ ಅಂಟಿದ ದ್ರವರೂಪಿ ಮನಃಕಷಾಯದಿಂದ ಮುಕ್ತನಾಗಲು 'ಬೊಟ್ಟು ನೀರು ಬಿಡದ ಹಾಗೆ। ಬಟ್ಟೆಯಂತೆ ಹಿಂಡುತಿರಲು' ಏಳು ಕನ್ನಿಕೆಯರಲ್ಲಿ ಒಬ್ಬಳು ಅವನ ಏರು ಮನಸ್ಸನ್ನು ತೀವ್ರ ಪರೀಕ್ಷೆಗೆ ಒಳಪಡಿಸುತ್ತಾಳೆ.

ತೊಡೆಯು ಮೀಂಟಿ ಬಿಟ್ಟಳಾಗ
ಕಡೆಗೆ ಅವರೊಳೊಬ್ಬಳೋ
ಕಡೆಗೆ ಅವರೊಳೊಬ್ಬಳು

ಆ ಕ್ಷಣವೆ ಜಂಗಮಸ್ಥಿತಿಯಲ್ಲಿ ಸಾಧನಾಮಾರ್ಗಕ್ಕೆ ಮೇಲ್ಮುಖವಾದ ಮನಸ್ಸನ್ನು ಹೊತ್ತ ಸ್ಥಾವರರೂಪಿ ಮೃಣ್ಮಯ ಶರೀರ ತನ್ನ ನೆಲದ ಗುಣದಿಂದ ಅಲುಗಾಡಿ ಹೋಗುತ್ತದೆ. ಲೈಂಗಿಕ ಆಸೆಗೆ ಒಳಗಾಗುತ್ತದೆ. ಆ ರಸಾನಂದದ ನೆಲೆಗೆ ಏರದಿರಲು ತನ್ನೊಳಗಿನ ವಿರಸಭಾವವೇ ಕಾರಣ. ದೇಹ ಮನಸ್ಸು ಎರಡನ್ನೂ ಹದಗೊಳಿಸುವ ಅನುಭವ ಆಗ ಆಗಿರಲಿಲ್ಲ ಎಂಬ ನುಡಿ ಹೊಮ್ಮಿ ಸಾಧಕನಿಗೆ ಇರಬೇಕಾದ ಎಚ್ಚರವನ್ನು ಈ ಕಾವ್ಯ ತಿಳಿಸುತ್ತದೆ.

'ನಾದಲೀಲೆ', 'ಅರಳುಮರಳು', 'ನಾಕುತಂತಿ', ಮುಂತಾದ ಕಾವ್ಯಗಳಲ್ಲಿ 'ಆತ್ಮಜ್ಞಾನಸಿದ್ಧಿಯಿಂದ ಮಾನವನು ಪರಿಣತ ಪ್ರಜ್ಞನಾಗಿ ಇಹಲೋಕದಲ್ಲಿಯೇ ದೇವಸದೃಶನಾಗುವದು ದೈವೀ ಪ್ರಕೃತಿಯ ಸಂಕಲ್ಪವೇ ಆಗಿದೆ'[೨೦] ಎಂಬ ಅರಿವಿನೊಡನೆ, ಶ್ರೀಮಾತಾ ಅರವಿಂದರ ಚಿಂತನೆಯ ಅಡಿಯಲ್ಲಿ ಬೇಂದ್ರೆಯವರು ನೀಡಿದ ಅಚಿಂತ್ಯಾನುಭವದ ರಸಲಹರಿ ಇದೆ.

ಅವರು ರಚಿಸಿದ ಅಂತಹ ಕವನಗಳಲ್ಲಿ 'ಹೃದಯ ಸಮುದ್ರ'ವು 'ಶ್ರೀ ಅರವಿಂದರ ಅತಿಮಾನ ಸಾಕ್ಷಾತ್ಕಾರದಿಂದ ಬಂದ ಸಂಸಾರೋತ್ತರ ಕರೆಯನ್ನೇ ನೆನೆಸಿ ಈ ಭಾವಲಹರಿ ಉತ್ಕಟತೆಯೆನ್ನು ತಾಳಿದೆ'[೨೧] ಎಂಬ ಭಾವ ಸಂದರ್ಭ ಹೊಂದಿದೆ.

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ
ಮಿಂಚು ಬಳಗ ತೆರೆತೆರೆಗಳಾಗಿ ಅಲೆಯುವದು ಪುಟ್ಟ ಪೂರಾ
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊ ಧೀರಾ
ಆದರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲವಣ್ಣ ದೂರಾ.

* * *

ಇದು ಉಪ್ಪುನೀರ ಕಡಲಲ್ಲೊ, ನಮ್ಮ ಒಡಲಲ್ಲು ಇದರ ನೆಲೆಯು
ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳಿದದ ಇದರ ಬೆಲೆಯು
ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ ಒಡೆಯುವದು ಇದರ ಸೆಲೆಯು
ಕಣ್ಣರಳಿದಾಗ ಕಣ್ ಹೊರಳಿದಾಗ ಹೊಳೆಯುವದು ಇದರ ಕಳೆಯು.

ಟಾಲ್‌ಸ್ಟಾಯ್ ಅವರು 'Without Mysticism there can be no poetry Without poetry mysticism is superstition' ಎಂದು ಹೇಳಿದ್ದಾರೆ. ಅಧ್ಯಾತ್ಮದ ಗೂಢವನ್ನು ಹೊಂದಿದ ಕಾವ್ಯ ಸಹೃದಯನನ್ನು ಚಿಂತನಶೀಲನನ್ನಾಗಿಸಿ ಅವನು ಅಂತರಾತ್ಮದ ಶೋಧಕ್ಕೆ ಒಳಗಾಗುವಂತೆ ಮಾಡುತ್ತದೆ. ಬೇಂದ್ರೆಯುವರು ಆತ್ಮಾನುಭವವನ್ನು ನಮ್ಮದಾಗಿಸಿಕೊಳ್ಳಬಹುದು ಎಂಬ ಧನಾತ್ಮಕ ಭಾವದಲ್ಲಿ – ಅಪರ ವಿದ್ಯಾದಾಹಿಯನ್ನು ತಮ್ಮ ಕಾವ್ಯಗಾರುಡಿಯಿಂದ ಸೆಳೆದಿದ್ದಾರೆ. ಮೇಲೆ ಉದ್ಧರಿಸಿರುವ 'ಹೃದಯಸಮುದ್ರ' ಕಾವ್ಯದಲ್ಲಿ 'ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳಿದದ ಇದರ ಬೆಲೆಯು' ಎಂಬಲ್ಲಿ ಮೊದಲ ಪದ ಕಂಡವರು ಎಂದರೆ ಸಿಕ್ಕಸಿಕ್ಕವರು, ಇದರ ಅನುಭವವೆ ಇಲ್ಲದ ಇತರರು, ಪರರು. ಅಂತಹ ಜನಗಳಿಗೆ ಪರಾರ್ಥದ ಅರಿವು ಸಾಧ್ಯವಿಲ್ಲ. ಅದು ತಿಳಿಯುವುದು 'ಕಂಡವರಿಗಷ್ಟೆ'. ಅಂದರೆ 'ಆಹುದೊ ಅಲ್ಲವೊ ನಾವು ಕಂಡ ಕಾಣ್ಕೆಯ ದೈವ'[೨೨] ಎಂಬ ದರ್ಶನ. ಆ ಅನುಭವ ಸಿಕ್ಕಸಿಕ್ಕವರಿಗೆ ಸಿಕ್ಕಿದ ಕಡೆ ಎಲ್ಲ ದೊರಕುವಂತಹದಲ್ಲ. ನೀರಿಗಾಗಿ ಬಾವಿ ತೋಡುವ ರೈತ ಎಷ್ಟೇ ಆಳವಾದರೂ ಸರಿ ತೋಡುತ್ತ ಜಲಹರಿವ ಜಲಗಣ್ಣು ಹೊಂದಿದ–ಸಿಕ್ಕಲ್ಲು–ಸಿಕ್ಕಾಗ ಗುದ್ದಲಿಯ ಹೊಡೆತದಿಂದ ಚಿಮ್ಮಿಸುವ ನೀರು. ಸಾಧನಾಪಥದಲ್ಲಿ ಸಿಕ್ಕಲ್ಲು–ಆಧ್ಯಾತ್ಮದ ಸೆಲೆ–ಸಿಗುವವರೆಗೂ ಸಾಧನೆ ಬಿಡದೆ ಮುಂದುವರಿಯುವ ಸಾಹಸ. ಸಾಧನಾಮಾರ್ಗದಲ್ಲಿ ಸಾಗಲು ಸಾಧಕನಿಗೆ ಬೇಕಾದ 'ಓಂ'ಕಾರದಂತಹ ಚಿಂತನೆಯನ್ನು ಬೇಂದ್ರೆಯವರು ಕನ್ನಡದಲ್ಲಿ 'ನಾಕುತಂತಿ'ಯಾಗಿ ನೀಡಿದ್ದಾರೆ.

‘ನಾನು’ ‘ನೀನು’
‘ಆನು’ ‘ತಾನು’
ನಾಕೇ ನಾಕು ತಂತಿ[೨೪]

‘ನಾನು’ ಎಂಬುದು ಅಹಂ. ‘ನೀನು’ ಎಂಬುದು ದೇಹದ ಮಮತೆ. ಅವುಗಳನ್ನು ಜಯಿಸಲು ನಿತ್ಯಾನಿತ್ಯ ವಿವೇಕಿಯಾಗಿ, ತನ್ನ ಸ್ವಾರ್ಥವನ್ನು ತ್ಯಜಿಸಿ ಭೋಗವಿರಾಗಿಯಾಗಿ, ಶಮದಮಾದಿ ಸಂಯಮವನ್ನು ಸಾಧಿಸಬೇಕು. ಆಧ್ಯಾತ್ಮವಿದ್ಯೆಯ ಸೂಕ್ಷ್ಮ ಅಧ್ಯಯನ ಮಾಡುತ್ತ ಅನುಭವಿ ಗುರುಗಳ ದಾಸನಾಗಿ ಅಚಿಂತ್ಯಾನುಭವವನ್ನು ತಿಳಿಯಬೇಕು. ಆಗ ‘ನಾನು’, ‘ನೀನು’ವನ್ನು ವರ್ಜಿಸಿಕೊಂಡು ‘ತಾನು’ ಎಂಬ ಆತ್ಮನಿಂದ ‘ಆನು’ ಎಂಬ ಪರಮಾತ್ಮನನ್ನು ಕಾಣುವುದೇ ಅನುಭಾವ. ಬೇಂದ್ರೆಯವರ ‘ನನ್ನೀ ನುಡಿ ನನ್ನೀ ನುಡಿ ದೇವರ ಒಡನಾಡಿ’ ಎಂಬ ಕಾವ್ಯದ ಸಾಲು ಲೋಕದ ಸತ್ಯವನ್ನು ಆತ್ಮವಿಶ್ವಾಸದಿಂದ ತನ್ನದಾಗಿಸಿಕೊಂಡು ನುಡಿಯುವುದೇ ಅನುಭಾವ ಎಂದು ತಿಳಿಸುತ್ತದೆ. ಅದು ದೇವರ ಒಡನಾಡಿ. ದೇವರ ಒಡನಾಡಿಯಾಗುವವನು ಆತ್ಮವಿಕಾಸಮಾರ್ಗಿಯಾಗಿ ಸಚ್ಚಿದಾನಂದವನ್ನು ಪಡೆಯುವುದನ್ನು ಯೋಗಿ ಅರವಿಂದರು ಹೀಗೆ ಸ್ಪಷ್ಟಪಡಿಸಿದ್ದಾರೆ.

'But with the extension of our knowledge we discover what this Spirit or oversoul is, it is ultimately our own highest deepest Vastest Self, it is apparent on its summits or by reflection in ourselves as Sachchidananda creating us and the world by the power of His divine Knowledge- will spiritual, suparmental, truth-conscious infinite.'[೨೫]

ದಾನ ಇಲ್ಲದ ದತ್ತ ಇಲ್ಲ
ಧ್ಯಾನ ಇಲ್ಲದ ಗತ್ತ ಇಲ್ಲ
ನಿನ್ನ ಬಿಟ್ಟು ಮತ್ತ ಇಲ್ಲ
ಬಾ ಹೊಕ್ಕಳದಿಂದ ಹೀಂಗ ಬಂದದ್ದೇ ಛಂದ[೨೬]

ಎಂದು ‘ಓಂ’ಕಾರದ ಧ್ಯಾನದಲ್ಲಿ ಲೀನವಾಗಲು ಸಾಧಕನು ‘ನಾನು’ ಎಂಬ ‘ಅಹಂ’ನಿಂದ ಮುಕ್ತವಾಗಿ ಯೋಗಮಾರ್ಗವನ್ನು ಅನುಸರಿಸಬೇಕು. ಅವನು ತನ್ನ ದೇಹದಲ್ಲಿ ನಾಗವೇಣಿಯಂತಿರುವ ಕುಂಡಲಿನಿಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಲು ಷಟ್‌ಚಕ್ರಗಳ ಉನ್ಮೀಲನಕ್ಕೆ ಒಳಗಾಗಬೇಕು. ಅದು ಜಗತ್ತಿಗೆ ಸೃಷ್ಟಿ ಶಕ್ತಿಯನ್ನು ತರುವ ಶ್ರಾವಣದಂತೆ, ಶ್ರವಣ ಪ್ರತಿಭೆ (Auditory Imagination) ಯಂತೆ ಸೂಕ್ಷ್ಮಾತಿಸೂಕ್ಷ್ಮವಾದುದು ಎಂಬುದು ಬೇಂದ್ರೆಯವರ ಚಿಂತನೆಯಾಗಿದೆ.

ತನುಮನ ಘನ ಪ್ರಾಣಿಯಾಗಿ
ಜತೆಗು ನಾಗವೇಣಿಯಾಗಿ
ಪಥದಲಿ ತತ್ ತ್ರಾಣಿಯಾಗಿ

ಬಿನ್ನಾಣದ ಶ್ರೇಣಿಯಾಗಿ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.[೨]

ಮೂಲಾಧಾರ, ಸ್ವಾದಿಷ್ಠಾನ, ಮಣಿಪುರ, ಅನಾಹತ, ವಿಶುದ್ಧಿ, ಆಜ್ಞಾ ಚಕ್ರಗಳ ಮೂಲಕ ಸಹಸ್ರಾರದಲ್ಲಿ ಕಂಡ ಪ್ರಕಾಶ ಸಾಧಕನಿಗೆ ಒಂದು ಅನುಭಾವ.

ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ;

ಬೆಚ್ಚಿದ ವೆಚ್ಚವು
ಬಸುರಿನ ಮೊಳಕೆ
ಬಚ್ಚಿದ್ದಾವುದೊ
ನಾ ತಿಳಿಯೆ

'ಅದು ಜೇನು ಹುಟ್ಟಿನಂತಹ ಸೃಷ್ಟಿ', ಅಂತಹವರ ಫಲವೆಂದರೆ 'ಜೇನಿನ ಥಳಿಮಳಿ'. ಸಿಹಿ ತಳಿಯ ಮಳೆ ಅರ್ಥಾತ್ ಅಮೃತವರ್ಷ. ಅದು ಹತ್ತಿರದಲ್ಲೆ 'ಸನಿಹ ಹನಿ'ಯಾಗಿ ಅಮೃತಧಾರೆಯ ಬಿಂದುಗಳನ್ನು ತೊಟ್ಟಿಕ್ಕುವ ಆನಂದವೃಷ್ಟಿ. ಅಂತಹ ಬ್ರಹ್ಮ ಸೃಷ್ಟಿಯಲ್ಲಿ ಬೆಸುಗೆಗೊಂಡ ಜೀವಾತ್ಮಗಳು (ಬೆಚ್ಚಿದ ವೆಚ್ಚವು) ಮುಕ್ತಿಯ ಅಥವಾ ಸಾಕ್ಷಾತ್ಕಾರಕ್ಕಾಗಿ ಅಂಕುರಗೊಂಡಿವೆ. (ಬಸುರಿನ ಮೊಳಕೆ). ಅಂಥ ಸಾಕ್ಷಾತ್ಕಾರದ ದಿವ್ಯ ಕ್ಷಣದಲ್ಲಿ ಬಚ್ಚಿಟ್ಟಿದ್ದೇನು, ಮುಚ್ಚಿಟ್ಟಿದ್ದೇನು ಎಂಬ ಯಾವ ಪರಿವೆಯೂ ಜೀವಾತ್ಮನಿಗೆ ಇರುವುದಿಲ್ಲ. ಅಂದರೆ ಅವನು ಆನಂದ ತುಂದಿಲನಾಗಿರುತ್ತಾನೆ, ಸಚ್ಚಿದಾನಂದ ಸ್ವರೂಪಿಯಾಗಿರುತ್ತಾನೆ.[೫]

ಅಡಿಟಿಪ್ಪಣಿಗಳು:

೧. ದ.ರಾ. ಬೇಂದ್ರೆ, ಅರಳು-ಮರಳು, ಶ್ರೀಮಾತಾ ಪ್ರಕಾಶನ, ಧಾರವಾಡ ೧೯೯೫ ಪು. ೩೪೮

೨. ಜಿ.ಎಸ್. ಶಿವರುದ್ರಪ್ಪ ಮತ್ತು ಕೆ.ವಿ. ನಾರಾಯಣ (ಸಂ.), ಕಾವ್ಯಾರ್ಥ ಪದಕೋಶ, ಕಾಮಧೇನು, ಬೆಂಗಳೂರು ೧೯೯೯, ಪು. ೧೫೫

೩. ದ.ರಾ. ಬೇಂದ್ರೆ, ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪, ಪು. ೬೪

೪. ಅದೇ ಪುಟ ೬೫

೫. ದ.ರಾ. ಬೇಂದ್ರೆ, ಅರಳು-ಮರಳು, ಪೂರ್ವೋಕ್ತ ಪುಟ. ೩೪೨

೬. ದ.ರಾ. ಬೇಂದ್ರೆ, ಸಾಹಿತ್ಯದ ವಿರಾಟ್ ಸ್ವರೂಪ, ಪು. ೧೨೦
೭. ಅದೇ ಪು. ೯೮
೮. ದ.ರಾ. ಬೇಂದ್ರೆ, ಮತ್ತೆ ಶ್ರಾವಣ ಬಂತು, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೩, ಪು. ೯
೯. ದ.ರಾ. ಬೇಂದ್ರೆ, ಅರಳು-ಮರಳು, ಪೂರ್ವೋಕ್ತ, ಪುಟ. ೩೮೨
೧೦. ದ.ರಾ. ಬೇಂದ್ರೆ, ಮತ್ತೆ ಶ್ರಾವಣ ಬಂತು, ಪೂರ್ವೋಕ್ತ ಪುಟ. ೧೩
೧೧. ಅದೇ, ಪುಟ ೧೩
೧೨. ಅದೇ, ಪುಟ ೭
೧೩. ದ.ರಾ. ಬೇಂದ್ರೆ, ಮುಗಿಲ ಮಲ್ಲಿಗೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೧, ಪು. ೨೩
೧೪. ಅದೇ
೧೫. ದ.ರಾ. ಬೇಂದ್ರೆ, ಹಾಡು-ಪಾಡು, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೬, ಪು. ೪೩
೧೬. ದ.ರಾ. ಬೇಂದ್ರೆ, ಅರಳು-ಮರಳು, ಪೂರ್ವೋಕ್ತ, ಪುಟ. ೪೨೬
೧೭. ಅದೇ, ಪುಟ ೧೪೧
೧೮. ಶಂಕರ ಮೊಕಾಶಿ ಪುಣೇಕರ, ಓ ತಾಯಿ-ಮಾಯಿ; ಇಳಿದು ಬಾ ತಾಯಿ (ಸಂ.) ಬುದ್ದಣ್ಣ ಹಿಂಗಮಿರೆ, ಸಾಹಿತ್ಯ ಮಂಟಪ ಹುಬ್ಬಳ್ಳಿ ಮತ್ತು ಸಮಾಜ ಪುಸ್ತಕಾಲಯ, ಧಾರವಾಡ, ೧೯೭೨, ಪು. ೪೬೨
೧೯. ದ.ರಾ. ಬೇಂದ್ರೆ, ನಾದಲೀಲೆ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೯ ಪು.೫
೨೦. ದ.ರಾ. ಬೇಂದ್ರೆ, ಮುನ್ನುಡಿ, ಭಾರತೀಯ ನವಜನ್ಮ, ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ವಿಜಾಪುರ ಜಿಲ್ಲೆ, ೧೯೪೭, ಪು. vi
೨೧. ದ.ರಾ. ಬೇಂದ್ರೆ, ಅರಳು-ಮರಳು, ಪೂರ್ವೋಕ್ತ ಪುಟ. ೧೨೫
೨೨. ಟಾಲ್‌ಸ್ಟಾಯ್ Resurrection, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೊ, ೧೯೭೭, ಪು. ೧೨೭.
೨೩. ರತ್ನಾಕರವರ್ಣಿ, ಭರತೇಶ ವೈಭವ (೪-೧೩)
೨೪. ದ.ರಾ. ಬೇಂದ್ರೆ, ನಾಕುತಂತಿ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೯, ಪು.೫
೨೫. ಶ್ರೀ ಅರವಿಂದೊ, The Life Divine, ಶ್ರೀ ಅರವಿಂದೊ ಆಶ್ರಮ, ಪಾಂಡಿಚೇರಿ, ೧೯೯೭, ಪು. ೫೬೧
೨೬. ದ.ರಾ. ಬೇಂದ್ರೆ, ಇದು ನಭೋವಾಣಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೦, ಪು. ೧೬
೨೭. ದ.ರಾ. ಬೇಂದ್ರೆ, ಮತ್ತೆ ಶ್ರಾವಣ ಬಂತು, ಪೂರ್ವೋಕ್ತ, ಪು.೪೯
೨೮. ಜಿ. ಕೃಷ್ಣಪ್ಪ, ನಾಕುತಂತಿ- ಒಂದು ಟಿಪ್ಪಣಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೨೦೦೦, ಪು. ೯, ೧೦

ಬೇಂದ್ರೆ ಕಾವ್ಯ: ಸ್ತ್ರೀ

'ಒಲವೇ ನಮ್ಮ ಬದುಕು' ಎಂಬುವುದು ಬೇಂದ್ರೆಯವರ ಜೀವನ ವ್ಯಾಖ್ಯೆ. ಬೇಂದ್ರೆಯವರಿಗೆ 'ನಲ್' ಎಂಬುದು ವೇದದ 'ಮಧು' ಶಬ್ದಕ್ಕಿಂತಲೂ ಮೇಲ್ಮೆ ಹೊಂದಿದ, ಪ್ರಿಯವಾದ ಕನ್ನಡ ನುಡಿ; ನಲ್ಮೆ, ಕರುಳು, ಹದಳು, ಹಿಗ್ಗು, ಒಲ್ಮೆ ಎಲ್ಲವೂ ತಾಯಿಯ ಮಮತೆಯಂತೆ, ವಾತ್ಸಲ್ಯದಂತೆ ಜೀವಪೋಷಕವಾದವು. ಬೇಂದ್ರೆಯವರು ಪ್ರೇಮ ಚಿಂತನೆಯಲ್ಲಿಯೇ ಬದುಕಿನ ಚಿಂತನೆಯನ್ನು ಕಂಡು 'ಒಲವಿನಲ್ಲಿ ಬೆಳಿ, ಒಲವಿನಲ್ಲಿ ಉಳಿ, ಒಲವೆ ಬಾಳ ಚೆಲುವು' ಎಂದು ನುಡಿದರು. ಅವರಿಗೆ ಪ್ರೇಮದ ಪೂರ್ಣರೂಪ ತಾಯಿ. ತಾಯಿ ಬಾಲ್ಯದಲ್ಲಿ 'ಹೆಣ್ಣು ಎನ್ನುವ ಮಾತು ತಾಯಿ ಎನ್ನುವ ಮಾತು ಎರಡಲ್ಲ ಒಂದೆಂದು' ತಿಳಿಸಿದ ನುಡಿ ಅವರಲ್ಲಿ ವಿಕಾಸಗೊಳ್ಳುತ್ತ ಸ್ತ್ರೀಪರ ಚಿಂತನೆಯನ್ನು ಬೆಳೆಸಿತು. ಅವರು ಸೃಜನಶಕ್ತಿಯ ತಾಯಿ ಮತ್ತು ಕಾವ್ಯ ಎರಡೂ ಒಂದೇ ಎಂದು ತಿಳಿದು ಸ್ತ್ರೀಯ ಹಲವು ಮುಖಗಳನ್ನು ತಮ್ಮ ಕಾವ್ಯದಲ್ಲಿ ಬಣ್ಣಿಸಿದ್ದಾರೆ.

ಬೇಂದ್ರೆಯವರು ತಮ್ಮ ಸಾಹಿತ್ಯದಲ್ಲಿ ಸ್ತ್ರೀಯನ್ನು ತಾಯಿಯಾಗಿ, ಪ್ರೇಯಸಿಯಾಗಿ, ಮಡದಿಯಾಗಿ, ಮಗಳಾಗಿ, ಸಾಹಿತ್ಯ ಸಹೋದರಿಯಾಗಿ, ವಿಧವೆಯಾಗಿ, ಬಸವಿಯಾಗಿ, ಭಿಕ್ಷುಕಿಯಾಗಿ ಕಂಡ ವಿವಿಧ ಮುಖಗಳನ್ನು ಚಿತ್ರಿಸಲಾಗಿದೆ. ಬೇಂದ್ರೆಯವರ ಕಾವ್ಯದ ವೈಚಾರಿಕ ನಿಲುವಿರುವುದು ಅವರ ಪ್ರೇಮತತ್ವದಲ್ಲಿ. ಪ್ರೇಮ ಸ್ವರೂಪಿಯಾದ ತಾಯಿ, ಅಜ್ಜಿಯರ ಪ್ರೀತಿಯ ಮಗನಾಗಿ ಬೆಳೆದ ಬೇಂದ್ರೆಯವರಿಗೆ ವೈಯಕ್ತಿಕ ನೆಲೆಯ ಪ್ರೇಮ ವಿಶ್ವವ್ಯಾಪಿಯಾಗಿ ಗೋಚರಿಸಿದ್ದು "ಬೆಳಕೆ ಬೆಳಕಿದ್ದು ಕತ್ತಲೆಯು ತುಂಬಿತು ಹೇಗೆ?" ಎಂಬ ಪ್ರಶ್ನೆಯಲ್ಲಿ. ಅವರು ಪ್ರೇಮ ಮತ್ತು ಬೆಳಕನ್ನು ಆರಾಧಿಸಿದರು. ಪ್ರೇಮ ಮತ್ತು ಬೆಳಕು ಜಗದ ಜನರಿಗೆ ಹಾಗೂ ಜಗತ್ತಿಗೆ ಶಾಂತಿಯನ್ನು ತರುತ್ತದೆ ಎಂಬ ನಿಲುವಿಗೆ ಬಂದರು. ಬೆಳಕು ಸದಾ ನಮಗೆ ಗೋಚರವಾಗುತ್ತದೆ. ಬೆಳಕೇ ಅರಿವು. ಅದು ನಮ್ಮಲ್ಲಿಯೇ ಇದೆ. ಅದನ್ನು ತಿಳಿಯಬೇಕು. 'ಶಾಂತೀರಸವೇ ಪ್ರೀತಿಯಿಂದಾ ಮೈದೋರಿತಣ್ಣಾ! ಇದು ಬರಿ ಬೆಳಗಲ್ಲೋ ಅಣ್ಣಾ' ಎಂದು ಬೆಳಕಿನಲ್ಲಿರುವ ಶಾಂತಿ ಮತ್ತು ಪ್ರೇಮವನ್ನು ಆರಾಧಿಸಿದರು. ಅದು ಪ್ರಾಕೃತಿಕ ಪ್ರಕಾಶವಲ್ಲ, ಪ್ರಜ್ಞೆಯ ಉನ್ಮೀಲನದ ಬೆಳಕು ಎಂದು ಬೆಳಕಿನ ವಿಶ್ವವ್ಯಾಪಕತ್ವವನ್ನು ಅವರು ಪ್ರತಿಪಾದಿಸಿದರು. ಶಾಂತಿ ಜೀವನ ಪ್ರೀತಿಯಲ್ಲಿದೆ ಎಂಬುದನ್ನು ಕಂಡುಕೊಂಡ ಅವರು, ಅದು ಎಲ್ಲಿಯೋ ಹೊರಗಿನಿಂದ ಬರುವಂತಹದಲ್ಲ. ಅದು ನಮ್ಮ ಬದುಕಿನಲ್ಲಿಯೇ ಇದೆ. ಅದರ ಎಚ್ಚರ ಬೇಕು ಎಂದು ತಮ್ಮ ಕಾವ್ಯದಲ್ಲಿ ಸಾರಿದರು.

ಬೇಂದ್ರೆಯವರು ಮಾನವರೂಪದ ನಾವು ಅರ್ಧನಾರೀ ನಟೇಶ್ವರರು ಎಂದು ಹೇಳಿದರು. ಶ್ರೀಮಾತಾ ಅವರು ಹೇಳುವಂತೆ ಸ್ತ್ರೀಪುರುಷ ಭೇದ ಈ ನೆಲದ್ದು. ಮೂಲದಲ್ಲಿ ಸ್ತ್ರೀ ಪುರುಷ ಭೇದವಿಲ್ಲ. ನಾವು ಗಂಡಸು ಹೆಂಗಸರು ಪತಿಪತ್ನಿಯರಾಗಿ ಬಾಳ್ವೆ ಮಾಡತೊಡಗಿದಾಗ ಸಮಾನತ್ವದ, ಹೊಂದಾಣಿಕೆಯ, ಸಮರಸಭಾವದಲ್ಲಿ ಜೀವನ ನಡೆಸಿದಾಗ ಪ್ರೀತಿಯು ಪ್ರೇಮವಾಗಿ ಸಾಕ್ಷಾತ್ಕಾರವಾಗುವುದು. ಜಗದ ಹದುಳಕ್ಕೆ ಪ್ರೇಮವೇ ಮೂಲ ಎಂಬ ಸಿದ್ಧಾಂತವನ್ನು ಅವರು ತಮ್ಮ ಸಾಹಿತ್ಯದಲ್ಲಿ ನೀಡಿದರು.

* * *

ಬೇಂದ್ರೆಯವರು ತನ್ನನ್ನು 'ಅರ್ಧನಾರಿಯಾದವ' ಎಂದು ಕರೆದುಕೊಂಡು ಸ್ತ್ರೀ ಪುರುಷರು ಸಮ ಎಂದು ಸಾರಿದರು. ತನ್ನ ವ್ಯಕ್ತಿತ್ವದಲ್ಲಿಯೇ 'ದ್ವಿಲಿಂಗತ್ವವಿದೆ' ಎಂದು ಹೇಳಿದರು. ಅವರು ಮಗುವನ್ನು 'ಅರ್ಧನಾರೀನಟೇಶ್ವರ' ಎಂದು ಕರೆದು ವ್ಯಕ್ತಿತ್ವದ ದ್ವಿಲಿಂಗತ್ವಕ್ಕ ಮಾನ್ಯತೆ ನೀಡಿದರು. ಮಗುವನ್ನು ಹೆರುವ ಚೈತನವನ್ನು, ಧಾರಣಾಶೀಲತೆಯನ್ನು, ಸೃಜನಶಕ್ತಿಯನ್ನು ಹೊಂದಿರುವುದರಿಂದ ಸ್ತ್ರೀಯು ಪುರುಷನಿಗಿಂತ ಹೆಚ್ಚು. ಅವಳು ಮೃಗವನ್ನು ಮಾನವನನ್ನಾಗಿ ಮಾಡಿದವಳು, ಸಂಸ್ಕೃತಿಯನ್ನು ಪ್ರಾರಂಭಿಸಿದವಳು, ಮನುಷ್ಯನನ್ನು ನಾಗರಿಕನನ್ನಾಗಿ ಮಾಡಿದವಳು ಎಂಬ ಚಿಂತನೆಯನ್ನು ತಮ್ಮ ಕಾವ್ಯದಲ್ಲಿ ನೀಡಿದರು. ಸ್ತ್ರೀಚಿಂತನೆಯಲ್ಲಿ ಪುರುಷ ಪ್ರಾಬಲ್ಯವನ್ನು ಹತ್ತಿಕ್ಕಿ ಸ್ತ್ರೀಪ್ರಾಬಲ್ಯವನ್ನು ಸ್ಥಾಪಿಸುವ ನಿಲುವನ್ನು ಕಾಣುತ್ತೇವೆ. ಈ ಪ್ರಕ್ರಿಯೆಯಲ್ಲಿ ಪುರುಷ ಸ್ತ್ರೀ ಎಂಬ ಪ್ರತ್ಯೇಕ ಭಾವವಿದೆ. ಬೇಂದ್ರೆಯವರ ಸ್ತ್ರೀ ಚಿಂತನೆಯಲ್ಲಿ ಸ್ತ್ರೀ ತನ್ನ ತನವನ್ನು ಹೊಂದಬೇಕಾದರೆ ಪುರುಷನ ವ್ಯಕ್ತಿತ್ವವನ್ನು ನಾಶಮಾಡದೆ; ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು; ಒಬ್ಬರಿಗೊಬ್ಬರು ಹೊಂದಾಣಿಕೆ ಮಾಡಿಕೊಂಡು; ಅವನನ್ನೂ ಉಳಿಸಿ ತಾನೂ ಉಳಿಯಬೇಕು ಎಂಬ ಸಾಮರಸ್ಯ ಭಾವವಿದೆ.

* * *

ಮನುಷ್ಯನ ಜೈವಿಕ ಸ್ವರೂಪವನ್ನು ಬಿಟ್ಟು ವ್ಯಕ್ತಿತ್ವದ ವಿಕಾಸಕ್ಕೆ ಮಾನ್ಯತೆ ನೀಡಿದ ಬೇಂದ್ರೆಯವರು ಆ ಬಗೆಯ ಚಿಂತನೆಯನ್ನು ತನ್ನನ್ನು ಹೆತ್ತು ಸಾಕಿ ಬೆಳೆಸಿದ ತಾಯಿ ಮತ್ತು ಅಜ್ಜಿಯವರಿಂದ ರೂಢಿಸಿಕೊಂಡಿದ್ದರು. ತನ್ನ ಅಜ್ಜಿಯನ್ನು 'ಸ್ತ್ರೀಮಾತ್ರ ಛಾಯೆಯು ಪುರುಷಾರ್ಥ ಕೆತ್ತಿದ ಮೂರ್ತಿಯದು' ಎಂದು ಬಣ್ಣಿಸುತ್ತ ವ್ಯಕ್ತಿತ್ವದ ವಿಕಾಸಕ್ಕೆ ಮಾನ್ಯತೆ ನೀಡಿ ಪುರುಷಾರ್ಥದ ಮರ್ಮದ ಪರಿಕಲ್ಪನೆಯನ್ನು ಮನಗಾಣಿಸಿದರು. ಜೈವಿಕ ಮೂಲವನ್ನು ಆಧರಿಸಿ ಸ್ತ್ರೀಯನ್ನು ಪ್ರತ್ಯೇಕಿಸಿ ಅವಳನ್ನು ಬಾಲ್ಯವಿವಾಹದಲ್ಲಿ ಬಂಧಿಸಿ, ವಿಧವಾ ವಿವಾಹವನ್ನು ಮಾಡದೆ ಅಪಮೌಲ್ಯಗೊಳಿಸಿದ ಸಮಾಜವನ್ನು ಧಿಕ್ಕರಿಸಿ, ಅದರ ಹೇಯ ಮುಖವನ್ನು ಕಾವ್ಯದಲ್ಲಿ ಬಯಲುಗೊಳಿಸಿದರು. ಆ ಕೆಟ್ಟ ಪದ್ಧತಿಯನ್ನು ವಿರೋಧಿಸುವ ಆಲೋಚನೆಯು ಜನಮನದಲ್ಲಿ ಮೂಡುವಂತೆ ಮಾಡಿದರು. ವೇದಕಾಲದ ದಾಂಪತ್ಯ,

ವಿವಾಹ, ಸ್ತ್ರೀ ಸಮಾನತೆಯಂತಹ ಮೌಲಿಕ ವಿಚಾರಗಳನ್ನು ತಂದು; ಉಪನಿಷತ್ತಿನ ಕಾಲದ ಸ್ತ್ರೀಯ ಬೌದ್ಧಿಕ ಔನ್ನತ್ಯವನ್ನು ತನ್ನ ಕಾವ್ಯ ಚಿಂತನೆಯಲ್ಲಿ ಬೆಸೆದು ಸ್ತ್ರೀ ಪುರುಷರು ಸಮಾನರು ಎಂಬುದನ್ನು ತಮ್ಮ ಕಾವ್ಯ ಚಿಂತನೆಯನ್ನಾಗಿಸುವಲ್ಲಿ ಯಶಸ್ವಿಯಾದರು.

* * *

ಬೇಂದ್ರೆಯವರು ಸ್ತ್ರೀಯ ವ್ಯಕ್ತಿತ್ವ ವಿಕಾಸಗೊಳ್ಳಬೇಕೆಂಬ ಚಿಂತನೆಯನ್ನು ಹೊಂದಿದ್ದರು. ಸ್ತ್ರೀಯು ತನ್ನ ಬೌದ್ಧಿಕ ಕುಶಲತೆಯಿಂದ, ತನ್ನಲ್ಲಡಗಿರುವ ಕಲಾಚಾತುರ್ಯದಿಂದ 'ತಲೆವಾಕೆ, ಪಡೆವಾಕೆ, ಮಿಂಚಿನ ತಂತಿಯ ಮೇಲೆ ನಡೆವಾಕೆ'ಯಾಗಿ ಡೊಂಬರ ಕಲೆಯಲ್ಲಿ ಪರಿಣಿತಳಾದ ಹೆಣ್ಣಿನಂತೆ ಆಗಬೇಕು. ಕಲೆಯನ್ನು ಆಧರಿಸಿ ಬುದ್ಧಿವಂತಿಕೆಯಿಂದ ಬಾಳ್ವೆ ಮಾಡಬೇಕು. ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳಬಾರದು. ಅವಳು ರಾಕಾಸುಂದರಿಯಾಗಬೇಕು ಎಂದು ಹೇಳಿದರು. ಸಮಾಜದ ಅತಿ ಕೆಳಸ್ತರದ ಸ್ತ್ರೀ ವ್ಯಕ್ತಿತ್ವವನ್ನು ತಿಳಿದು ಅವರ ಬದುಕಿನ ಶೀಲವನ್ನು ವಿಶ್ಲೇಷಿಸಿದರು. ಅಂತಹವರ ಜೀವನದಲ್ಲಿ ಪುರುಷನನ್ನು ಮೀರಿಸುವ ಸ್ತ್ರೀಗುಣವನ್ನು ಸೂಕ್ಷ್ಮವಾಗಿ ಅರಿತು ನುಡಿದದ್ದು ಬೇಂದ್ರೆಯವರ ಸ್ತ್ರೀ ಸಮುದಾಯ ಪರವಾದ ಚಿಂತನೆಗೆ ಪುರಾವೆಯಾಗಿದೆ.

ಬೇಂದ್ರೆಯವರು ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ವಿಕಾಸವಾದಾಗಲೇ ಸಮಾಜದ ವಿಕಾಸ ಎಂದು ನಂಬಿದ್ದರು. ಅವರ ಪ್ರಕಾರ ವ್ಯಕ್ತಿತ್ವ ವಿಕಾಸವೆಂಬುದು ಇನ್ನೊಬ್ಬರ ವ್ಯಕ್ತಿತ್ವವನ್ನು ಗೌರವಿಸಿ ತಾನು ಬೆಳೆಯುವುದು, ಉಳಿಯುವುದು ಎಂಬುದಾಗಿತ್ತು. ಅವರ ಜೀವನದ ಮತ್ತು ಕಾವ್ಯದ ಸಿದ್ಧಾಂತ ಸಮರಸ ಸಿದ್ಧಾಂತವಾಗಿದೆ. 'ರಸವೆ ಜನನ । ವಿರಸ ಮರಣ । ಸಮರಸವೇ ಜೀವನ' ಎಂಬ ಅವರ ಜೀವನ ವ್ಯಾಖ್ಯೆ-ಜೀವದ, ವ್ಯಕ್ತಿಯ ವಿಕಸನ ಪಥವನ್ನು ದರ್ಶಿಸುತ್ತದೆ. ಅದರ ಜೀವನ ವಿಕಾಸವನ್ನು ಹೀಗೆ ಅರ್ಥೈಸಬಹುದು; ಜೀವನದ ಹಲವಾರು ಸಮಸ್ಯೆ ಭಿನ್ನಾಭಿಪ್ರಾಯಗಳಲ್ಲಿ ವಿರಸಭಾವ ಉಂಟಾಗಲು, ಅವರು ಅದರ ಕಾರಣವನ್ನು ಶೋಧಿಸುತ್ತ ನಿಜ ನೆಲೆ ಅರಿಯಲು ಪ್ರಯತ್ನಿಸುತ್ತಾರೆ. ಆ ಶೋಧದಲ್ಲಿ ಹೊಂದಾಣಿಕೆಯ ಸಮರಸ ತತ್ವವನ್ನು ಅರಿತು ಒಬ್ಬರನ್ನೊಬ್ಬರು ತಿಳಿದು ಬಾಳುವುದು ಅವರ ಬಾಳ್ವೆಯ ಪೂರ್ಣ ವಿಕಾಸವಾದಂತೆ. ಆ ವಿಕಸನವೇ ಜೀವನ. ರಸದಿಂದ ವಿರಸವನ್ನು ಮೀರಿ ಸಮರಸವನ್ನು ಸಾಧಿಸುವುದೇ ಬೇಂದ್ರೆಯವರ ಸಿದ್ಧಾಂತವಾಗಿದೆ. ಈ ಚಿಂತನೆಗೆ ಅವರ 'ಸಖೀಗೀತ' ಕಾವ್ಯವೇ ಪುರಾವೆಯಾಗಿದೆ.

* * *

ಗಂಡ ಹೆಂಡತಿ ಜೀವ ಸೃಷ್ಟಿ ಕ್ರಿಯೆಯ ಸರಿಸಮನಾದ ಪಾಲುಗಾರರು. ಹಾಗೆಯೇ ಬಾಳಿನಲ್ಲಿಯೂ ಹೊಂದಾಣಿಕೆ, ಸಮರಸಭಾವದಿಂದಿದ್ದು ಜೀವನವನ್ನು ಅರ್ಥಪೂರ್ಣವಾಗಿಸಿ ಕೊಳ್ಳಬೇಕು. ಅವರಲ್ಲಿ ಯಾರೂ ಹೆಚ್ಚಿಲ್ಲ, ಯಾರೂ ಕಡಿಮೆಯಿಲ್ಲ. ಪುರುಷ ತಾನೇ ಮೇಲು

ಎಂಬುದು ಒಂದು ಭ್ರಮೆ ಎಂದು ಬೇಂದ್ರೆಯವರು ಆ ವಾದವನ್ನು ಶಿಥಿಲಗೊಳಿಸುತ್ತ 'ಕೂಡಿರಲಿ ಬಾಳು ಇಡಿಗಾಳಿನಂತೆ' ಎಂಬ ಹಿರಿದಾದ ಚಿಂತನೆಯನ್ನು ನೀಡಿದರು.

ಬೇಂದ್ರೆಯವರ ಸೃಜನಶೀಲಗುಣ ಅವರ ನಾರೀಭಾವದ ಫಲವಾಗಿದೆ. ಹೆಣ್ಣು ಫಲವತಿಯಾಗಿ ಮಗುವನ್ನು ಪಡೆಯುವ ಅನುಭವ ಅವಳಲ್ಲಿ ಅಲೌಕಿಕ ಶಕ್ತಿಯಾಗಿ ಅರಳುತ್ತದೆ. 'ಅಲೌಕಿಕ'ದ ಗೂಢದಂತೆ ಸ್ತ್ರೀಯ ಅಲೌಕಿಕತ್ವವು ಗೂಢವಾಗಿ ಅವಳಿಗೆ ಮಾತ್ರ ಲಭಿಸುವಂತಹದ್ದಾಗಿದ್ದು, ಪುರುಷನಿಗೆ ಅದು ಅಲಭ್ಯವಾಗಿ ಜೀವೋತ್ಪತ್ತಿಯಲ್ಲಿ ಅಲೌಕಿಕತ್ವದ ಅರಿವಿನಲ್ಲಿ ಸ್ತ್ರೀ ಪುರುಷನಿಗಿಂತ ಉನ್ನತ ಸ್ತರದಲ್ಲಿರುವುದು ಬೇಂದ್ರೆ ಕಾವ್ಯ ದರ್ಶಿಸಿದ ಚಿಂತನೆಯಾಗಿದೆ. ಬೇಂದ್ರೆಯವರು ಈ ಲೋಕದ ಬದುಕಿನಲ್ಲಿ ಪೂರ್ಣ ಬದಲಾಗಬಲ್ಲ ಚೇತನ ಸ್ತ್ರೀ ಎಂದು 'ಹಳೆಯ ಗೆಳೆಯರು' ನಾಟಕದಲ್ಲಿ ಪ್ರತಿಪಾದಿಸಿ ಸ್ತ್ರೀಯಾತ್ಮಕತೆಯ ವಿಕಸನವನ್ನು ವಿಶ್ಲೇಷಿಸಿದ್ದಾರೆ.

ಬೇಂದ್ರೆಯವರ ಕಾವ್ಯ ಹಲವಾರು ಭಾವಗಳ ವಿಭಿನ್ನ ಚಿತ್ರಣಗಳಿಂದ ವಿಕಾಸಗೊಳ್ಳುತ್ತ ಸಾಗಿ ಆತ್ಮಶೋಧನೆಗೆ ತೊಡಗಿದ ಆತ್ಮಶೋಧಕ ಭಾವಕಾವ್ಯವಾಗಿದೆ. ಅವರು ತನಗೆ ತಾಯಿಯೇ ಸ್ಫೂರ್ತಿಯ ಸೆಲೆ; ತಾಯಿಯೇ ಶ್ರೇಷ್ಠ ಎಂದು ತಮ್ಮ ಕಾವ್ಯದಲ್ಲಿ ಹೇಳುತ್ತ ಜೀವಕೊಟ್ಟ ತಾಯಿಯು ಮಗುವಿಗೆ ಮಾತುಕಲಿಸಿ ಅವನಿಗೆ ಎರಡನೇ ಹುಟ್ಟನ್ನು ನೀಡುತ್ತಾಳೆ. ಮಗುವಿಗೆ ಮಾತು ಬರುವುದು ದ್ವಿಜತ್ವ ಎಂಬ ವಿಶ್ವ ಚಿಂತನೆಯನ್ನು ತಾಯಿಯ ಅರಿವಿನ ಮೂಲಕ ನೀಡಿದ್ದಾರೆ. ಇದು ಸಾಂಪ್ರದಾಯಿಕ ವೈದಿಕ ನಿಲುವನ್ನು ಮೀರಿದ ಚಿಂತನೆಯಾಗಿದೆ.

ಬೇಂದ್ರೆಯವರು ಸಾಮಾಜಿಕ ಬದುಕಿನ ಬಂಧ ಸಂಬಂಧದ ಶೋಧಕ್ಕೆ ತೊಡಗುತ್ತ ಅಲ್ಲಿಯ ಕರುಳಿನ ತೊಡಕನ್ನು ಬಿಡಿಸುತ್ತ–ಅದು ಬಿಡಿಸಿಕೊಂಡು ತನ್ನ ಅಂತರಾಳವನ್ನು ದರ್ಶಿಸಿದಾಗ–ಆನಂದಮಯವಾಗಿ ಅದನ್ನೇ ತನ್ನ ಒಡವೆಯಂತೆ ಧರಿಸಿ ಕಾವ್ಯದ ಉತ್‌ಯೋಗವನ್ನು ಸಾಧಿಸಿದ್ದಾರೆ. ಅದು ಅವರ ಜೀವನದ ಮತ್ತು ಕಾವ್ಯದ ಕರುಳಿನ, ಹಳಹಳಿಕೆಯ ಹದುಳದ ಬಾಂಧವ್ಯವಾಗಿದೆ. ಅದೇ ಅವರ ಜೀವನ ಮತ್ತು ಕಾವ್ಯದ ಸಿದ್ಧಾಂತವಾಗಿದೆ.

* * *

ಬೇಂದ್ರೆಯವರು ಅಖಂಡ ಬದುಕನ್ನು ಹಿಡಿಯುವ ಪ್ರಯತ್ನವನ್ನು ಮಾಡಿದ್ದರಿಂದ ಅವರ ಒಂದೊಂದು ಕವನದಲ್ಲಿಯೂ ಹಲವು ನೆಲೆಯ ಚಿಂತನೆಗಳು ಒಡಮೂಡಿ ಬಂದಿವೆ. ಆ ಚಿಂತನೆಯಲ್ಲಿ ವಿಷಯವೈವಿಧ್ಯದಂತೆ ಛಂದೋವೈವಿಧ್ಯವಿದ್ದು, ದೇಸಿ ಮತ್ತು ಶಿಷ್ಟ ಬದುಕು ಹಾಗೂ ಭಾಷೆಯ ಸವಿಯರಿತ ಅವರು ಅದನ್ನು ಸಮರ್ಥವಾಗಿ ಅಭಿವ್ಯಕ್ತಿಸಿದರು.

'ಸಾವಿಗಿಂತ ಬಾಳು ಮೇಲು' ಎಂಬ ಜೀವನ ಸಿದ್ಧಾಂತವನ್ನು ನೀಡಿದ್ದಾರೆ. ಅವರು ತಮ್ಮ ಜೀವನದಲ್ಲಿ ದಾರುಣ ಬದುಕನ್ನು ಸಾಗಿಸುತ್ತಿದ್ದಾಗಲೂ ಜೀವನ ವಿಮುಖರಾಗದೆ

ಅದನ್ನು ಎದುರಿಸಿ ಸಾಗಿರುವುದು ಕಂಡುಬಂದಿದೆ. ಅದೇ ಬಗೆಯ ಚಿಂತನೆ ಅವರ ಕಾವ್ಯ, ನಾಟಕ, ಕಥೆಗಳಲ್ಲಿದೆ. ಅವರ ಸಾಹಿತ್ಯ ಜೀವಪರವಾಗಿದೆ. ಅವರ 'ಏಕಾಕಿನಿ' ಕಥೆ ಜೀವಪರ ನಿಲುವಿಗೆ ಬೆಳಕಿನಂತೆ ಕನ್ನಡ ಕಥಾ ಸಾಹಿತ್ಯದಲ್ಲಿ ಬೆಳಗುತ್ತಿದೆ.

* * *

ಸ್ತ್ರೀಯರು ಮಾನವನನ್ನು ರೂಪಿಸುತ್ತ, ಸಂಸ್ಕೃತಿಯನ್ನು ಸೃಷ್ಟಿಸುತ್ತ, ಗರ್ಭಧಾರಣಾ ಶಕ್ತಿಯಿಂದ ಪುರುಷನಿಗಿಂತ ಮೇಲಾಗಿದ್ದಾರೆ. ಇದನ್ನು ತಿಳಿದೂ ಗಂಡಸರು ಪುರುಷಾಧಿಕ್ಯ ಮನೋಭಾವದಿಂದ ವರ್ತಿಸುವುದು ಸರಿಯಲ್ಲ. ಸ್ತ್ರೀಪುರುಷರು ಭಿನ್ನರೆಂಬ ಭಾವದಲ್ಲಿ, ಮೇಲು ಕೀಳೆಂಬ ಅಹಂನಲ್ಲಿ ದಹಿಸಿ ಹೋಗಬಾರದು. ಅವರಲ್ಲಿ ಪ್ರೇಮ ಪಲ್ಲವಿಸಬೇಕು. ಅದು ಕೊಳಲಿನ ದನಿಯಂತೆ ಮಧುರ ಭಾವವನ್ನುಂಟು ಮಾಡಿ ಅವರಲ್ಲಿ ಮಧುವಾಗಿ ನೆಲಸಬೇಕು. ಹಾಗೆ ಪ್ರತಿ ಕುಟುಂಬದಲ್ಲಿ ಸುಮಧುರ ಭಾವ ನೆಲೆಸಿದಾಗ ಲೋಕ ಕಲ್ಯಾಣವಾಗುತ್ತದೆ ಎಂಬುದು ಬೇಂದ್ರೆಯವರ ಕಾವ್ಯಸಿದ್ಧಾಂತವಾಗಿದೆ.

('ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ–ಒಂದು ಅಧ್ಯಯನ'
ಪುಸ್ತಕದಿಂದ ಆಯ್ದ ಲೇಖನ-೨೦೦೫)

ಬೇಂದ್ರೆ ಕಾವ್ಯ: ದೇಶಭಕ್ತಿ

ವರಕವಿ ದ.ರಾ. ಬೇಂದ್ರೆಯವರು ಆದರ್ಶದ ಆರಾಧಕರಾಗಿ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಜೀವನ ಸಾಗಿಸುತ್ತ ಉನ್ನತ ಚಿಂತನೆಗಳನ್ನು ಕಾವ್ಯರೂಪದಲ್ಲಿ ನೀಡಿದ ಮಹಾಮಾನವರು. ಅವರು ಬ್ರಿಟಿಷರ ಆಳ್ವಿಕೆಯ ವಿರುದ್ಧ 'ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು। ನರಬಲಿಯೇ ಬೇಕು! ಇದುವೆ ಕಾಳಿಯ ಪೂಜೆಯು ಶುದ್ಧ! ಇದಕ್ಕೆ ಹುಂಬರು ಎಂಬರು ಯುದ್ಧ!' ಎಂದು 'ನರಬಲಿ' ಕವನ ರಚಿಸಿ ಸೆರೆವಾಸ ಅನುಭವಿಸಿದ ಕವಿ. ಅವರು ಭಾರತದ ಜನತೆಯಲ್ಲಿ ಸ್ಫೂರ್ತಿಯನ್ನು ತುಂಬಿ ರಾಷ್ಟ್ರ ಚೇತನವು ಮೈಗೂಡುವಂತಹ ಕಾವ್ಯವನ್ನು ರಚಿಸಿದರು. ಅವು ಇಂದಿನ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಮನನೀಯವಾಗಿವೆ. ಇಂತಹ ಕವನಗಳು ನಾಡಿಗರಲ್ಲಿ ರಾಷ್ಟ್ರ ಭಕ್ತಿಯನ್ನು ಸ್ಫುರಿಸುವ ಚೈತನ್ಯ ಚಿಲುಮೆಗಳಾಗಿವೆ. 'ಯುದ್ಧ ಧರ್ಮವಾದಾಗ ಯುದ್ಧ ಪರಾಙ್ಮುಖತೆ ಅಧರ್ಮ' ಎನ್ನುವ ಭಾವ ಸಂದರ್ಭವನ್ನು ಹೊಂದಿದ 'ಯುದ್ಧ ಬಂತು ಮನೆಯವರೆಗೆ' ಎಂಬ ಕವನದಲ್ಲಿ ಭಾರತದ ಜನತೆಯನ್ನು ಬನ್ನಿ ಒಂದಾಗೋಣ, ಒಳ ಜಗಳವನ್ನು ನಿಲ್ಲಿಸಿ, ನಾವು ತಾಯಿನಾಡಿಗೆ ಸೇವೆ ಸಲ್ಲಿಸಿ ಹಗೆಯನ್ನು ಎದುರಿಸೋಣ ಎಂಬ ಕರೆ ನೀಡಿದ್ದಾರೆ.

'ಯುದ್ಧ ಬಂತು ಮನೆಯವರೆಗೆ
ಬನ್ನಿ ಒಂದಾಗಿರಿ.
ಒಳಜಗಳವ ಕ್ಷಣವೆ ನಿಲಿಸಿ
ನಮ್ಮ ಜನವ ಒಲಿದು ಒಲಿಸಿ
ತಾಯಿ ನೆಲಕೆ ಸೇವೆ ಸಲಿಸಿ
ನಿಮ್ಮ ಹಗೆಯ ತಾಗಿರಿ'

ಬೇಂದ್ರೆಯವರು 'ಸ್ವಾತಂತ್ರ್ಯ ದೇವಿಗೆ' ಎಂಬ ಕವನದಲ್ಲಿ ರಾಷ್ಟ್ರದ ಜನರಲ್ಲಿ ಕೆಚ್ಚನ್ನು ಮೂಡಿಸುತ್ತ, ಸ್ವಾತಂತ್ರ್ಯದ ಉಳಿವಿಗಾಗಿ, ಭಾರತಮಾತೆಯ ರಕ್ಷಣೆಗಾಗಿ ಮೈಕೊಡವಿ ಎದ್ದು ಹೋರಾಟ ಮುಖಿಯಾಗಬೇಕು ಎಂದು ಹೇಳಿದ್ದಾರೆ. ತಾಯಿಯ ಅಪಮಾನಕ್ಕೆ ಕೈ ಹಚ್ಚಿದ ವೈರಿ ದುರುಳ ರಾಕ್ಷಸನನ್ನು ಸಂಹರಿಸು, ತಾಯಿಯ ಮಾನವನ್ನು ಕಾಪಾಡು, ರಣದ ಕಣಕ್ಕೆ ನುಗ್ಗು ಎಂದು ಹುರಿದುಂಬಿಸಿದ್ದಾರೆ.

'ಮೂರು ಮುಸುಕು ಎಳೆದುಕೊಂಡು
ಮಲಗಿದೇಕೆ ಮಾನವಾ?
ಸುಡಿಸಿ ಸುಟ್ಟು ಕೆಡಿಸಿ ಕೆಟ್ಟು
ಕುಣಿಯುತಿಹನು ದಾನವಾ
ಧೀರ ಇಳೆಯ ಸೀರೆ ಸೆಳೆವ
ಉಳಿಸೊ ಉಳಿಸು ಮಾನವಾ.

* *

ನುಗ್ಗಿರಣ್ಣ ರಣದ ಕಣಕೆ,
ಅಸುರದಿಂದ ಬಿಡಿಸಿರಿ
ತಾಯ ಸೆರೆಯ, ಎಲ್ಲರಿಂದ
ಗೆಲುವಿನ ಗುಡಿ ಹಿಡಿಸಿರಿ
ಭೂಮಿ ದೇವಿ ನಲಿಯುವಂತೆ
ವಿಜಯಗೀತ ನುಡಿಸಿರಿ
ಭಾರತ ನವಶಕ್ತಿ.

ಭಾರತೀಯ ಚಿಂತನೆಯಲ್ಲಿ ವ್ಯಕ್ತಿಯ ಅರಿವು ಅಂದರೆ ಅವನ ಆತ್ಮದ ಎಚ್ಚರ. ಅದಕ್ಕೆ ಶ್ರೀಶಕ್ತಿ ಪರಮಾತ್ಮನ ಕರುಣೆ. ಆತ್ಮ ಪರಮಾತ್ಮನ ತಿಳಿವಿನಲ್ಲಿ ವ್ಯಕ್ತಿ ಅಂತಃಶಕ್ತಿಯ ಜಾಗರಣವಾಗುತ್ತದೆ. ಅದು ನಮ್ಮ ಹೃದಯ ಮತ್ತು ಚಿತ್ತದಲ್ಲಿ ಹುಟ್ಟಿ ಚೈತನ್ಯದಿಂದೊಡಗೂಡಿ 'ಭಾರತ ನವಶಕ್ತಿ'ಯಾಗಲಿ ಎಂದು ಆತ್ಮಶ್ರೀಯನ್ನು ಜಾಗೃತಗೊಳಿಸಿದ್ದಾರೆ.

'ಹೃಜ್ಜಾತೇ! ಚಿನ್ಮಾತೇ!
ಹೃನ್ಮಾತೇ ಚಿಜ್ಜಾತೇ ಭಾರತ ನವಶಕ್ತಿ!
ನಮ್ಮಾತ್ಮವೆ ಪರಮಾತ್ಮವೆ ಕರುಣಿಸು ತವಭಕ್ತಿ'

ಈ ಭಾರತ ಭೂಮಿಯೇ ನಮ್ಮ ಒಡಲನ್ನು ರೂಪಿಸಿದ ಮಣ್ಣು. ಇಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಒಂದೇ ತಾಯಿಯ ಮಕ್ಕಳು. ನಮ್ಮ ಬಾಹ್ಯ ಆಚರಣೆಯ ಧರ್ಮ ಆಚಾರ, ಜಾತಿ ಪಂಥ. ಭಾಷೆ ಪಂಗಡ, ಬಣ್ಣ ಉಡುಪುಗಳೆಲ್ಲ ನಾವು ರೂಪಿಸಿಕೊಂಡದ್ದು. ನಾವು ಒಂದೇ ಒಕ್ಕಲಿಗೆ ಸೇರಿದವರು. ನಾವು ಒಂದು ಎಂಬ ಸತ್ಯವನ್ನು ಬೇಂದ್ರೆಯವರು 'ಒಂದೆ ತಾಯಿಯ ಮಕ್ಕಳು' ಎಂಬ ಕವನದಲ್ಲಿ ನೀಡಿದ್ದಾರೆ. ಈ ಕವನದ ಪ್ರತಿ ಪದವೂ ಭಾರತೀಯತೆಯನ್ನು, ಭಾರತದ ಮಣ್ಣಿಂದ ಹುಟ್ಟಿ, ಈ ಮಣ್ಣಿಂದ ರೂಪುಗೊಂಡ ಅನ್ನವನ್ನುಂಡು ಬೆಳೆದ ಸತ್ಯವನ್ನು ತಿಳಿಸುತ್ತದೆ. ಈ ಭರತಭೂಮಿಯಿಲ್ಲದೆ ನಾವಿಲ್ಲ. ಇದೇ ನಮ್ಮ ಮೂಲಸೆಲೆ ಎಂಬುದನ್ನು ಬಿಂಬಿಸುತ್ತದೆ.

'ಒಂದೆ ತಾಯಿಯ ಮಕ್ಕಳು
ಒಂದೆ ತವರ್ಮನೆ ಒಕ್ಕಲು.
ಬಣ್ಣ ಬಣ್ಣದ ಜನರು ನಾವಿಂದೊಂದು ಗೂಡಲು ಬಂದೆವು
ಮಣ್ಣ ಭೇದವನೆಣಿಸದೇ ಒಂದೆದೆಯ ಬಲವನು ತಂದೆವು
ತಾಯಿ ನೆಲವೇ ಅನ್ನವೆಂದೇ ನಿನ್ನ ಮೈಯ್ಯನ್ನುಂಡೆವು
ತಾಯಿ ಮೊಲೆವಾಲೆಂತು ತೊರೆವುದೊ ಅಂತು ಸೆಲೆಗಳ ಕಂಡೆವು'

ನಮ್ಮ ದೇಶದಲ್ಲಿ ವೇದಕಾಲದ ಋಷಿಗಳು ಕಂಡ ಜಗನ್ಮಾತೆ ಅದಿತಿ. ಅವಳೇ 'ಭಾರತಿ ಶ್ರೀಮಾತೆ' ಅವಳು ನಮ್ಮನ್ನು 'ಅಸತ್ತಿನಿಂದ ಸತ್ತಿಗೆ, ಅಭೂತದಿಂದ ಅಪೂರ್ವದ ಕಡೆಗೆ, ಅಜೀವದಿಂದ ಜೀವದ ಕಡೆಗೆ ನಡೆಸಲಿ' ಎಂದು ಬೇಂದ್ರೆಯವರು ಬೇಡಿಕೊಳ್ಳುತ್ತ ಹೀಗೆ ಪ್ರಾರ್ಥಿಸಿದ್ದಾರೆ:

'ಕತ್ತಲೆಯಿಂದಾ ಜ್ಯೋತಿಯ ಬದಿಗೆ
ಅಶ್ರದ್ಧೆಯಿಂದಾ ಶ್ರದ್ಧಾನದಿಗೆ
ಅನೈಕ್ಯದಿಂದಾ ಐಕ್ಯದ ತುದಿಗೆ
ನಿಲಿಸೌ ಶ್ರೀಮಾತೇ'

ಹೀಗೆ ರೂಪುಗೊಂಡ ಭಾರತೀಯನಿಗೆ, ಈ ರಾಷ್ಟ್ರಕ್ಕೆ ಜಯವಾಗುತ್ತದೆ. ಕನ್ನಡ ಮತ್ತು ಇತರ ಭಾಷೆಗಳನ್ನಾಡುವ ನಾವೆಲ್ಲ ಸಹೋದರರು. ನಮ್ಮ ಚಿಂತನೆಯೆಲ್ಲ ರಾಷ್ಟ್ರವನ್ನು ಕುರಿತದ್ದು. ನಮ್ಮ ಮನಸ್ಸು ಒಂದು. ನಾಡಿನ ಸುಸಂಸ್ಕೃತ ಜೀವಿಗಳ ಅರ್ಥಪೂರ್ಣ ಬದುಕು, ಶಾಂತಿಪ್ರಿಯ ನಡವಳಿಕೆ, ಧೀಃಶಕ್ತಿಯೇ ಈ ನಾಡಿನ ಸರ್ವಸ್ವ. ಅದೇ ಈ ನಾಡಿನ ದಿವ್ಯತೆ. ದಿವ್ಯತೆಯ ಪಥವನ್ನು ತೆರೆಯುವ ಮನೋರಥದವರು ನಾವಾಗಿರುವುದರಿಂದ ನಮಗೆ ಜಯ ಎಂದು ಬೇಂದ್ರೆಯವರು ಸಾರಿದ್ದಾರೆ.

'ಜಯವಾಗತೈತೇ ಜಯವಾಗತೈತೇ
ಭಾರತಿಗೇ ಪ್ರತಿ ಭಾರತಿಗೇ
ಕನ್ನಡದ ಇನ್ನುಳಿದ ಭ್ರಾತೃಗಳ ಪಥಕೇ
ದಿವ್ಯತೆಯ ಪಥ ತೆರೆವ ಭಾರತ ಮನೋರಥಕೆ"

ಕಾರ್ಗಿಲ್ ಯುದ್ಧದಲ್ಲಿ ಕೊರೆಯುವ ಹಿಮ ಚಳಿಯಲ್ಲಿ, ಮೈ ತಣ್ಣಗಾಗಿಸುವ ಕಣಿವೆಗಾಡಿನಲ್ಲಿ ನಮ್ಮ ವೀರಯೋಧರು ಪಾಕಿಸ್ತಾನಿಯರನ್ನು ಹೊಡೆದಟ್ಟಿದ್ದಾರೆ. ನಮ್ಮ ಗಿರಿಶಿಖರದಲ್ಲಿ ನಾಡಗುಡಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದಾರೆ. ಅದನ್ನು ನೆನೆದಾಗ ನಮ್ಮ ವೀರರ ಸಾಹಸಕ್ಕೆ ಮೈ ರೋಮಾಂಚನಗೊಳ್ಳುತ್ತದೆ. ರಾಷ್ಟ್ರ ಧ್ವಜ ನಮ್ಮ ನಾಡಿನ ಸತ್ಯ, ಶಾಂತಿ, ತ್ಯಾಗದ ಸಂಕೇತ. ನಮ್ಮ ರಾಷ್ಟ್ರದ ಮಾನ, ಸಮ್ಮಾನ. ಅದನ್ನು ಹೊತ್ತು

ಗಗನಕ್ಕೇರಿಸಿದ ವೀರರಿಂದ, ನಮ್ಮ ಮೈಯಲ್ಲಿ ಪೂರ್ವಜರ ಪುಣ್ಯವೇ ಸಂಚರಿಸುತ್ತಿದೆ ಎಂದು ಕವಿ ಬೇಂದ್ರೆ ಹಾಡಿದ ಹಾಡು ಸ್ಫೂರ್ತಿಶಕ್ತಿಯಾಗಿದೆ. 'ಜಯನಾದ ನಾಲಿಗೆಯಲ್ಲಿ ಮೊಳಗುವಾಗ ಎದೆಯಲ್ಲಿ ಭಯವಿರುವುದಿಲ್ಲ. ರಾಷ್ಟ್ರನದಿಯಲ್ಲಿ ದೇಶಭಕ್ತಿಯ ಪೂರ ಬಂದಿರಲು ಅದರಲ್ಲಿ ಜಯವೆಂದು ಮುಳುಗಿರುವ' ಎಂದು ರಾಷ್ಟ್ರ ಭಕ್ತಿಯಲ್ಲಿ ಮಿಂದ ಹರ್ಷಾನಂದವನ್ನು ಅನನ್ಯವಾಗಿ ವ್ಯಕ್ತಪಡಿಸಿದ್ದಾರೆ.

'ಬಾ ಬಂದೆಯಾ ಹೊತ್ತೆ! ಬಾಗಿ ಎತ್ತುವೆನಿಂದು
ನಾಡಗುಡಿಯನ್ನು ಕೈಯೊಳ್ ಬಾ ಬಂದೆಯಾ ವೀರ
ಪೂರ್ವಜರ ಪುಣ್ಯವೇ
ಚಲಿಸಿದಂದು ನನ್ನ ಮೈಯೊಳ್
ಜಯನಾದ ನಾಲಿಗೆಯ ತುದಿಯಲ್ಲಿ ಮೊಳಗುತಿದೆ
ಭಯವಿಲ್ಲ ಎದೆಯ ಬದಿಯೊಳ್
ಜಯವೆಂದು ಮುಳುಗಿದೆನು ದೇಶಭಕ್ತಿಯ ಪೂರ
ಬಂದಿರಲು ರಾಷ್ಟ್ರ ನದಿಯೊಳ್
ಇಗೊ ಹೊರಟೆವು ಬಿಡುಗಡೆಗಾಗಿ

ಭಾರತ ಮಾತೆಯ ಪ್ರತಿ ಇಂಚು ನೆಲವೂ ಪವಿತ್ರ. ಅದು ನಮ್ಮದು. ಅದನ್ನು ಅತಿಕ್ರಮಣಕಾರರು ಆಕ್ರಮಿಸಿದರೆ ಅವರನ್ನು ಹೊಡೆದಟ್ಟಿ ರಕ್ಷಿಸಬೇಕು. ತಾಯಿ ಭಾರತಾಂಬೆಯನ್ನು ರಕ್ಷಿಸಿದಾಗ 'ಅಂದರಳ್ವುದು ತಾಯಿಯ ಮೊಗವು' ಎಂದು ಹೇಳುತ್ತ ಬೇಂದ್ರೆಯವರು ನಾಡಿನ ಬಿಡುಗಡೆಗಾಗಿ ಪ್ರತಿಯೊಬ್ಬರೂ ಮುಂದೆ ನುಗ್ಗಬೇಕು ಎಂದು 'ಬಿಡುಗಡೆ' ಕವನದಲ್ಲಿ ಹೀಗೆ ನುಡಿದಿದ್ದಾರೆ.

'ಇಗೊ! ಹೊರಟೆವು ಬಿಡುಗಡೆಗಾಗಿ
ಬಹರಾರು ನಮಗಿದಿರಾಗಿ?'

ಈ ಆತ್ಮವಿಶ್ವಾಸದ ತಾಯಿಯ ರಕ್ಷಣೆಯ ಹೋರಾಟದಿಂದಲೇ ಭಾರತಾಂಬೆಯ ಆನಂದವಿದೆ. ಅದರಿಂದ ನಾಡಿನ ಕೀರ್ತಿ ಬೆಳೆದು ಅಕೀರ್ತಿಯ ಕೆಸರು ತೊಳೆದು ಹೋಗುತ್ತದೆ. ತಾಯಿಗೆ ಮತ್ತು ನಾಡಿನ ಜನಕ್ಕೆ ಬಿಡುಗಡಯ ಉಸಿರು ದೊರಕುತ್ತದೆ ಎಂದು ನುಡಿದಿದ್ದಾರೆ.

'ತೊಳ ತೊಳಗುವದು ತಾಯಿಯ ಬಸಿರು
ಕಳೆ ಗೊಳುವದು ನಾಡಿನ ಹೆಸರು
ದೊರಕಿಸಲೀ ಬಿಡುಗಡೆಯುಸಿರು
ಅದಕಾಗಿ ತಾಗಿ ಸಾಗಿ...'

ನಾವು ಭಾರತೀಯರೆಲ್ಲ ಒಂದು. ನಮ್ಮಲ್ಲಿಯ ಹಿಂದೂ, ಪಾರಸಿ, ಮುಸ್ಲಿಂ, ಕ್ರಿಶ್ಚಿಯನ್, ಸಿಕ್ ಎಲ್ಲರೂ ಒಂದಾಗಿ ದೇಶವನ್ನು ನಡೆಸುತ್ತ ರಾಷ್ಟ್ರವನ್ನು ರಕ್ಷಿಸುತ್ತಾ ಇದ್ದೇವೆ. ಭಾರತದ ದಂಡು ದೇಶ ರಕ್ಷಣೆಯಲ್ಲಿ ಮುನ್ನುಗ್ಗಿ ವೈರಿಯನ್ನು ನುಗ್ಗಾಗಿಸುತ್ತಿದ್ದೆ. ವಿಜಯದಲ್ಲಿ ಸಂತೋಷವು ಬಿತ್ತರಿಸಿದೆ. ವೀರಕ್ಕೆ ಅದ್ಭುತ ಸಿದ್ಧಿ ಇದೆ. ಈ ಯುದ್ಧ ನಮ್ಮ ಭಾವೈಕ್ಯತೆಯನ್ನು ಸಾರುತ್ತಿದೆ.

ಏಸು ಶಾಂತಿದೂತ. ಅವನೇ ಈ ಯುದ್ಧ ಸಾರುವ ವೈರಿಗಳಿಗೆ ಸದ್ಬುದ್ಧಿಯನ್ನು ನೀಡಬೇಕು ಎಂಬ ಭಾವದಲ್ಲಿ 'ಸನ್ಮತಿಯೇಸು ಭಗವಾನ್' ಎಂದು ಕಾವ್ಯ ರಚಿಸಿದ್ದಾರೆ.

ಜಯಹಿಂದ್, ಜಯಹಿಂದ್, ಜಯಹಿಂದ್
ಪ್ಯಾಟನ್ ಟ್ಯಾಂಕಿನ ಹಿಂಡು ಬಾರಿಸಿತೊ ಗುಂಡು
ಇದಿರಾಯ್ತು ಭಾರತದ ದಂಡು
ಹಿಂದೂ ಪಾರಸಿಕಾ ರಸಿಕಾ, ಮುಸ್ಲಿಂ, ಕ್ರಿಸ್ತೀ ಸೀಖಾ
ಸಹವೀರ್ಯಾ ಸಹಧೈರ್ಯಾ ಸೌಖ್ಯ
ತಂದಿದೆ ಭಾವೈಕ್ಯ.

ಬೇಂದ್ರೆಯವರು ಚೀನಾ ದೇಶವು ನಮ್ಮ ಮೇಲೆ ಯುದ್ಧ ಮಾಡಿದಾಗ ರಚಿಸಿದ ಕವನ 'ಶ್ರೀಮನ್ ಮಹಾಭಾರತ'. ಅದರಲ್ಲಿ ಅವರು ಚೀನ ಪಂಚಶೀಲ ತತ್ವವನ್ನು ಸಾರುತ್ತ ನಮ್ಮ ಬೆನ್ನಿರಿದುದನ್ನು ಹೇಳಿ; ನೆರೆಯ ಜಪಾನು ಹಿರೋಶಿಮಾದಿಂದ ಪಾಠ ಕಲಿತರು, ಆ ಪಾಠ ತನಗೆ ಸಾಲದು ಎಂಬ ರೀತಿ ಉದ್ಧಟತನದಿಂದ ಯುದ್ಧದಾಟ ಹೂಡಿದೆ ಎಂದು ನುಡಿದಿದ್ದಾರೆ. ನಮಗೆ ಚಂದ್ರಹಾಸನನ್ನು ಕಾಪಾಡಿದ ಕಾಲಿಯ ಬಲವಿದೆ. ನಿನ್ನ ದುಷ್ಟ ಬುದ್ಧಿಗೆ ನಾಶವಿದೆ ಎಂದು ಪೌರಾಣಿಕ ದುಷ್ಟ ಬುದ್ಧಿಯು ನಾಶವಾದ ಹೋಲಿಕೆಯನ್ನು ಕಾವ್ಯಾತ್ಮಕವಾಗಿ ನೀಡಿದ್ದಾರೆ. ಆ ಕಾವ್ಯದಲ್ಲಿ 'ಮರ್ಯಾದೆ ಮಾತಿನದು' ಎಂದು ಪಂಚಶೀಲತತ್ವದ ಅರ್ಥವನ್ನರುಹಿ 'ದುರ್ಯೋಧನನೆ ಸಾಕು' ನಿನ್ನ ನಾಶ ಖಚಿತ ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಓದಿದಾಗ 'ಮರ್ಯಾದೆ ಮಾತಿನದು' ಎಂಬ ಮನುಷ್ಯ ಜೀವಿಯ ಮಾತಿನ ಮೌಲ್ಯ ಅರಿಯದ ಪಾಕಿಸ್ತಾನದ ವರ್ತನೆ ಹೇಯವೆನಿಸುತ್ತದೆ. ನಮ್ಮ ಪ್ರಧಾನಮಂತ್ರಿ ಅಟಲ ಬಿಹಾರಿ ವಾಜಪೇಯಿ ಅವರ ಸೌಹಾರ್ದ ಬಸ್ ಪ್ರಯಾಣದ ನಂತರ ಗಡಿಯಲ್ಲಿ ಪಾಕಿಸ್ತಾನ ದಾಳಿ ಮಾಡಿದ್ದನ್ನು ನೆನೆದರೆ 'ಶ್ರೀಮನ್ ಮಹಾಭಾರತ' ಯಾವಾಗಲೂ ಎಚ್ಚರದಿಂದಿರಬೇಕೆಂಬ ಬೇಂದ್ರೆ ನುಡಿಯ ಸತ್ಯಗೋಚರವಾಗುತ್ತದೆ. ಅಪಾಯಕಾರಿ ನೆರೆಹೊರೆಯಾದ ಚೀನಾವನ್ನು ಕುರಿತು ಬೇಂದ್ರೆಯವರು,

'ನೀನು ಕ್ರೂರನು ಕ್ಷುದ್ರ, ನಿನಗೆ ಜೀವನ ಯುದ್ಧ
ನಿನ್ನ ದೃಷ್ಟಿಯೆ ಸಾವು ರುಧಿರ ರುದ್ರಾಕ್ಷಿ!'

ಎಂದು ನುಡಿದದ್ದು ಪಾಕಿಸ್ತಾನಕ್ಕೂ ಅನ್ವಯಿಸುವಂತಿದೆ. ಯುದ್ಧ ಎಂಬುವುದು ನೋವು.

ಅದು 'ಯಾ ಅಲ್ಲಾ!' ಎಂದು ದೇವರನ್ನು ನೆನೆಸುವಂತಹುದು. ಅದು ಕವಿತಾ, ನಾಟಕ, ಕಾದಂಬರಿ ಅಲ್ಲ. ವಿವೇಚನೆ, ಹೃದಯವಂತಿಕೆ, ಮನುಷ್ಯತ್ವ ಇಲ್ಲದ್ದು ಯುದ್ಧ. ಪರಸ್ಪರ ಕೊಡುಕೊಳೆಯ ಪಾಶ್ಚಿಮಾತ್ಯ ಉದಾತ್ತ ನೀತಿ ಮಣ್ಣು ಮುಕ್ಕಿದ ಅವಸ್ಥೆಯ ಪ್ರತೀಕ ಈ ಯುದ್ಧ. ಇದರಿಂದ 'ಹೊಸ ಯುಗ ಬರೋ ಹಂಗಿಲ್ಲ!' ಎಂದು 'ನಾ ಕವಿತಾ ಬರೀ ಬಾರ್ದಿತ್ತು' ಎಂಬ ಕವನದಲ್ಲಿ

'ಇಸ್ಲಾಂ ಧರ್ಮಾ ಭಾರತ ಧರ್ಮಾ ಬ್ಯಾರೆ ಅಲ್ಲಾ
ಒಡಕೊಂಡು, ಸಿಡಕೊಂಡ ಮ್ಯಾಲೆ
ಪರಲೋಕದ ಹೊರತು ಗತಿ ಇಲ್ಲಾ'

ಎಂದು ಧರ್ಮ ಒಂದೇ ಎಂಬ ಅರಿವನ್ನು ನೀಡಿದ್ದಾರೆ. ಧರ್ಮದ ಕಾರಣದಿಂದ ಬೇರೆ ಬೇರೆಯಾದಾಗ ಅದು ಸಾವನ್ನು ತರುತ್ತದೆ ಎಂದು ಧರ್ಮದ ಸೂಕ್ಷ್ಮ ಅಪಾಯವನ್ನು ಕಾಣಿಸಿದ್ದಾರೆ. ಬೇಂದ್ರೆಯವರು ಇಡೀ ರಾಷ್ಟ್ರಕ್ಕೆ ನಮ್ಮ ನೆರೆಹೊರೆಯಾದ ಪಾಕಿಸ್ತಾನದ ಸಂಬಂಧದ ಒಳ ಹೊರಗನ್ನು ಕಾವ್ಯಾತ್ಮಕವಾಗಿ 'ಭುಟ್ಟೋ ನಮ್ಮಾವಾ, ಅಬ್ದುಲ್ಲಾ ನಮ್ಮಾವಾ । ಜಿನ್ನಾ ನಮ್ಮಾವಾ' ಎಂದು ಧ್ವನ್ಯಾರ್ಥದಲ್ಲಿ ಕೆಟ್ಟ ರಕ್ತ ಸಂಬಂಧದ ಬಾಂಧವ್ಯವನ್ನು ಸೂಚಿಸಿದ್ದಾರೆ. ಅಂತಹ ನಮ್ಮಾವನನ್ನು ಕೃಷ್ಣನು ಕಂಸನನ್ನು ಕೊಂದಂತೆ ಕೊಲ್ಲಬೇಕು. ಇಲ್ಲದಿದ್ದರೆ ಉಳಿಗಾಲವಿಲ್ಲ ಎಂದು ಎಚ್ಚರಿಸಿದ್ದಾರೆ. ಬಾಂಗ್ಲಾ ದೇಶವನ್ನು ಕಳೆದುಕೊಂಡಂತೆ ಕಾಶ್ಮೀರವನ್ನು ಕಳೆದುಕೊಳ್ಳಬೇಕಾದೀತು ಎಂದು ಇಡೀ ರಾಷ್ಟ್ರ ಪ್ರಜ್ಞೆಯನ್ನು ಜಾಗೃತಗೊಳಿಸಿದ್ದಾರೆ.

'ಭುಟ್ಟೋ ನಮ್ಮಾವಾ, ಅಬ್ದುಲ್ಲಾ ನಮ್ಮಾವಾ
ಜಿನ್ನಾ ನಮ್ಮಾವಾ,
ಕಂಸ ಕೂಡ ಕೃಷ್ಣನ ಮಾವಾ
ಇತಿಹಾಸ ಮರೀತೀರೇನು? ಯಾವ ವರ್ಷ ಯುದ್ಧ ಆಗಿಲ್ಲಾ?
ಮತ್ತ ಮತ್ತ ಪಾನಿಪತ್ತು ಮಾಡ್ಯಾರ
ಬಂಗ್ಲಾದೇಶಾ ಕೃಷ್ಣಾರ್ಪಣಾ!
ಕಾಶ್ಮೀರಕ್ಕೂ ತರ್ಪಣಾ ಮಾಡಬೇಕಾದೀತು
ಎಚ್ಚರಕಿ!"

ಯುದ್ಧದಲ್ಲಿ ವೀರಯೋಧರು ದೇಶಕ್ಕಾಗಿ ಪ್ರಾಣತ್ಯಾಗ ಮಾಡಿ ಅಮರರಾಗುತ್ತಾರೆ. ಅವರ ತ್ಯಾಗ ಬಲಿದಾನದಿಂದ ನಾವು ಸುರಕ್ಷಿತವಾಗಿದ್ದೇವೆ. ಅಂತಹ ವೀರ ಯೋಧರನ್ನು ಕುರಿತು ಬೇಂದ್ರೆಯವರು 'ಸಮರದಲ್ಲಿ ಅಮರರಾದ ಧೀರರು ಮತ್ತೆ ಹುಟ್ಟಿ ಬರುವರು' ಎಂದು ಹೇಳಿದ್ದಾರೆ. ಆ ವೀರರು ಈ ನಾಡಿನ 'ಬಂಧನದಾ ಕುಣಿಕೆ ಬಿಚ್ಚಿ ಮುಕ್ತಿ ಮಾಲೆ ತರುವರು' ಎಂದು ಘೋಷಿಸುತ್ತಾ, ದೇಶಕ್ಕಾಗಿ ಪ್ರಾಣತೆತ್ತ ಸೈನಿಕರಿಗೆ ಅಮರತ್ವವನ್ನು ನೀಡಿ

ಅವರಿಗೆ ಮರುಜನ್ಮವಿದೆ ಎಂದು ಸಾರಿದ್ದಾರೆ. 'ವೀರ ಧರ್ಮಸಾರ ಅಮೃತವೆಂದು ಬೆಳೆಯುವಾ! ವೀರವನ್ನು ನೆನೆದು ನೆನೆದು ವೀರರಾಗಿಯುಳಿಯುವಾ' ಎಂದು ಹೇಳಿ ಆ ಅಮೃತಮಯ ಅಮರ ಜೀವಿಗಳಿಂದ ನಾವು ವೀರರಾಗುವೆವು ಎಂದಿದ್ದಾರೆ. ಆ ಅಮರ ವೀರರ ಭೂತದ ವೀರಶಕ್ತಿ ಭವಿಷ್ಯತ್ತಿನಲ್ಲಿ ಬರುವುದು ಈಗಾಗಲೇ ಕೈಗೂಡುತ್ತಿದೆ ಎಂದು ಹೇಳಿದ್ದಾರೆ. ಗತಿಸಿ ಹೋದ ವೀರರ ಸಾಹಸವನ್ನು ವರ್ತಮಾನಕ್ಕೆ ತಂದು ಅವರಿಗೆ ಅಮೃತತ್ವವನ್ನು ತಮ್ಮ ಕಾವ್ಯದಲ್ಲಿ ನೀಡಿದ್ದಾರೆ. ಈ ಕಾವ್ಯವು ಈ ನಾಡಿನ ಶೂರಧೀರ ಸೈನಿಕರಿಗೆ ವರಕವಿ ದ.ರಾ. ಬೇಂದ್ರೆ ನೀಡಿದ ಅಮರಗಾಥೆಯಾಗಿದೆ.

'ಬರುವರೋ
ಬರುವರೋ
ಬರುತಲಿಹರು
ಅವರು ನಮ್ಮ ಗರುವರು
ನಾಡ ನೊಗವ ಹೊರುವರು
ದ್ವೇಷವನ್ನು ಹರುವರು
ನಮಗೆ ಕೀರ್ತಿ ತರುವರು
ಬರುವರುಽ ಬರುವರುಽ ಬಂದೆ ಬರುವರುಽ'

(ಕಾರ್ಗಿಲ್ ಯುದ್ಧ ಸಂದರ್ಭದಲ್ಲಿ ಬರೆದ ಲೇಖನ-೧೯೯೯)

○

ತೀನಂಶ್ರೀ: ಕಾವ್ಯಸಮೀಕ್ಷೆ

ಪ್ರಾಚಾರ್ಯ ತೀನಂಶ್ರೀ ಅವರ 'ಕಾವ್ಯಸಮೀಕ್ಷೆ' ಕನ್ನಡ ನವೋದಯ ಸಂದರ್ಭದಲ್ಲಿ ಕನ್ನಡ ವಿಮರ್ಶಾ ಪ್ರಪಂಚಕ್ಕೆ ಮೂಡಿದ ದಿವ್ಯಜ್ಯೋತಿ. ಕಾವ್ಯದ ಅಂತಃಸೂಕ್ಷ್ಮತೆಯನ್ನು ಶೋಧಿಸಿ ವಿಮರ್ಶಿಸುವ ಪರಿಯನ್ನು ಕಾಣಿಸಿದ ಪ್ರಭೆ. ಆರ್ದ್ರಮನದಿಂದ ಸಾಹಿತ್ಯವನ್ನು ವಿಶ್ಲೇಷಿಸುವ ಸತ್‌ಪರಂಪರೆಯನ್ನು ಸೃಷ್ಟಿಸಿದ ಕನ್ನಡ ವಿಮರ್ಶೆಯ ಬುನಾದಿ. ಧರ್ಮಸೂಕ್ಷ್ಮದಿಂದ ಕಾವ್ಯವನ್ನು ವಿಮರ್ಶಿಸುತ್ತ ಕಾವ್ಯಾನಂದದ ರಸಲಹರಿಯನ್ನು ನೀಡಿದ ಅನುಭವ. ಇಂತಹ ಕೃತಿಯಲ್ಲಿ ವಿಶ್ಲೇಷಣೆಗೆ ಒಳಗಾಗಿರುವುದು 'ವಿಷಮ ಪ್ರಣಯದ ಅನೇಕ ಮುಖವಾದ ಗತಿ.' ಲೋಕದ ಹೆಣ್ಣು ಗಂಡಿನ ಆನಂದ ಲಹರಿಯ ಕತ್ತಲು ಬೆಳಕಿನ ಅಮೋಘ ದಿನ.

ಈ ಕೃತಿಯಲ್ಲಿರುವುದು ಒಟ್ಟು ಐದು ವಿಮರ್ಶೆ. 'ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ' ವಿಮರ್ಶೆಯು ಗ್ರೀಸ್‌ನ ದುರಂತ ನಾಟಕಗಳ ವಿಶ್ಲೇಷಣೆಯಿಂದ ತೊಡಗಿ 'ಪಾಶ್ಚಾತ್ಯರಿಗೆ ದುರಂತ ನಾಟಕವು ಕೇವಲ ಕಲೆಯ ಬೆಡಗಲ್ಲ. ಅದು ಆತ್ಮ ಸಂಸ್ಕಾರದ ಸಾಧನ, ಜೀವನ ಸಾರದ ಸಾಕ್ಷಾತ್ಕರಣ' ಎಂದು ಹೇಳಿ ನಮ್ಮ ಸಂಸ್ಕೃತ ನಾಟಕಗಳಲ್ಲಿ 'ನಾಟಕದ ವಸ್ತು ಯಾವುದೇ ಆಗಿರಲಿ, ನಡುವೆ ಎಂಥ ವಿಷಮ ಸಂಘಟನೆಗಳೇ ಒದಗಿರಲಿ ಕೊನೆ ಮಾತ್ರ ಒಂದೇ; ಮಂಗಳಶಾಂತಿ. 'ದುರಂತ'ವೆಂಬ ಹೆಸರು ಈ ಚಿತ್ರಕ್ಕೆ ಒಪ್ಪಲಾರದು... ಇದುವರೆಗೆ ದೊರೆತಿರುವ ನಾಟಕಗಳಲ್ಲೆಲ್ಲಾ ಭಾಸನ 'ಊರುಭಂಗ'ವೊಂದೆ ದುರಂತ ನಾಟಕವೆಂಬ ಹೆಸರಿಗೆ ಅರ್ಹವಾದದ್ದು, ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಕಾಳಿದಾಸನ 'ವಿಕ್ರಮೋರ್ವಶೀಯ'ವನ್ನು ವಿಮರ್ಶಿಸುತ್ತ ಆ ಕಥೆ 'ಋಗ್ವೇದ', 'ಶತಪಥ ಬ್ರಾಹ್ಮಣ', 'ಪದ್ಮಪುರಾಣ', 'ಮತ್ಸ್ಯಪುರಾಣ', 'ವೈದಿಕ ಯುಗ'ದಲ್ಲಿ ರೂಪಾಂತರಗೊಂಡ ಬಗೆಯನ್ನು ವಿವರಿಸಿ ಕಾಳಿದಾಸನು ತನ್ನ ಕೃತಿಯಲ್ಲಿ ಮಾಡಿಕೊಂಡಿರುವ ಹಲವು ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ: 'ಮೂಲಕಥೆಗಳಲ್ಲಿ ಪುರೂರವನಿಗೆ ಹಿರಿಯ ಹೆಂಡತಿ ಇದ್ದಳೆಂಬ ಪ್ರಸ್ತಾಪ ಬಂದಿಲ್ಲ. ಅದು ಬರತಕ್ಕದ್ದೂ ಅನುಚಿತ. ಏಕೆಂದರೆ ಅದರಿಂದ ಕಥೆಯ ಘನತೆಯೂ, ನಾಯಕನ ಘನತೆಯೂ ತಗ್ಗುತ್ತವೆ. ಇದನ್ನು ಲಕ್ಷಿಸದೆ ಕಾಳಿದಾಸನು, ಬಹುಶಃ ನಾಟಕದ ಸಂಪ್ರದಾಯವನ್ನು ಅನುಸರಿಸಿ, ಕಾಶೀರಾಜ ಪುತ್ರಿಯ ವೃತ್ತಾಂತ ಬೆಳೆಸಿದ್ದಾನೆ.' ತೀನಂಶ್ರೀಯವರು ಕಾಳಿದಾಸನು ಊರ್ವಶಿಯ

ಪಾತ್ರ ಚಿತ್ರಣದಲ್ಲಿ ಅಮಾನುಷತೆಯನ್ನು ದೂರೀಕರಿಸಿ ಪುರೂರವನಲ್ಲಿ ವ್ಯಾಮೋಹ ಹೊಂದಿದ 'ಮಾನವ ಸದೃಶ' ಚಿತ್ರಣವನ್ನು ಶ್ಲಾಘಿಸಿದ್ದಾರೆ.

ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ವನ್ನು ವಿಮರ್ಶಿಸುತ್ತ ತೀನಂಶ್ರೀಯವರು–ಶಕುಂತಲೆ ದುಷ್ಯಂತನನ್ನು ವರಿಸಿದ್ದರಲ್ಲಿ 'ತಾನು ರಾಜಮಾತೆಯಾಗಬೇಕೆಂಬ ಹೆಬ್ಬಯಕೆಯೊಂದೇ ಮುಖ್ಯಕಾರಣವೆಂದು ತೋರುತ್ತದೆ. ಆದ್ದರಿಂದ ಈ ನಿಬಂಧನೆಯೊಂದನ್ನೇ ಅವನ ಸಂಗಡ ಮಾಡಿಕೊಂಡಳು. ಈ ವಾಣಿಜ್ಯ ಸಂಬಂಧದಲ್ಲಿ ಆರ್ದ್ರ ಭಾವವುಂಟೆ, ಲಲಿತ ಸನ್ನಿವೇಶವುಂಟೆ, ಅನುನಯ ಪ್ರಸಾದಗಳುಂಟೆ!?' ಎಂದು ಆಶ್ಚರ್ಯ ಚಕಿತ ಪ್ರಶ್ನೆಗಳನ್ನು ಎತ್ತಿದ್ದಾರೆ. 'ಇಲ್ಲಿನ ದಾಂಪತ್ಯ ವ್ಯವಹಾರದಲ್ಲಿ ಘನತೆಯ ತಳಹದಿಯೇ ಇಲ್ಲ' ಎಂದು ವಿಮರ್ಶಿಸಿ ಅವರ ಪುನಸ್ಸಮಾಗಮವನ್ನು ಕುರಿತು 'ಶಕುಂತಲಗೆ ಅವನಲ್ಲಿ ಪ್ರೇಮ ಅಳಿಸದಿರಬಹುದು, ಆದರೆ ಪುನಸ್ಸಮಾಗಮ ಮಾತ್ರ ಅನುಚಿತ'ವೆಂದಿದ್ದಾರೆ.

'ಜನ್ನನ ಕಾವ್ಯಗಳಲ್ಲಿ ಪ್ರಣಯನಿರೂಪಣೆ'ಯಲ್ಲಿ 'ಯಶೋಧರ ಚರಿತೆ'ಯ ಅಮೃತಮತಿಯ ಕಥೆಯನ್ನು, 'ಅನಂತನಾಥ ಪುರಾಣ'ದಲ್ಲಿಯ 'ಚಂಡಶಾಸನ'ನ ಕಥೆಯನ್ನು ವಿಮರ್ಶಿಸಿದ್ದಾರೆ. 'ಈ ಎರಡೂ ಕಥೆಗಳಲ್ಲೂ ವಸ್ತು ಒಂದೇ; ದುರ್ಭರವಾದ ದುರಂತವಾದ ಅಧಾರ್ಮಿಕ ಪ್ರಣಯ.... ಗೃಹಸ್ತ ಧರ್ಮಕ್ಕೇ ಕುಠಾರ ರೂಪವಾದ ಆ ಜೀವ ವ್ಯಾಮೋಹ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಶೋಧರನು ಅಮೃತಮತಿಯ ವಿಷವ್ಯಾಮೋಹದ ಪರಿ ಕಂಡು 'ಹೆಣ್ಣು ತಪ್ಪಿ ನಡೆದರೆ ಅವಳನ್ನು ತೊರೆದುಬಿಡುವುದೇ ವಿಜಯ' ಎಂದು ಸಂತೈಸಿಕೊಂಡು ನಡೆವ ಪರಿ ಧೀರನ ಕ್ಷಮಾಗುಣ, ಸಹನೆ, ಸನ್ಮಾರ್ಗದಲ್ಲಿ ನಡೆಯುವ ಉತ್ತಮ ಮಾನವ ಲಕ್ಷಣವಾಗಿದೆ.

ವಸುಷೇಣನ ಮಿತ್ರನಾದ ಚಂಡಶಾಸನನು ಅತಿಥಿಯಾಗಿ ಬಂದು ವಸುಷೇಣನ ಪತ್ನಿ ಸುನಂದೆಯನ್ನು ಕಾಮಿಸಿ ಅತಿಥಿ ಧರ್ಮವನ್ನು, ಮಿತ್ರ ಧರ್ಮವನ್ನು ಉಲ್ಲಂಘಿಸಿ ನಡೆದ ರೀತಿಯನ್ನು ತೀನಂಶ್ರೀ ಅವರು 'ಚಂಡಶಾಸನನ ಪ್ರಣಯ ದುಗ್ಗನುರಿದು ಸಿಕ್ಕದ್ದನ್ನೆಲ್ಲಾ ಭಸ್ಮ ಮಾಡುವ ಮಹಾಜ್ವಾಲೆಯಂತೆ, ವಸುಷೇಣನದು ಸ್ತಿಮಿತವಾದ ಪ್ರದೀಪ ಪ್ರಭೆಯಂತೆ' ಎಂದು ವಿಮರ್ಶಿಸಿದ್ದಾರೆ. ಈ ಎರಡೂ ಕಥೆಗಳಲ್ಲಿ 'ಮೋಹವು ಸ್ತ್ರೀಪುರುಷ ಭೇದವನ್ನು ಲೆಕ್ಕಿಸುತ್ತದೆಯೆ...? ಜನ್ನನ ಕೃತಿಗಳೆರಡೂ ಒಂದೇ ಮೂಲ ತತ್ತ್ವವನ್ನವಲಂಬಿಸಿದರೂ ಪುನರುಕ್ತಿಯಿಂದ ಬೇಸರ ಪಡಿಸದೆ, ಒಂದೇ ವಸ್ತುವಿನ ಭಿನ್ನಮುಖಗಳಂತೆ ಕಾಣಿಸಿ ಒಂದಕ್ಕೊಂದು ಪೂರಕವಾಗುವುವು" ಎಂದು ವಿಶ್ಲೇಷಿಸಿದ್ದಾರೆ.

'ಕನ್ನಡ ಭಾರತದಲ್ಲಿ ಶೃಂಗಾರ ಸನ್ನಿವೇಶಗಳು' ಎಂಬ ವಿಮರ್ಶೆಯಲ್ಲಿ 'ಮಹಾಭಾರತಕ್ಕೆ ನಾಯಕನು ಯಾರೆಂಬ ವಿಚಾರದಲ್ಲಿ ಚರ್ಚೆ ಬೇಕಾದಷ್ಟು ನಡೆಯಬಹುದು. ದೃಷ್ಟಿ ಭೇದದಿಂದ ಉತ್ತರವೂ ಭಿನ್ನವಾಗಬಹುದು. ಆದರೆ ಅದರ ನಾಯಕಿ ದ್ರೌಪದಿಯೆಂಬ ವಿಚಾರದಲ್ಲಿ ಸಂಶಯ ಲವಲೇಶವೂ ಹುಟ್ಟುವಂತಿಲ್ಲ. 'ದ್ರೌಪದಿ ಭಾರತದ ಕ್ರಿಯಾಶಕ್ತಿ' ಎಂದು ನುಡಿಯುತ್ತಾ ಅಜ್ಞಾತವಾಸದಲ್ಲಿ ಕೀಚಕವೃತ್ತಾಂತದಲ್ಲಿ ನೊಂದು ಬೆಂದ ದ್ರೌಪದಿಯನ್ನು

ಕುಮಾರವ್ಯಾಸ ಚಿತ್ರಿಸಿರುವುದನ್ನು ಎಳೆಎಳೆಯಾಗಿ ವಿಮರ್ಶಿಸಿದ್ದಾರೆ. ಕ್ರೂರ ವಿಧಿ ದ್ರೌಪದಿಗೆ ಉಂಟುಮಾಡಿದ ಸಹಾಯ, ನಿರ್ಭಾಗ್ಯ ಸನ್ನಿವೇಶದಲ್ಲಿ ತನ್ನ ಅಂತಃಸತ್ವದಿಂದಲೇ ತನ್ನ ಉಳಿವಿಗಾಗಿ ಸ್ತ್ರೀ ಚೇತನದ ಸ್ವಪ್ರಭೆಯಿಂದ ಸೂಕ್ಷ್ಮಮತಿಯವಳಾಗಿ ಯಶಸ್ವಿಯಾದ ಗಾಥೆಯ-ಒಳಭಾಗಗಳ ನೋವು, ದುಡುಕು, ಕೋಪ, ಸಹನೆಯನ್ನು ಕವಿ ಚಿತ್ರಿಸಿರುವ ಬಗೆಯನ್ನು, ಆವೇಶಕ್ಕೆ ಒಳಗಾಗದೆ ತನ್ನ ಅಲ್ಲೋಲ ಕಲ್ಲೋಲ ಭಾವಸ್ಥಿತಿಯಲ್ಲಿ ಬುದ್ಧಿಯ ಸ್ನೇಹದಿಂದ ಯಶಸ್ವಿಯಾದ ದ್ರೌಪದಿ ಸ್ತ್ರೀಸಮುದಾಯಕ್ಕೆ ಒಂದು ಆದರ್ಶ ಧೀಃಶಕ್ತಿ ಎಂಬ ಚಿತ್ರಣವನ್ನು ಹೊಗಳಿದ್ದಾರೆ.

'ಅನಾಥೆಯೆನಿಸಿದ ಸುಂದರಿಯೊಬ್ಬಳು ಅರಮನೆಯಲ್ಲಿ ಗೌಡಿಯಾಗಿದ್ದರೆ ಅವಳು ಕಾಮುಕರ ಭೇಟೆಯ ಪಕ್ಕಿಯಾಗುವುದು ತುಂಬ ಸಹಜ' ಎಂದು ದ್ರೌಪದಿ ಕೀಚಕನ ಕಣ್ಣಿಗೆ ಬಿದ್ದು ತೊಳಲಾಡುವುದು 'ನಾಲುವರ ನಡುವಣ ಹಾವು ಸಾಯದು', 'ಬಲವಿಹೀನರಿಗಾಪ್ತರಿಲ್ಲ' ಎಂದು ತನ್ನ ಪತಿಗಳು ಐವರು ತನ್ನ ಪರಿಸರದಲ್ಲೇ ಇದ್ದರೂ ಅಸಹಾಯಕರಾಗಿದ್ದ, ಧರ್ಮಸೂಕ್ಷ್ಮದ ಎಳೆಗೆ ಬಂಧಿತರಾದವರ ಮನಸ್ಸನ್ನು ಅರಿತ ದ್ರೌಪದಿ, ತನ್ನ ಮಾನವನ್ನು ಕಾಯುವ ಗಂಡು ಭೀಮಸೇನನೇ ಎಂದು ತಿಳಿದು; ಅವನನ್ನು ಬಿರುನುಡಿಯಿಂದ ತಿವಿದು ಕೀಚಕನನ್ನು ವಧಿಸುತ್ತಾಳೆ.

ಕವಿ ನಾರಣಪ್ಪನು ದ್ರೌಪದಿಯ ಸೌಂದರ್ಯವನ್ನು ವರ್ಣಿಸಿ ಅದಕ್ಕೆ ಮೋಹಗೊಂಡ ಕೀಚಕನನ್ನು ಚಿತ್ರಿಸಿರುವ ಬಗೆಯನ್ನು ಕಂಡು ತೀನಂಶ್ರೀ ಅವರು ಅವನ ಕಾಮದ ಕಿಚ್ಚನ್ನು ನಾರಣಪ್ಪನು ಈ ರೀತಿ ಚಿತ್ರಿಸಿ, ಕೀಚಕನಿಗೆ ದ್ರೌಪದಿಯ ಹುಚ್ಚಿನಲ್ಲಿ ಮನೋನಿಗ್ರಹ ಹೇಗೆ ಅಸಾಧ್ಯವಾಗಿತ್ತೆಂಬುದನ್ನು ಸ್ಪಷ್ಟಪಡಿಸಿದ್ದಾನೆ; ಕವಿಯ ವಿಶಾಲ ಹೃದಯದಲ್ಲಿ ಪಾಪಿಯ ಮನೋವೃತ್ತಿಯನ್ನು ಕುರಿತು ಅನುಕಂಪವುಂಟೆಂದು ತೋರ್ಪಡಿಸಿದ್ದಾನೆ ಎಂದು ವಿಮರ್ಶಿಸಿದ್ದಾರೆ.

'ಪಾಂಡು-ಮಾದ್ರಿಯರ ದುರಂತ ಕಥೆಯ ಆಳವನ್ನು ಅಳೆದು ಪೂರ್ಣರಸವನ್ನು ಹೀರಿರುವವನು ನಾರಣಪ್ಪನೇ ಎಂದು ಹೇಳಿದರೆ ಅದು ಹಿಂದಿನ ಪೂಜ್ಯಕವಿಗಳಿಗೆ ಅಗೌರವದ ಮಾತಲ್ಲ. ಕನ್ನಡ ಭಾರತದಲ್ಲಿ ಈ ಸಂದರ್ಭವು ಉಜ್ವಲವಾದ ಸರ್ವಾಂಗ ಪೂರ್ಣವಾದ ಒಂದು ಬಿಡಿ ವಜ್ರದಂತೆ ಹೊಳೆಯುತ್ತದೆ' ಎಂದು ತೀನಂಶ್ರೀ ಅವರು ವಿಮರ್ಶಿಸಿದ್ದಾರೆ. ಕವಿ ಚಿತ್ರಿಸಿರುವ ಋತುವರ್ಣನೆಯನ್ನು ಕುರಿತು 'ಮಿಕ್ಕ ಕಾವ್ಯಗಳಲ್ಲಿ ಕೇವಲ ಬಾಹ್ಯಾಡಂಬರವಾಗುವ ಋತುವರ್ಣನೆ ಇಲ್ಲಿ ಕಥೆಯೊಂದಿಗೆ ಹಾಸುಹೊಕ್ಕಾಗಿ ಮಿಳಿತವಾಗಿದೆ' ಎಂದು ಸೂಕ್ಷ್ಮವಿಮರ್ಶೆ ನೀಡಿದ್ದಾರೆ.

ಮಹಾಭಾರತದ ಇನ್ನೊಂದು ಶೃಂಗಾರ ಸನ್ನಿವೇಶದ ಊರ್ವಶಿ ಅರ್ಜುನ ಪ್ರಸಂಗ ವನ್ನು ವಿಮರ್ಶಿಸುತ್ತ 'ಇಂದ್ರಕೀಲದಲ್ಲಿ ಅರ್ಜುನನು ಭಕ್ತಿಯಿಂದ ಶಿವನನ್ನು ಜಯಿಸಿದ್ದು ಸಾಮಾನ್ಯವಲ್ಲ; ಆದರೆ ಊರ್ವಶಿಯ ಸಮ್ಮುಖದಲ್ಲಿ ಧೈರ್ಯದಿಂದ ಕಾಮನನ್ನು ಜಯಿಸಿದ್ದು ಅದಕ್ಕೂ ಮಿಗಿಲು... ಅವನ ಸತ್ವಪರೀಕ್ಷೆಯ ದೃಷ್ಟಿಯಿಂದ ಈ ನಪುಂಸಕತ್ವ ಲಾಭ

ಪಾಶುಪತಾಸ್ತ್ರ ಲಾಭಕ್ಕಿಂತಲೂ ಹೆಚ್ಚಿನದು. ಕನ್ನಡ ಭಾರತದಲ್ಲಿ ಬಂದಿರುವ ಶೃಂಗಾರದ ಪರಿಮಿತ ಸನ್ನಿವೇಶಗಳಲ್ಲಿ 'ವಿರಹಿಗಳ ಶೃಂಗಾರವೇ' ಹೆಚ್ಚಾಗಿದೆ.

'ಭಾರತದಲ್ಲಿ ಶೃಂಗಾರವು ಒಟ್ಟಿನ ಮೇಲೆ ಅಮುಖ್ಯವಾದ ರಸ. ಅದನ್ನು ಮೆಟ್ಟಲಲ್ಲೇ ನಿಲ್ಲಿಸಿ, ನಿಲ್ಲಿಸಿದರೂ ನಿರೂಪಣೆಯನ್ನು ಲೋಕೋತ್ತರವಾಗಿ ನಿರ್ವಹಿಸುವ ಶಕ್ತಿ' ಕುಮಾರವ್ಯಾಸನಂಥ ಮಹಾಕವಿಗೆ ಮಾತ್ರ ಸಾಧ್ಯ ಎಂಬ ವಿಮರ್ಶಾನುಡಿ ಮನನೀಯವಾಗಿದೆ.

'ಮಹಾದೇವಿಯಕ್ಕನ ಕೆಲವು ವಚನಗಳು' ಎಂಬ ವಿಮರ್ಶೆಯಲ್ಲಿ ಕ್ರಾಂತಿಕಾರಿ ವಚನಕಾರ್ತಿ ಮಹಾದೇವಿಯಕ್ಕನ ವಚನಗಳನ್ನು ೧೯೨೬ರಲ್ಲಿ ಮೊಟ್ಟಮೊದಲು ಪ್ರಸಿದ್ಧಿ ಪಡಿಸಿದ ಪಿ.ವಿ. ಹಳಕಟ್ಟಿಯವರನ್ನು ನೆನೆಯುತ್ತ, 'ಅವರು ಒಂದು ಘಟ್ಟಕ್ಕೆ ತಂದು ನಿಲ್ಲಿಸಿರುವ ಕಾರ್ಯವನ್ನು ಇನ್ನೊಂದು ಹೆಜ್ಜೆ ಮುಂದುವರಿಸುವುದೇ ನಮ್ಮ ಲೇಖನದ ಮುಖ್ಯೋದ್ದೇಶ. ಇದು ಅವರ ಸಂಗ್ರಹಕ್ಕೆ ಒಂದು ಬಗೆಯ ಪರಿಶಿಷ್ಟದಂತೆ, ಪರಿಷ್ಕಾರದಂತೆ ಇದೆಯೆಂದು ಬೇಕಾದರೂ ಹೇಳಬಹುದು' ಎಂದು ಕನ್ನಡವನ್ನು ರೂಪಿಸಿದ ತೀನಂಶ್ರೀ ಅವರು ಸೌಜನ್ಯದಿಂದ ನುಡಿದಿರುವುದು ಅವರ ಪ್ರತಿಭೆ, ವ್ಯುತ್ಪತ್ತಿ ಮತ್ತು ಅಭ್ಯಾಸ ಮುಪ್ಪುರಿಗೊಂಡ ಸ್ಫಟಿಕಮಣಿಯ ಮನಸ್ಸನ್ನು ದರ್ಶಿಸುತ್ತದೆ.

ಪರಿಹರನ 'ಮಹಾದೇವಿಯಕ್ಕನ ರಗಳೆ'ಯಲ್ಲಿ ಅಕ್ಕ ಹಾಡಿದ ಗೀತ ವಿಷಯಗಳು, ಚಾಮರಸನ 'ಪ್ರಭುಲಿಂಗಲೀಲೆಯ ೧೦ನೆಯ ಮತ್ತು ೧೭ನೆಯ ಗತಿಗಳಲ್ಲಿ ನಿರೂಪಿತವಾಗಿರುವ ಮಹಾದೇವಿಯಕ್ಕನ ಕಥೆಯಲ್ಲಿರುವ ಅಕ್ಕನ ವಚನಗಳು, ಹಲಗೆಯ ದೇವರ, ಶಿವಗಣ ಪ್ರಸಾದಿ ಮಹಾದೇವಯ್ಯನ ಪಾಠದಲ್ಲಿರುವ ಅಕ್ಕನ ವಚನಗಳು–ಅವುಗಳೂ ಸೂಕ್ಷ್ಮ ವ್ಯತ್ಯಾಸವನ್ನು ಸಂಶೋಧನಾ ದೃಷ್ಟಿಯಿಂದ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯಗಳನ್ನು ನೀಡಿ– ಈ ರೀತಿಯ ಅಧ್ಯಯನಕ್ಕೆ ಮಾರ್ಗದರ್ಶಿ ಸೂತ್ರವನ್ನು ನೀಡಿದ್ದಾರೆ. ಅಕ್ಕನ ವಚನಗಳ ಪ್ರಾಮುಖ್ಯತೆಯನ್ನು ಕುರಿತು ಅದು ವೀರಶೈವರ ಮನನ ಮಂತ್ರವಾಗಿ ಪರಿಣಮಿಸಿದ ಅವಳ ವಚನಗಳು ಇಂದು ಜಾತಿಮತಗಳ ಎಲ್ಲೆಯನ್ನು ದಾಟಿ ಎಲ್ಲ ಕನ್ನಡಿಗರ ಹೃದಯವನ್ನು ಸೂರೆಗೊಂಡಿವೆ. ಅವುಗಳ ಕಾವ್ಯ ಸಂಪತ್ತೂ ಅವುಗಳಲ್ಲಿ ವ್ಯಕ್ತವಾಗುವ ಮಹಾದೇವಿಯ ಮೂರ್ತಿಸ್ವರೂಪವೂ ಕನ್ನಡ ಸಾಹಿತ್ಯಕ್ಕೆ ಭೂಷಣವಾಗಿ ನಿಂತಿವೆ' ಎಂದು ನುಡಿದಿದ್ದಾರೆ. ಧರ್ಮಾಧರ್ಮದ ಸೂಕ್ಷ್ಮ ವಿವೇಚನೆ, ಸ್ತ್ರೀಸ್ವಾತಂತ್ರ್ಯದ ಅಖಂಡವ್ಯಾಪ್ತಿಯ ಮೊಟ್ಟಮೊದಲ ಕನ್ನಡ ಸ್ತ್ರೀಮಾಣಿಕ್ಯ ಅಕ್ಕಮಹಾದೇವಿಯ ವಚನಗಳ ಮೂಲ, ಆಳ ವಿಸ್ತಾರಗಳನ್ನು ಪರಿಚಯಿಸಿ, ವಚನಕಾರರ ಮತ್ತು ವಚನ ವಿಶ್ಲೇಷಣೆಯ ರಾಜಮಾರ್ಗವನ್ನು ಸೃಷ್ಟಿಸಿದವರು ತೀನಂಶ್ರೀ.

(೨೦೦೬)

ಸುಜನಾ ಕಾವ್ಯ: 'ಸೋತವರ ಪಾಡೆ ಹೀಗೆ'

ಸುಜನಾ ಅವರ 'ಸೋತವರ ಪಾಡೆ ಹೀಗೆ' ಎಂಬ ಕವನ ಕನ್ನಡಿಗರ ನೋವನ್ನು, ದುರ್ಗತಿಯನ್ನು ದೇಸಿ ನುಡಿಯಲ್ಲಿ ಅಭಿವ್ಯಕ್ತಿಸಿರುವ ಅಪರೂಪ ಸೃಷ್ಟಿಯಾಗಿದೆ.

> **'ಮಮ್ಮಿ ಡ್ಯಾಡಿಯರು ಬಂದು ಅಮ್ಮ ಅಪ್ಪಂದಿರೆಲ್ಲ ಆದರ ಆಳಾದರು**
> **ನಮ್ಮ ಅರಿಲಿಗಾಕಾಶದಲಿ ಮಿನುಗಲೆಡೆಯಿಲ್ಲ.'**

ಎಂಬಲ್ಲಿ 'ನಮ್ಮ ಅರಿಲು' ರೂಪಕವಾಗಿ ಕನ್ನಡದ ಅರಿಲಿಗೆ (ನಕ್ಷತ್ರಕ್ಕೆ) ಆಕಾಶದಲ್ಲಿ ಅಂದರೆ ಅವಕಾಶದಲ್ಲಿ ಮಿನುಗಲು ಎಡೆಯಿಲ್ಲವಾಗಿರುವುದು–ಕನ್ನಡ ಜನತೆ ತನ್ನ ನಾಡಿನಲ್ಲಿ ತನ್ನ ಅವಕಾಶವಲ್ಲಿ ಮಿನುಗಲು ಅಂದರೆ ಉಳಿದು ಉಸಿರಾಡಲು–ಸಾಧ್ಯವಿಲ್ಲದ ಹೀನಸ್ಥಿತಿಯನ್ನು ಪ್ರಕಟಿಸಿದೆ. ಕನ್ನಡ ಮಾಧ್ಯಮದಲ್ಲಿ ಓದಿದ ಕನ್ನಡ ಅರಿಲಿಗೆ ಅವಕಾಶವಿಲ್ಲದೆ ಆಂಗ್ಲಮಾಧ್ಯಮದವರಿಗೆ ಆಳಾಗುವ ಸತ್ಯವನ್ನು ಸ್ಪಷ್ಟಗೊಳಿಸಿದೆ.

> **'ನಮ್ಮ ನೆಲಕೆ ನೆಲೆಯಿಲ್ಲ, ನೇಸರಿಗೆ ಬಾನಿಲ್ಲ;**
> **ತಿಂಗಳಾದರೂ ಈಗ ಬರಿ ಸಂಬಳದ ತಿಂಗಳು'**

ಎಂಬ ಸಾಲುಗಳು ಇಂದಿನ ಬಹುರಾಷ್ಟ್ರೀಯ ಕಂಪನಿಗಳ ಧಾಳಿಯಲ್ಲಿ ಸಿರಿವಂತರ, ಪರಭಾಷೆ, ಪರರಾಜ್ಯದವರಿಗೆ ನೆಲಮಾರಲು ಈಗಿನ ಆಡಳಿತ ವ್ಯವಸ್ಥೆ ತಂದಿರುವ ಕಾನೂನಿನಲ್ಲಿ ಯಾರೇ ಆಗಲಿ ಇನ್ನೂರು ಎಕರೆವರೆಗೆ ಜಮೀನು ಕೊಂಡುಕೊಂಡು ಜಮೀನ್ದಾರರಾಗುವ ಪದ್ಧತಿ ಕರ್ನಾಟಕದಲ್ಲಿ ಜಾರಿಗೆ ಬಂದಿರುವತ್ತ ಗಮನ ಸೆಳೆಯುತ್ತದೆ. ದೇಸಿಗರು ಜಮೀನು ಮಾರಿಕೊಂಡಾಗ ಕುಂಡಿಯೂರಲು ನೆಲೆಯಿಲ್ಲದಾಗಿ, ಅವರ ಜೀವಪೋಷಕ ಜೀವನದಾಧಾರವಾಗಿದ್ದ ಎರಡೂ ನಾಲ್ಕೋ ಎಕರೆ ನೆಲದ ಮೇಲಿನ ನೇಸರನನ್ನು ಕಾಣಲು ಅವರಿಗೆ ಬಾನಿಲ್ಲವಾಗುತ್ತದೆ. ಕನ್ನಡ ಜನ ನೆಲೆಗೆಟ್ಟು ನೇಸರು ಕಾಣದ ಕೂಲಿಗಳಾಗಿ ತಿಂಗಳನ್ನು (ಬೆಳದಿಂಗಳು, ಚಂದ್ರ) ಕಾಣಲಾಗದೆ–ಅಂದರೆ ಸಹಜ ಆನಂದವನ್ನು, ಸಹಜ ಬದುಕನ್ನು ಅನುಭವಿಸಲಾಗದೆ, ತಿಂಗಳ ಸಂಬಳದ ಆಳಾದ ದಾರುಣ ಸ್ಥಿತಿಯನ್ನು ಈ ಕಾವ್ಯ ಚಿತ್ರಿಸಿದೆ. ಇದು ಸಾಮಾಜಿಕ ಸಮಸ್ಯೆ ಕಾವ್ಯಕಲೆಯಾದ ಬಗೆಗೆ ಅನನ್ಯ ಉದಾಹರಣೆ.

> **'ಯಾವ ಕದರಿಗೂ ಈಗ ಹೊಗರಿಲ್ಲವು,**
> **ಹೊಗರಿಗೂ ಈಗ ಪೊಗರಿಲ್ಲವು**
> **ತಂಗದಿರ ಬೆಂಗದಿರರೆಲ್ಲ ಬಿಟ್ಟ ಟಗರು.'**

ಕವರಪ್ಪ ಎಂಬ ಹೆಸರು ಇಂದು ಹಳೆಯದು. ಕಿರಣನಾಗುವ ಆಸೆಯಲ್ಲಿ ಆ ಕವರಿನ ಹೊಗರು ಪೊಗರು ಇಲ್ಲದಂತಾಗಿರುವ ನಾವು–ಆ ಕವರಿಲ್ಲದೆ, ನಮ್ಮದೇ ನಾಡಿನಲ್ಲಿ ತಂಗದಿರು ಅಂದರೆ ಚಂದ್ರ, ಬೆಂಗದಿರು ಅಂದರೆ ಸೂರ್ಯನ ರೀತಿ ಮೆರೆದವರು–ಇಂದು ಆಂಗ್ಲಭಾಷೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಧಾಳಿಯಲ್ಲಿ ನಮ್ಮವರೆ ಸೃಷ್ಟಿಸಿದ ವ್ಯವಸ್ಥೆಯಲ್ಲಿ ದೇವರಿಗೆ ಬಿಟ್ಟ ಟಗರುಗಳಾಗಿದ್ದೇವೆ!

ನಮ್ಮ ನಾಡಿನಲ್ಲಿ ನಾವು ಕನ್ನಡಿಗರು nobody's property ಆಗಿ ಬಲಿಪಶುವಾಗಲು ತಯಾರಾಗಿರುವುದನ್ನು ನಾವು, ನಮ್ಮ ಭಾಷೆ (ಜನತೆ) ನಾಶವಾಗುತ್ತಿರುವುದನ್ನು ಈ ಸಾಲುಗಳು ಸಮರ್ಥವಾಗಿ ಚಿತ್ರಿಸಿವೆ. ಇಂತಹದೊಂದು ಜೀವಂತ ಸಮಸ್ಯೆಯನ್ನು ಹೀಗೆ ಕಾವ್ಯಕಲೆಯಾಗಿಸುವುದು ಸಾಧ್ಯವೇ ಎನಿಸುತ್ತದೆ. ಇದು ಯುವ ಚಿಂತನಶೀಲ ಹೋರಾಟಮಯ ಕವಿಗಳಿಗೆ ಮಾರ್ಗದರ್ಶಿ ಕಾವ್ಯಶೈಲಿಯಾಗಿದೆ.

'ನನ್ನಿ ಚೆನ್ನಿಯರೆಲ್ಲ ಸತ್ಯ ಸೌಂದರ್ಯದರಮನೆಯಲ್ಲಿ
ಈಗ ಗೂನು ಬೆನ್ನಿಯರು.
ನಲವಿರದೆ ಲೇಸುಗೆಟ್ಟವರೆಲ್ಲ ಖುಷಿಗೊಂಡರು!'

'ನನ್ನಿ ಚೆನ್ನಿಯರೆಲ್ಲ ಸತ್ಯ ಸೌಂದರ್ಯದರಮನೆಯಲ್ಲಿ ಈಗ ಗೂನು ಬೆನ್ನಿಯರು' ಎಂಬುದೊಂದು ನನ್ನಿಯ ಸಮರ್ಥ ರೂಪಕ. ಅನಂತರದ 'ನಲವಿರದ ಲೇಸುಗೆಟ್ಟವರೆಲ್ಲ ಖುಷಿಗೊಂಡರು!' ಎಂಬುದು ನಲಿವು ಲೇಸು ಇಲ್ಲದೆ ಖುಷಿಗಾಗಿ ಆಸೆಪಟ್ಟ ಕನ್ನಡಿಗರ ಹೀನಸ್ಥಿತಿ.

ಕವಿ ನುಡಿಯುತ್ತಾರೆ:

'ಸೋತ ಜನಗಳ ಪಾಡೆ ಹೀಗೆ, ಅವರ ಆಡುಮಾತುಗಳೆಲ್ಲ
ಸುಡುಗಾಡ ಸೇರಿ ಜೀವಂತ ದಹನಗೊಂಡಿರುವವು.'

ನಮ್ಮ ಕನ್ನಡನುಡಿ ಸುಡುಗಾಡ ಸೇರಿ ಜೀವಂತ ದಹನಗೊಂಡಿರುವಾಗ, ಈಗ ನಮಗೆ 'ವಿಶ್ವವೇ ನಮ್ಮ ದೇಶ'. ಸಿರಿವಂತ ಪರಭಾಷಿಯರೇ ಒಡೆಯರು. ಈ ಕೀಳರಿಮೆಯಿಂದ **'ಅವರ ಮನೆಸೂರಿನಲಿ ಹದ್ದು ಸುಳಿದಾಡಿದರು । ಕಾಣುವುದು ನಮಗೆ ಗರುಡ!'** ಅವರು, ಅವರ ಮನೆಮಾರು ಅವರ ಹೆಂಡತಿಯರೇ ಈ ನೆಲದ ಅಣುಗರಿಗೆ ಒಡತಿಯರು.

'ಒಡತಿಯರ ಕಿವಿಯ ಹಿತ್ತಾಳೆ ಕುಂದಣದ ಚಿನ್ನ;
ತಾಯ ಕೊರಳಿನ ತಾಳಿ ಏನೆಂಥ ಬಣ್ಣ ಹೇಳಿ?'

ನಮ್ಮ ಅವ್ವನ ತಾಳಿಗೆ ಬೆಲೆ ಇಲ್ಲ. ಅದು ಚಿನ್ನವಾದರು ಏನೆಂಥ ಬಣ್ಣ ಎಂಬ ಕೀಳರಿಮೆ. ಒಡತಿಯ ಕಿವಿಯ ಹಿತ್ತಾಳೆ–ನಮಗೆ ಕುಂದಣಚಿನ್ನ ಎಂದು ಹೋಲಿಕೆ ನೀಡುತ್ತ ನಮ್ಮ ಕೀಳರಿಮೆಯನ್ನು ಪ್ರತಿಮಾತ್ಮಕವಾಗಿ ಬಣ್ಣಿಸಿದ್ದಾರೆ.

'ನಾಡು ಪರದೇಶಿ, ಕಾಡು ಸುಡುಗಾಡು,
ತೆರೆದ ಮಾರುಕಟ್ಟೆಯಲ್ಲೀಗ ವಿಶ್ವವೇ ನಮ್ಮ ದೇಶ!
ಅಲ್ಲಿ ಮಾರಾಟಕ್ಕೆ ಮಾಲು ನಮ್ಮ ಬಾಳು!'

ಕನ್ನಡನಾಡು ಪರರಾಜ್ಯದವರ, ಪರದೇಶಿಯರ ಪಾಲಾಗುತ್ತಿದೆ. ಕಾಡು ಸುಡುಗಾಡಾಗುತ್ತಿದೆ. ಬಂಡವಾಳಶಾಹಿ, ಹಣದಾಹಿಗಳಿಂದ ಕಾಡು ಇಲ್ಲವಾಗಿ ಪರಿಸರ ನಾಶವಾಗುತ್ತಿದೆ. ನಾವು ನಮ್ಮ ನಾಡಿನಲ್ಲಿ ಪರದೇಶಿಗಳಾಗುತ್ತಿದ್ದೇವೆ ಎಂಬ ನುಡಿ 'ನಾಡು, ಪರದೇಶಿ' ಎಂಬ ಧ್ವನಿಯಲ್ಲಿ ಅಡಗಿದೆ. ಬೆಂಗಳೂರು, ಮಂಗಳೂರು ಹಾಗೂ ಇತರ ನಗರಗಳ ಸುತ್ತಮುತ್ತಲ ಪಟ್ಟಣಗಳ ಜಮೀನಿನಲ್ಲಿ ಅರಿಲು, ನೇಸರು, ಬಾನು ಕಾಣುತ್ತಿದ್ದ ಜನ ಹಣದಾಸೆಗೆ ಹಾಗೂ ಆಳುವವರ ವ್ಯವಸ್ಥೆಯಿಂದ ಜಮೀನು ಮಾರಿಕೊಂಡು ಹಣದ ಅಮಿಷದ ಲೋಲುಪತೆಯಲ್ಲಿ ನೆಲಮಾರಿ ನಿರ್ಗತಿಕರಾಗಿ, ತನ್ನ ಕುಟುಂಬಕ್ಕೆ ತನ್ನ ನಾಡಿಗೆ ನೆಲೆಯಾಗಿದ್ದ ನೆಲ ಇಲ್ಲದಂತಾಗಿ ನೆಲಕೊಂಡವರಲ್ಲಿ ತಿಂಗಳ ಕೂಲಿಗೆ ಸಾಲುನಿಲ್ಲುವ ಹೀನಸ್ಥಿತಿಗೆ ಬಂದಿದ್ದಾರೆ. ಎರಡು ಮೂರು ಎಕರೆ ಹೊಲದಲ್ಲಿ ಒಂದು ಪುಟ್ಟ ಸಂಸಾರ ಸುಖ ನೆಮ್ಮದಿಯಿಂದ ಇದ್ದುದು, ಗ್ರಾಮದ ಜಮೀನು ಮಾರಿ ಗ್ರಾಮಾಭಿವೃದ್ಧಿಯ ನಾಟಕ ನೋಡುವ 'ಮೂಡು ಪಡುವೆಡೆ, ದಿಕ್ಕಿಲ್ಲವಾಗಿ, ತೆಂಕ ಬಡಗಗಳೆಲ್ಲ ದಿಕ್ಕೆಟ್ಟವೊ' ಎಂಬಂತೆ ಜನತೆ ದಿಕ್ಕೆಟ್ಟಿದೆ. ನಮ್ಮ ಬಡವರ ನೆಲದಲ್ಲಿ ನಗರದ ಬಹುಮಹಡಿ ಕಟ್ಟಡಕ್ಕೆ ಬದಲಾಗಿ 'ಎಸ್ಟೇಟ್ ಹೋಮ್' ಸಿರಿವಂತರಿಗೆ ಬೇಲಿ ಹಾಕಿಕೊಂಡು ನಿಂತಿದೆ. ಇಂದಿನ **ಕ್ರೂರವ್ಯವಸ್ಥೆ–ಸ್ವತಂತ್ರ ದೇಶದಲ್ಲಿ ಸ್ವತಂತ್ರದ ಹೆಸರಿನಲ್ಲಿ–ಸಾಮಾನ್ಯ ಜನತೆಯನ್ನು ಮಾರಾಟಕ್ಕೆ ಇಟ್ಟ ದುರಂತ ಇಲ್ಲಿ ಕಾವ್ಯವಾಗಿದೆ.** ಜನರ ನೋವು, ದುರಂತ ಬಾಳಿನಿಂದಾದ ಸಾಮಾಜಿಕ ಸಮಸ್ಯೆಗೆ ಸ್ಪಂದಿಸಿದ ಕವಿಚೇತನ ನುಡಿಯುತ್ತಿದೆ: **'ಅಲ್ಲಿ ಮಾರಾಟಕ್ಕೆ ಮಾಲು ನಮ್ಮ ಬಾಳು!'** ಈ ಕಾವ್ಯಧ್ವನಿಯನ್ನು ಜನ ತಿಳಿಯಬೇಕಾಗಿದೆ. ತಿಳಿದು ತಿದ್ದುಕೊಂಡು ಎಚ್ಚರವಾಗಿ ಬಾಳಬೇಕಾಗಿದೆ. ನಮ್ಮ ಜಮೀನನ್ನು ಉಳಿಸಿಕೊಂಡು ನಾವು ಉಳಿಯಬೇಕಾಗಿದೆ.

(೧೯೯೭)

○

ಉ.ಕಾ. ಸುಬ್ಬರಾಯಾಚಾರ್ಯ: ನೀರವ ಸಾಧಕ

ನೀರವ ಎಂದರೆ ಮೌನ, ನಿಶ್ಶಬ್ದ. ಸಾಧಕನ ಸಾಧನೆಯು ನೀರವದಲ್ಲಿ ಹುಟ್ಟಿ ಬೆಳೆದು ತನ್ನ ಸುಗಂಧಭರಿತ ಫಲವನ್ನು ನೀಡಿ ಸಾರ್ಥಕವಾಗುತ್ತದೆ. ಹಾಗೆ ಸಾಧಕರಾಗಿ ಬದುಕಿ ಬಾಳಿದ ಉ.ಕಾ. ಸುಬ್ಬರಾಯಾರ್ಚಾ ಅವರ ಅಭಿಮಾನಿಗಳು, ಶಿಷ್ಯರು, ಸ್ನೇಹಿತರು ಅವರು ಗತಿಸಿ ಹನ್ನೊಂದು ವರ್ಷವಾದ ನಂತರ ಹೊರತಂದಿರುವ 'ನೀರವ ಸಾಧಕ' ಸ್ಮರಣ ಸಂಚಿಕೆ ಒಂದು ಅಪೂರ್ವಜೀವದ ಬೆಳಕನ್ನು ನೆನಪಿನಲ್ಲುಳಿಸಿದೆ. ಉಕಾಸು ಸ್ಮರಣ ಸಮಿತಿ ಕನ್ನಡಿಗರಿಗೆ ಹಾಗೂ ಜಗತ್ತಿಗೆ ನೀಡಿದ ಒಂದು ಉತ್ತಮ ಕೃತಿ ಇದಾಗಿದೆ. 'ಉಕಾಸು' ಹೆಸರು ಕೇಳಿದ್ದವರಿಗೆ ಅವರು ಮಹಾತ್ಮಾಗಾಂಧಿಯವರ ಆದರ್ಶಕ್ಕೆ ಒಳಗಾಗಿ ಬಾಳಿದವರು ಎಂಬುದು ವಿವಿಧ ಲೇಖಕರ ಅನುಭವದ ನುಡಿಗಳ ಸ್ಮೃತಿ ಬರಹಗಳಲ್ಲಿ ದಾಖಲಾಗಿ ಓದುಗನಿಗೆ ಸ್ವಚ್ಛತೆ, ಶುದ್ಧ ಜೀವನದ ಬೆಳಕನ್ನು ನೀಡುತ್ತದೆ.

ಪ್ರೊ. ಉ.ಕಾ. ಸುಬ್ಬರಾಯಾಚಾರ್ ಅವರ ಸಹೋದ್ಯೋಗಿಗಳು, ಶಿಷ್ಯರು ತಮ್ಮ ಅನುಭವವನ್ನು ಹೇಳುವಾಗ ಆ ಬೆಳಕಿನಲ್ಲಿ ನಿಂತು, ತಮ್ಮ ನೆರಳನ್ನು ದಾಖಲಿಸಿರುವುದು ಸತ್ಯದ ದಾಖಲೆಯಾಗಿ, ಸ್ವವಿಮರ್ಶೆಯ ಬರಹವಾಗಿ ಆತ್ಮೀಯವಾಗುತ್ತದೆ. ಜೊತೆಜೊತೆಗೆ ಉಕಾಸು ಅವರ ಶುಭ್ರ ಬದುಕು ಸ್ಪಷ್ಟವಾಗುತ್ತದೆ. ಜಿ.ಎಸ್. ಶಿವರುದ್ರಪ್ಪ ಅವರು ಸುಬ್ಬರಾಯಾಚಾರ್ಯ ಅವರನ್ನು 'ಶುಭ್ರಾಯಾಚಾರ್ಯರು' ಎಂದು ಕರೆಯುತ್ತಿದ್ದರು ಎಂದು ಹೇಳುತ್ತ ಅದೇ ಹೆಸರಿನಲ್ಲಿ ಪ್ರಭುಶಂಕರ ಅವರು ಬರೆದಿರುವ ಸ್ಮೃತಿಚಿತ್ರವು ಅವರ ಅನುಭವವನ್ನು ನಮ್ಮದಾಗಿಸುತ್ತದೆ. 'ಅಶಿಸ್ತು, ಅಪ್ರಾಮಾಣಿಕತೆ, ಅಸಹಾಯಕತೆ ಇತ್ಯಾದಿಗಳ ಸಮರ್ಥ ಪ್ರತಿನಿಧಿ ನಾನು. ಅವರೋ ಇವೆಲ್ಲಕ್ಕೂ ವಿರುದ್ಧವಾದ ಗುಣಗಳ ಸಾಕಾರ ಮೂರ್ತಿ. ಕತ್ತಲೆ ಬೆಳಕನ್ನು ಆರಾಧಿಸುವಂತಿತ್ತು ನಾನು ಅವರನ್ನು ಆರಾಧಿಸುತ್ತಿದ್ದ ರೀತಿ–ನಮ್ಮಿಬ್ಬರ ವರ್ಣ ಸಾಮ್ಯದಿಂದಲೂ ಈ ಮಾತು ನಿಜವಾಗಿತ್ತು!' ಎಂದು ಹೇಳುವ ಸತ್ಯಶೀಲ ಬರಹ ಪ್ರಭುಶಂಕರ ಅವರದಾಗಿದೆ.

'ಅವರ ಉಡುಗೆಯಂತೇ ಬಿಳಿದು, ಹೃದಯ' ಎಂಬ ಲೇಖನದಲ್ಲಿ ಎಂ. ಕೃಷ್ಣೇಗೌಡ ಅವರು ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾಯೋಜನೆಯ ದತ್ತು ಗ್ರಾಮವಾದ ಕಾಮನಕೊಪ್ಪಲಿನಲ್ಲಿ ನಡೆದ ಹತ್ತು ದಿನಗಳ ಸೇವಾ ಶಿಬಿರದಲ್ಲಿ ಒಂದು ಗುಂಪಿನ ವಿದ್ಯಾರ್ಥಿನಿಯರನ್ನು ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಛೇಡಿಸಿದ ಕಾರಣ ಆ ಶಿಬಿರ

ರಣರಂಗವಾದಾಗ, ಅದನ್ನು ಬಗೆಪರಿಸಿದ 'ನೀರವಸಾಧಕ' ಉಕಾಸು ಅವರ ಶಾಂತಿ, ಸಹನೆ, ಮೌನ ಪ್ರಾರ್ಥನೆಯನ್ನು ಬಣ್ಣಿಸಿದ್ದಾರೆ. ಉಕಾಸು ಅವರು ಮೈಸೂರಿನ ಒಂಟಿಕೊಪ್ಪಲಿನ ಮಿಡ್ಲ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದಾಗ ಒಂದನೇ ತರಗತಿಯಲ್ಲಿ ಓದುತ್ತಿದ್ದ ಬಿ.ಪಿ. ಚಂದ್ರಾಬಾಯಿಯವರು ಅವರನ್ನು ಹತ್ತಿರದಿಂದ ಬಲ್ಲವರಾಗಿ ಅವರ ಒಟ್ಟು ವ್ಯಕ್ತಿತ್ವವನ್ನು; ಸ್ವಾತಂತ್ರ್ಯ ಚಳುವಳಿ, ಅವರು ಭಾಗವಹಿಸಿದ ಬಗೆ, ತಲೆಗೆ ಪೆಟ್ಟಾದುದನ್ನು ವಾಸ್ತವಾಂಶಗಳಿಂದ ದಾಖಲಿಸಿದ್ದಾರೆ.

ಸಹಾಯಕ ವಿದ್ಯಾರ್ಥಿಕ್ಷೇಮಪಾಲಕನಾಗಿ ಮೈಸೂರು ವಿಶ್ವವಿದ್ಯಾನಿಲಯ ಸೇರಿದ, ಬಿ.ಕೆ. ಶಿವಣ್ಣ ಅವರು 'ಎಂಥ ಪುಣ್ಯಾತ್ಮನ ಕೈಕೆಳಗೆ ಕೆಲಸ ಮಾಡುವ ಯೋಗ್ಯವಪ್ಪಾ ನನ್ನದು!' ಎಂದು ಹೆಮ್ಮೆಪಟ್ಟಿದ್ದಾರೆ. ಉಕಾಸು ಅವರು ಹಾಸ್ಟಲ್‌ನ ವಾರ್ಡನ್ ಆಗಿದ್ದಾಗ ಮಾನಸಗಂಗೋತ್ರಿ ಹಾಸ್ಟಲ್‌ನಲ್ಲಿದ್ದ ತೀ.ನಂ. ಶಂಕರನಾರಾಯಣ ಅವರು 'ಕೊಠಡಿಗಳು ಕೊಳಕಾಗಿದ್ದರೆ, ಪುಸ್ತಕಗಳು ಚೆಲ್ಲಾಪಿಲ್ಲಿಯಾಗಿದ್ದರೆ ಅದನ್ನು ಸರಿಪಡಿಸುವಂತೆ ಅವರು ನಮಗೆ ಹೇಳುತ್ತಿರಲಿಲ್ಲ. ಬದಲಾಗಿ ಅವರೇ ಮಾಡಲು ಮುಂದಾಗುತ್ತಿದ್ದರು. ಅದರಿಂದ ನಾಚಿಕೆಪಟ್ಟುಕೊಂಡು ನಾವೇ ಮುಂದಿನ ಕೆಲಸ ಮಾಡುತ್ತಿದ್ದೆವು' ಎಂದು ತಿಳಿಸುತ್ತ, ಉಕಾಸು ಅವರ ಮಾರ್ಗದರ್ಶಕತ್ವದಲ್ಲಿ ಅಧ್ಯಯನ ಪ್ರವಾಸ ಕೈಗೊಂಡುದು ಮತ್ತು ತಾವು ಅಧ್ಯಾಪಕರಾದಾಗ ಅದೇ ಕ್ರಮ ಅನುಸರಿಸಿದ್ದನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಕನ್ನಡ ಪ್ರೊಫೆಸರ್ ಆದ ಉಕಾಸು ಅವರ ಬೋಧನೆಯನ್ನು ಕುರಿತು ಅವರ ವಿದ್ಯಾರ್ಥಿ ಕೆ.ಆರ್. ಶೇಷಗಿರಿ ಅವರು 'ನನ್ನ ಗುರು ಉಕಾಸು' ಎಂಬ ಲೇಖನದಲ್ಲಿ 'ಉಕಾಸು ಅವರೇನೋ ಮುಚ್ಚುಮರೆಯಿಲ್ಲದೆಯೆ ನಮ್ಮ ಮುಂದೆಲ್ಲವನ್ನು ಇಡುತ್ತಿದ್ದರು; ಆದರೆ ಅರ್ಥವಾಗಬೇಕಲ್ಲ. ಹಾಗಾಗಿ ಅವರು ಅತ್ಯುತ್ತಮ ಅಧ್ಯಾಪಕರೆನಿಸಲಿಲ್ಲವೆಂದು ಸ್ವಲ್ಪ ಸಂಕೋಚವಾಗಿಯೇ ಹೇಳಬೇಕು' ಎಂದು ನುಡಿದಿದ್ದಾರೆ. ಹೀಗೆ ಇಲ್ಲಿನ ಲೇಖನಗಳು ಸತ್ಯನಿಷ್ಠವಾಗಿವೆ.

ಕರ್ಮಯೋಗಿ ಆಗಲಾರದೆ ಯೋಗಿ ಆಗಲು ಆಶಿಸಿದ ಭೇ. ಪಂ. ಹರೀಶ್ ಅವರು 'ಕರ್ಮಯೋಗಿ ಉಕಾಸು' ಎಂಬ ಲೇಖನದಲ್ಲಿ ತಮ್ಮ ಸೋಲುಗಳನ್ನು ಹೇಳುತ್ತ ಉಕಾಸು ಅವರ ಗೆಲುವನ್ನು ದಾಖಲಿಸಿ ವಸ್ತುನಿಷ್ಠ ಬರಹ ನೀಡಿದ್ದಾರೆ. ಎಸ್.ವಿ. ಪರಮೇಶ್ವರ ಭಟ್ಟರು ತಮ್ಮ ನೆನಪನ್ನು ಪ್ರಾರಂಭಿಸಿರುವುದು ಒಂದು ಅಪೂರ್ವ ಅನುಭವವನ್ನು ದರ್ಶಿಸುತ್ತದೆ. ಅವರು ನುಡಿಯುತ್ತಾರೆ: 'ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರು ತಮಗೆ ಅಗತ್ಯವಿದ್ದಾಗ ತಮ್ಮ ಸಣ್ಣ ಪುಟ್ಟ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಲು ಪುಟ್ಟಯ್ಯ ಎಂಬ ಹೆಸರಿನ ಸೇವಕ (ಈಗಿನ ಪರಿಭಾಷೆಯಲ್ಲಿ ಹೇಳುವುದಾದರೆ ನಾಲ್ಕನೇ ದರ್ಜೆಯ ನೌಕರ)ನು ನೇಮಕವಾಗಿದ್ದನು. ಈತ ಪ್ರಾಮಾಣಿಕ, ತರುಣ, ನಿಷ್ಠಾವಂತ. ಒಮ್ಮೆ ನಾನು ಲೋಕಾಭಿರಾಮವಾಗಿ ಆ ಮಾತು ಈ ಮಾತು ಆಡುತ್ತ ಪುಟ್ಟಯ್ಯನನ್ನು ಕುರಿತು ಶ್ರೀ ಉ.ಕಾ.ಸು ಅವರ ವಿಷಯದಲ್ಲಿ ನಿನ್ನ ಅಭಿಪ್ರಾಯವೇನೆಂದು ಕೇಳಿದೆ. ಒಡನೆಯೇ ಆತನು

'ಮಹಾಸ್ವಾಮಿ, ಅವರು ದೇವರಂತಹ ಮನುಷ್ಯರು. ಅವರಿಗೆ ಪುನರ್ಜನ್ಮವಿಲ್ಲ. ಈ ಜನ್ಮ ಮುಗಿದೊಡನೆಯೇ ಅವರು ಮೋಕ್ಷಕ್ಕೆ ಹೋಗುತ್ತಾರೆ!' ಎಂದನು. ನಾನು 'ನನ್ನ ವಿಷಯ ಹೇಗೆ?' ಎಂದು ಕೇಳಿದೆ. ಆತ 'ನಿಮಗೆ ಪತ್ತಾರು ಜನ್ಮಬೇಕು' ಎಂದನು. ಅಂತಹ ದೇವರಂತಹ ಮನುಷ್ಯ ಉಕಾಸು ಇಲ್ಲಿ ನಡೆದಾಡಿದ್ದೊಂದು ಪವಾಡ ಎನಿಸುತ್ತದೆ.

ಅವರ ತಂಗಿ ಸುಶೀಲಾ, ತಂಗಿಯ ಮಕ್ಕಳಾದ ಜಿ. ಸರೋಜಿನಿ ಮತ್ತು ಜಿ. ಸರಸ್ವತಿ ಅವರು ಉಕಾಸು ಅವರ ನಿಸ್ವಾರ್ಥ ಬದುಕು, ಶಿಸ್ತು ಹಾಗೂ ನಿಯಮವನ್ನು ಕುರಿತು ಬರೆದಿದ್ದಾರೆ. ಸುಜನಾ ಅವರು ತಮ್ಮ ಮನಸ್ಸಿನ ಶಾಂತಿಯನ್ನು ಉಕಾಸು ಕಾಪಾಡಿದ್ದನ್ನು ಹೆಮ್ಮೆಯಿಂದ 'ತಾವಿದ್ದ ಆವರಣದಲ್ಲಿ ಶುಚಿತ್ವವನ್ನೂ, ಶಾಂತಿಯನ್ನೂ, ಸೌಮ್ಯವಾದ ಶಿಸ್ತನ್ನೂ ನೆಲೆಗೊಳಿಸುವಲ್ಲಿ ಗುರುಗಳದೇ ಒಂದು ವಿಶಿಷ್ಟ ವಿಧಾನವಿತ್ತು' ಎಂದು ಬಣ್ಣಿಸಿದ್ದಾರೆ. ಡಿ.ಕೆ. ಈರೇಗೌಡ ಅವರು 'ಮಾನವೀಯ ಮೌಲ್ಯಗಳೆಲ್ಲ ಅಪಹಾಸ್ಯಕ್ಕೀಡಾಗುತ್ತಿರುವ ಇಂದಿನ ಸಂದರ್ಭದಲ್ಲಿ ಉದಾತ್ತಗುಣಗಳನ್ನೇ ತಿಂದುಂಡು ಬದುಕಿದ ಉಕಾಸು ಇಂದು 'ಪ್ರಸ್ತುತ' ಆಗುವರೇ ಎಂಬ ಕೊರಗು ನನಗೆ ಇದ್ದೇ ಇದೆ' ಎಂದು ನುಡಿದಿದ್ದಾರೆ.

ಉಕಾಸು ಅವರ ಕೃತಿ 'ಸಹೃದಯ ಸ್ಪಂದನ'ವನ್ನು ಕುರಿತು ಸಿ.ಪಿ.ಕೆ. ಅವರು ವಿಮರ್ಶಿಸುತ್ತ 'ಸಹೃದಯತೆಯ ಲಕ್ಷಣವಂದರೆ ಔದಾರ್ಯ. ಅದು ಉಕಾಸು ಅವರ ವಿಮರ್ಶೆಯಲ್ಲಿ ಎಲ್ಲೆಡೆ ಗೋಚರಿಸುತ್ತದೆ' ಎಂದು ಹೇಳಿದ್ದಾರೆ. ಉಕಾಸು ಅವರ ಇತರ ಕೃತಿಗಳ ವಿಮರ್ಶೆಯೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೇಷ್ಠಜೀವಿ ಉಕಾಸು ಅವರನ್ನು ಕುರಿತು ದೇಜಗೌ, ಸಿಡಿಎನ್, ಟಿ.ವಿ. ವೆಂಕಟಾಚಲಶಾಸ್ತ್ರಿ, ಜಿ.ಟಿ. ನಾರಾಯಣರಾವ್, ಡಿ.ಕೆ. ರಾಜೇಂದ್ರ, ಹಾಮಾನಾ ಮುಂತಾದವರು ತಮ್ಮ ನೆನಪನ್ನು ದಾಖಲಿಸಿದ್ದಾರೆ.

ಶುದ್ಧ ನಡೆನುಡಿಯ ಉಕಾಸು ಅವರು ಶ್ರೀರಾಮಕೃಷ್ಣ ಪರಮಹಂಸ, ಶ್ರೀ ವಿವೇಕಾನಂದ, ಶ್ರೀ ಅರವಿಂದ, ಮಹಾತ್ಮಾ ಗಾಂಧಿ ಮತ್ತು ಶ್ರೀ ಕುವೆಂಪು ಅವರ ಆದರ್ಶಕ್ಕೆ ತಕ್ಕಂತೆ ನಡೆಯುತ್ತಿದ್ದವರು. 'ನೀರವ ಸಾಧಕ' ಉಕಾಸು ಸ್ಮರಣ ಸಂಪುಟ ಪ್ರತಿ ಕನ್ನಡಿಗರ ಮನೆಯಲ್ಲಿದ್ದು ಕುಟುಂಬದ ಎಲ್ಲರ ಬದುಕು ಸ್ವಚ್ಛ ಸುಂದರವಾಗಲು ಎಲ್ಲರೂ ಓದಬೇಕಾದ ಕೃತಿಯಾಗಿದೆ. ಇಂತಹ ಕೃತಿಯನ್ನು ನೀಡಿದ ಉಕಾಸು ಸ್ಮರಣ ಸಮಿತಿ ಮತ್ತು ಸಂಪಾದಕ ಸುಜನಾ ಅವರಿಗೆ ಕನ್ನಡಿಗರು ಋಣಿಯಾಗಿರಬೇಕಾಗಿದೆ.

(೧೯೯೭)

ಚದುರಂಗ: ಹೆಜ್ಜಾಲ

ಚದುರಂಗರ ನಾಲ್ಕನೆ ಕಾದಂಬರಿ 'ಹೆಜ್ಜಾಲ' ಇದೇ ತಾನೆ ಬಿಡುಗಡೆ ಹೊಂದಿದೆ. ಈ ಕಾದಂಬರಿಯ ಕಥಾನಾಯಕ ಜೀತದಾಳು ಕಾಲೂರ. ಅವನು ತನ್ನಂತಹ ಇನ್ನೊಬ್ಬ ಜೀತದಾಳಾದ ಗಂಗೂರನ ಜೊತೆ ರಾತ್ರಿ ವೇಳೆ ಹಂದಿ ಕಾಟ ತಪ್ಪಿಸಲು ಎಚ್ಚರವಾಗಿ ಹೊಲ ಕಾಯುವಾಗ ತನ್ನ ಸ್ನೇಹಿತನ ಒತ್ತಾಯಕ್ಕೆ ತನ್ನ ಕಥೆಯನ್ನು ಹೇಳುತ್ತಾನೆ. ಜಗಳೂರಿನ ದಾಯಾದಿಗಳಲ್ಲಿ ಅಣ್ಣನಾದ ಯಜಮಾನ ಸಂಗಪ್ಪನ ಆಳು ಕಾಲೂರ. ತಮ್ಮನಾದ ಸಾಹುಕಾರ ರಂಗಪ್ಪನ ಆಳು ಗಂಗೂರ. ಸಾಹುಕಾರರಿಬ್ಬರೂ ಆಜನ್ಮ ವೈರಿಗಳಂತೆ ದ್ವೇಷ ಸಾಧಿಸುವವರಾಗಿದ್ದು ಅವರ ಮನೆಯ ಆಳುಗಳು ಪರಮಾಪ್ತ ಸ್ನೇಹಿತರಾಗಿರುವುದು ಹೆಜ್ಜಾಲ ಕಥೆ ಕಾಣಿಸುವ ಒಂದು ವೈರುಧ್ಯ. ಕಥೆ ಬೆಳೆದಂತೆ ಮನುಷ್ಯ ನಿರ್ಮಿತ ಜೀವನದ ಕಟ್ಟು ಕಟ್ಟಳೆ, ರೀತಿ ನೀತಿಯಲ್ಲಿ ಹಲವು ಪಾತ್ರಗಳು ತಮ್ಮ ಒಳಹೊರಗನ್ನು ಬಿಚ್ಚಿಕೊಳ್ಳುತ್ತ ಸಾಗುತ್ತವೆ.

ಕಾಲೂರನ ಬಳಗ ಎಂದರೆ ಅವ್ವ ದ್ಯಾವಿ; ಸನ್ಯಾಸಿ ಮಾಯಮ್ಮ ಮತ್ತು ಪುಟ್ಟಬಸಮ್ಮ. ಸನ್ಯಾಸಿ ಮಾಯಮ್ಮ ಅವನಿಗೆ ಆಲದೂರಿನ ಆಲದಮರದಲ್ಲಿ ಮೂಡಿದ ಹೆಣ್ಣಿನ ಆಕಾರವನ್ನು ತೋರಿಸುತ್ತ ಅದೇ ಆಲದಮ್ಮ ಎಂದು ಹೇಳುತ್ತಾಳೆ. ಆಲದಮ್ಮನ ವಿಶೇಷ: ಮಕ್ಕಳಾದ ಹೆಂಗಸರ ಮೊಲೆಗಳಲ್ಲಿ ಹಾಲು ಬರೋದು ತಡ ಆದ್ರೆ, ಸಾಕಷ್ಟು ಬರದೆ ಹೋದ್ರೆ ಆಲದಮ್ಮನಿಗೆ ಹರಸಿಕೊಂಡು ಹಾಲು ಬಂದ್ರೆ ಸ್ತನ್ಯ ಕರೆದು ಅಭಿಷೇಖ ಮಾಡುವುದು. ಕಾಲೂರನಿಗೆ ಹಾಲಿಲ್ಲದಾಗ ಅವನ ತಾಯಿ ಹಾಗೆ ಹರಸಿಕೊಂಡು ಹಾಲಿನ ಅಭಿಷೇಕ ಮಾಡಿದ್ದೆಂದು, ದ್ಯಾವಿ ಹೆತ್ತ ತಾಯಿಯಾದರೆ ಬೆಳಸುವ ತಾಯಿ ಆಲದಮ್ಮ ಎಂದು ವಿವರಿಸುತ್ತಾಳೆ. ಅದನ್ನು ಕೇಳಿದ ಆ ಬಾಲಕ ಆಲದಮರಕ್ಕೆ ಕಟ್ಟಿದ್ದ ಗಂಟೆಗಳನ್ನು ಬಾರಿಸುತ್ತ ಆಲದಮ್ಮನನ್ನು ತನ್ನ ಮೈಮನಗಳಲ್ಲಿ ತುಂಬಿಕೊಳ್ಳುತ್ತಾನೆ.

ಬದುಕಿನ ಹೆಜ್ಜಾಲ ಹೇಗೆಂದರೆ-ಹಾವು ಕಚ್ಚಿದಾಗ ತನ್ನನ್ನು ಉಳಿಸಿದ ಕಾಲೂರನು ತನ್ನ ಗಂಡನಿಗೆ ಹುಟ್ಟಿದವನೆಂದು ಗೊತ್ತಾದಾಗ ರಂಪ ಮಾಡಿದ ಮಾದೇವಮ್ಮ ತಮ್ಮ ಆಸ್ತಿಯ ಒಂದು ಭಾಗವು ಅವನಿಗೆ ಹೋಗಲು ಕಾರಣವಾಗುತ್ತಾಳೆ. ನ್ಯಾಯದ ಮುಖ್ಯಸ್ಥೆಯಾದ ಅಜ್ಜಮ್ಮನ ನ್ಯಾಯ ತೀರ್ಮಾನ ಮಾನವೀಯ ಮೌಲ್ಯದಿಂದ ಕೂಡಿದ್ದು, ಕಾಲೂರನಿಗೆ ಅಜ್ಜಮ್ಮನ ತೋಟ ದಾನವಾಗಿ ಬರುತ್ತದೆ. ಬಾಲ್ಯ ಸ್ನೇಹಿತನಾದ ರಾಜಣ್ಣ ಚಿಕ್ಕ

ಯಜಮಾನನಾಗಿ; ತನ್ನ ಅಜ್ಜಿಯ ಆಸ್ತಿ ಜೀತಗಾರ ಕಾಲೂರನ ಪಾಲಾದ ದ್ವೇಷದಿಂದ ಅಜ್ಜಮ್ಮ ನೀಡಿದ್ದ ದಾನಪತ್ರ ಸುಡಿಸಿ, ಅವನ ಗುಡಿಸಿಲಿಗೆ ಬೆಂಕಿ ಹಚ್ಚಿಸಿ ಅವನು ಆಲದೂರು ಬಿಡುವಂತೆ ಮಾಡುವ ಕ್ರೂರಿಯಾಗುತ್ತಾನೆ.

ತನ್ನ ಹುಟ್ಟಿದೂರಿನಲ್ಲಿ ಕಾಲೂರಲಾಗದ ಕಾಲೂರ ಹೆಂಡತಿ ಸ್ಯಾವಂತಿ, ಮಗಳು ಸಿವನಿ ಅವರ ಜೊತೆ ಬೆಟ್ಟದೂರಿನ ಕೂಸಪ್ಪನವರಲ್ಲಿ, ರಾಮನಾಥಪುರದ ಶೆಟ್ಟರ ಮನೆಯಲ್ಲಿ, ಶ್ರೀನಿವಾಸಪುರದ ಚೆನ್ನಕೇಶವಯ್ಯನವರ ತೋಟದಲ್ಲಿ ದುಡಿಯುತ್ತಾನೆ. ಸಪನೆಯ ಪ್ರತೀಕವಾದ ಸ್ಯಾವಂತಿ–ಬುದ್ಧಿ ಬೆಳೆಯದ ಋತುಮತಿಯಾಗಿ ಗಂಡಿಗೆ ಆಸೆ ಪಡುವ ಚೆನ್ನಕೇಶವಯ್ಯನ ಮೊಮ್ಮಗಳನ್ನು ಶುಶ್ರೂಷೆ ಮಾಡುತ್ತಾಳೆ. ಅವರ ಸೇವೆಗೆ ಮೆಚ್ಚಿ ಮಾನವೀಯ ಅಂತಃಕರಣದಿಂದ ಹತ್ತು ಕುಂಟೆ ತೋಟವನ್ನು ದಾನವಾಗಿ ನೀಡಬೇಕೆಂದು ಮನಸ್ಸು ಮಾಡಿ ಪತ್ರ ತರಲು ಕಳುಹಿಸಿ, ಪತ್ರ ತರುವಷ್ಟರಲ್ಲಿ ಚೆನ್ನಕೇಶವಯ್ಯನವರು ಸತ್ತು ಕಾಲೂರ ನೆಲದೊಡೆಯನಾಗುವ ಆಸೆ ಈಡೇರದಂತಾಗುತ್ತದೆ.

ಚೆನ್ನಕೇಶವಯ್ಯನವರ ಮಗ, ಅಪ್ಪನ ಜಮೀನು ಮಾರಿ–ಕಾಲೂರನ ಸೇವೆಗೆ ಪ್ರತಿಯಾಗಿ ನೂರು ರೂಪಾಯಿಯ ನೋಟನ್ನು ಕೊಡುತ್ತಾನೆ. ಬಡವನೂ ನಿಸ್ಸಹಾಯಕನೂ ಆದ ಅವನು ಅರಕಲಗೂಡಿನ ಮಿಲ್ಟ್ರಿ ಹೋಟೆಲಿನಲ್ಲಿ ಊಟ ಮಾಡಿ ಚಿಲ್ಲರೆ ಕೇಳಿ ನೀಡಿದ ನೂರು ರೂಪಾಯಿ ನೋಟನ್ನು ಅವನು ನೀಡಿಯೇ ಇಲ್ಲವೆಂದು, ಅಂತಹ ದರಿದ್ರನಲ್ಲಿ ನೂರು ರೂಪಾಯಿ ಇರಲು ಸಾಧ್ಯವಿಲ್ಲವೆಂದು ಹೋಟೆಲಿನಿಂದ ಓಡಿಸುತ್ತಾರೆ.

ಮೃದುಭಾವದ ಕಾಲೂರನ ಮಗಳು ಸಿವನಿ ರಾಗಮಾಲು ನುಡಿಸಿ ಕಾಫಿ ತೋಟದ ಲೈನು ಮನೆಯವರಿಗೆ ಪ್ರೀತಿ ಪಾತ್ರಳಾಗಿರುತ್ತಾಳೆ. ಅಂತಹ ಹೂ ಮಗಳು ಜ್ವರ ಕಾದು ಸಾಯುತ್ತಾಳೆ. ಅವನ ಒಲುಮೆಯ ರಾಗ ಬತ್ತಿದಂತಾಗುತ್ತದೆ. ಕಾದಂಬರಿಕಾರ ಕಾಲೂರನ ಮಾನಸಿಕ ತುಮಲಿನ ಸಮಯದಲ್ಲಿ ಅವನು ರಾಗಮಾಲು ನುಡಿಸುತ್ತ ಆಲದ ಮರದ ಆಸರೆಯಲ್ಲಿ ನೆಮ್ಮದಿ ಕಾಣುತ್ತಿದ್ದುದನ್ನು ಬಣ್ಣಿಸುತ್ತ ಈಗ ಅವನ ಒಲುಮೆ ಬತ್ತಿದಂತಾಗಲು ರಾಗಮಾಲನ್ನು ಸಿವನಿ ಜೊತೆ ದಫನ್ ಮಾಡುತ್ತಾನೆ.

ಕ್ರೂರಿ ಫಿಲಿಪ್ ಕಾಲೂರನ ಮನೆಯಲ್ಲಿಯೇ ಅವನಿಗೆ ಕುಡಿಸಿ ಅವನು ನಿದ್ದೆಯಲ್ಲಿದ್ದಾಗ ಸ್ಯಾವಂತಿಯ ಮೇಲೆ ಆಕ್ರಮಣ ಮಾಡಿದರೂ ಅವಳು ತನ್ನ ಶೀಲವನ್ನೇ ಕಾಪಾಡಿಕೊಳ್ಳುತ್ತಾಳೆ. ಕಾಫಿ ತೋಟದ ಕೆಲಸಗಾರರು ಕಾಲೂರನನ್ನು ತಲೆಹಿಡುಕನೆಂದು ಕೀಳಾಗಿ ಮಾತಾಡುತ್ತಾರೆ. ಅವನು ಸ್ಯಾವಂತಿಯ ಶೀಲದ ಬಗ್ಗೆ ಸಂಶಯ ತಾಳುತ್ತಾನೆ. ಅವಳು ಕೆರೆಗೆ ಬಿದ್ದು ಪ್ರಾಣಹತ್ಯೆ ಮಾಡಿಕೊಳ್ಳುತ್ತಾಳೆ. ಎಲ್ಲವನ್ನೂ ಕಳೆದುಕೊಂಡು ನೆಲೆ ಇಲ್ಲದಂಥಾದ ಕಾಲೂರ ರಾಮನಾಥಪುರದ ಶೆಟ್ಟರ ಬಳಿ ಬಂದು ಅವರು ತೋರಿಸಿದ ಸಾಹುಕಾರ ಸಂಗಪ್ಪನವರ ಹೋರಿ ಮೇಯಿಸುವ ಆಳಾಗಿ ಜೀತ ಮಾಡುತ್ತಿರುತ್ತಾನೆ. ಇಷ್ಟೊಂದು ಘಟನೆಯನ್ನು ಕಥೆಯಾಗಿ ಭೂತಕಾಲದಂತೆ ಕಾಲೂರ ಗಂಗೂರನಿಗೆ ಹೇಳುವಾಗ್ಗೆ ೧೫೮ ಪುಟಗಳಲ್ಲಿ ಕಥೆ ಹರಿದು ಕಾದಂಬರಿಯ

ಎರಡನೇ ಮೂರು ಭಾಗ ಮುಗಿದಿರುತ್ತದೆ. ಇನ್ನು ಮಿಕ್ಕ ೧೦೨ ಪುಟಗಳು ಜಗಳೂರಿನ ಬದುಕಿನ ಘಟನೆಗಳಾಗಿ ಕಾದಂಬರಿ ವರ್ತಮಾನದ ನೆಲೆಯಲ್ಲಿ ಸಾಗುತ್ತದೆ.

ಜಗಳೂರಿನಲ್ಲಿಯೂ ಆಲದ ಮರವಿದೆ. ಊರಿನ ಹೆಸರಿಗೆ ತಕ್ಕಂತೆ ಜಗಳವಾಡುತ್ತ ಕತ್ತಲು ಕಾಣುವ ದಾಯಾದಿಗಳಾದ ಸಂಗಪ್ಪ ಮತ್ತು ರಂಗಪ್ಪ ಇದ್ದಾರೆ. ಅವರ ತಂದೆ ದೊಡ್ಡೇಗೌಡರ ಕಥೆಯನ್ನು ಸೀನಪ್ಪ ಹೇಳುವುದರಲ್ಲಿ, ಮನೆಯ ಒಡೆಯ ಸತ್ತಾಗ ಅವನ ಮಕ್ಕಳು ಸೊಸೆಯರು ಹೆಣದ ಮುಂದೆಯೆ ಭಾಗವಾಗಿ ಹೋಗುವ ದುರಂತವಿದೆ. ತೋಟದ ಓಣಿಯಲ್ಲಿ ಸಾಗುತ್ತಿರುವ ರಂಗಪ್ಪ ರುದ್ರಮ್ಮರ ಮೇಲೆ ಹೋರಿ ಬಿಡಲು ಕಾಲೂರನಿಗೆ ಹೇಳಿದ ಕಾಳಮ್ಮ, ಅವನು ಹಾಗೆ ಮಾಡಲು ಹಿಮ್ಮೆಟ್ಟಿದಾಗ, ತಾನೇ ಅವನ ಕೈಗೆ ಬಿಗಿಯಾಗಿ ಮುಷ್ಟಿಯಿಂದ ಗುದ್ದುವಳು. ಆಗ ಆಗಬಹುದಾದ ಅನಾಹುತ ನೆನೆದು ಪ್ರಜ್ಞೆತಪ್ಪಿ ಬಿದ್ದ ಕಾಲೂರನನ್ನು ಗಂಗೂರ ಎಚ್ಚರಿಸಿ ರಂಗಪ್ಪ ರುದ್ರಮ್ಮ ಏನೂ ಅನಾಹುತವಾಗದೆ ಉಳಿದರೆಂದು ಹೇಳುವನು. ಈ ಬಗೆಯ ದಾಯಾದಿ ದ್ವೇಷ ಕಾಲೂರನನ್ನು ಅಲುಗಾಡಿಸುತ್ತದೆ.

ಇದೆಲ್ಲದರ ಮಧ್ಯೆ ರುದ್ರಮ್ಮ ಸಾಕಿದ ಚೆಲುವಿ ಮತ್ತು ಕಾಳಮ್ಮನ ಮಗ ಹೊನ್ನ ಪರಸ್ಪರ ಪ್ರೀತಿಸುತ್ತಾರೆ. ಅವರ ಪ್ರೀತಿಗೆ ದಾಯಾದಿ ಮತ್ಸರ ಅಡ್ಡಬರುತ್ತದೆ. ಅವರ ಮನೆಯ ಆಳುಗಳಾದ ಗಂಗೂರ ಮತ್ತು ಕಾಲೂರರ ಸಹಾಯದಿಂದ ಆ ಪ್ರೇಮಿಗಳು ಜಗಳೂರು ಬಿಟ್ಟು ಹೋಗುತ್ತಾರೆ. ಅದು ಈ ಕಥೆಯಲ್ಲಿ ಸುಂದರ ಪ್ರೇಮಜಾಲದ ಪ್ರಕರಣವಾಗಿ ಮೂಡಿಬಂದಿದೆ.

ಕಾಲೂರ ಮತ್ತು ಗಂಗೂರರ ಅಪೂರ್ವ ಗೆಳೆತನಕ್ಕೆ ಜವಾನ ಮಂಚನಾಯಕ ಸಾಕಿಯನ್ನು ಕೆಣಕಿದ್ದು ಕಾರಣವಾಗಿ, ಕಾಲೂರನನ್ನು ಸಾಕಿ ಇಟ್ಟುಕೊಂಡಿರುವಳೆಂದು ಆರೋಪದ ಮಾತುಗಳು ಹೊರಡುತ್ತವೆ. ಮೀನು ಬೇಟೆಯ ದಿನ ಕಾಲೂರ ಮಂಚನಾಯಕರ ಜಗಳದಲ್ಲಿ ಕಾಲೂರನ ಕೂಳಿಯಿಂದ ಗಂಗೂರನ ಎರಡು ಕಣ್ಣುಗಳು ತೂತಾಗುತ್ತವೆ. ಗಂಗೂರನ ಕುರುಡಿಗೆ ತಾನೇ ಕಾರಣವೆಂದು ಕಾಲೂರ ಕೊರಗಿ ಜಗಳೂರನ್ನು ಬಿಟ್ಟು ಬಿಡಲು ತೀರ್ಮಾನಿಸಿ ಜ್ವರದ ತಾಪದಲ್ಲಿಯೇ ತೂರಾಡುತ್ತ ಹೋಗುತ್ತಾನೆ. ಒಂದು ಮರದ ಮೋಟಿನ ಆಶ್ರಯಕ್ಕೆ ತಲೆ ಕೊಟ್ಟಾಗ ಅವನಿಗೆ ಅವ್ವ, ಸ್ಯಾವಂತಿ, ಅಜ್ಜಮ್ಮ ನೆನಪಾಗಿ ಸಿವನಿ ನುಡಿಸುವ ರಾಗಮಾಲ ಕೇಳಿ ತನಗಾದ ಸಂಕಟ ಅನುಮಾನ ಎಲ್ಲ ಮರೆತುಹೋಗುತ್ತದೆ. ಎದ್ದು ನಿಂತು ತೂರಾಡುತ್ತ ಆಲದ ಮರದ ಬಳಿಗೆ ಹೋದಾಗ ಗಂಗೂರ ಹೇಳುತ್ತಿದ್ದ 'ಈ ಮರ ಒಂದು ಬ್ರಹ್ಮಾಂಡ ಕನಣ್ಣಿ' ಎಂಬ ಮಾತು ನೆನಪಾಗಿ ಆ ಬ್ರಹ್ಮಾಂಡದ ಬಿಳಿಲನ್ನು ಬಿಟ್ಟು ಕಾಂಡವನ್ನು ತಬ್ಬಿ ಬೇರಿನ ಮೇಲೆ ಕುಸಿಯುತ್ತಾನೆ. 'ಆಗ ಅವನ ಜೀವರಸ, ನೆತ್ತಿಯಿಂದ ಅವನ ಮುಖ ಎದೆ ಹೊಟ್ಟೆ ತೊಡೆ ಕಾಲು ಪಾದಗಳಿಗೆ ಇಳಿದು, ಅಲ್ಲಿಂದ ಕಾಂಡದ ಬೇರಿಗೆ ಸೋರಿ, ಕಾಂಡದ ಮೇಲೆ ಮೇಲೆ ಏರುತ್ತ, ಎಲೆಗಳ ಹಸಿರಿನಲ್ಲಿ ಒಂದಾಗಿ, ರೆಂಬೆ ಕೊಂಬೆಗಳಿಗೆ ಹರಿದು ಮರದ ಒಂದು ಹೊಸ ಬಿಳಿಲಾಗಿ ಇಳಿದಿತ್ತು' ಎಂದು ಕಾದಂಬರಿಕಾರರು ಚಿತ್ರಿಸಿ ಕಥೆಯನ್ನು ಮುಕ್ತಾಯಗೊಳಿಸಿದ್ದಾರೆ.

ಮನುಷ್ಯ ನಿರ್ಮಿತ ಬದುಕಿನ ಜಾಲ ಅವನಿಗೆ ಅರಿವಿಲ್ಲದಂತೆ ರೂಪುಗೊಳ್ಳುತ್ತ ಸಾಗುತ್ತಿದ್ದು ಅದರ ಒಂದು ಭಾಗವಾಗಿ ಅವನು ಸಾಗುತ್ತಿರುತ್ತಾನೆ. ಇಲ್ಲಿ ಪ್ರೀತಿ, ದ್ವೇಷ, ವಂಚನೆ, ಅನಾಚಾರ, ಅತ್ಯಾಚಾರ, ನೈತಿಕ ಆದರ್ಶ ಎಲ್ಲವೂ ಇದೆ. ಹಾಗೆಯೇ ಹೆಜ್ಜಾಲದಲ್ಲಿ ಆದರ್ಶದ ಅಜ್ಜಮ್ಮ, ಮಾಯಮ್ಮ, ದೊಡ್ಡೇಗೌಡ, ಸೀನಪ್ಪ, ಚೆನ್ನಕೇಶವಯ್ಯ ಇದ್ದಾರೆ. ದ್ವೇಷ ಅಸೂಯೆಯ ನಾಗಪ್ಪ, ರಾಜಣ್ಣ, ಮಾದೇವಮ್ಮ, ರಂಗಪ್ಪ, ಸಂಗಪ್ಪ, ರುದ್ರಮ್ಮ, ಕಾಳಮ್ಮ, ಮೇಸ್ತ್ರಿ ಫಿಲಿಪ್, ಜವಾನ ಮಂಚನಾಯಕ ಇದ್ದಾರೆ. ಈ ಬಗೆಯ ಜಗದಲ್ಲಿ ಸಾಗಬೇಕಾದ ದ್ಯಾವಿ, ಕಾಲೂರ, ಗಂಗೂರ, ಸ್ಯಾವಂತಿ, ಸಾಕಿ ಇದ್ದಾರೆ. ಇಲ್ಲಿ ಬದುಕು ಸಹ್ಯವಾಗುವುದು ಮೂರನೇ ಗುಂಪಿಗೆ ಆಸರೆಯಾಗುವ ಮೊದಲ ಗುಂಪಿನ ವ್ಯಕ್ತಿ ಶಕ್ತಿಗಳಿಂದ. ಇದನ್ನು ಅರಿತ ಚದುರಂಗ (ಸುಬ್ರಹ್ಮಣ್ಯರಾಜೇ ಅರಸು) ಅವರು ಕಾಲೂರನನ್ನು ಧ್ವನ್ಯಾರ್ಥವಾಗಿ ರೂಪಿಸಿಕೊಂಡು ಜೀತದಾಳಿನ ಮಹಾಕಾವ್ಯ ರಚಿಸಿದ್ದಾರೆ.

ಶ್ರೀಮನ್ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರ ಜೊತೆ ಮೈಸೂರಿನ ಅರಮನೆಯಲ್ಲಿ ಬೆಳೆದ ಸುಬ್ರಹ್ಮಣ್ಯರಾಜೇ ಅರಸು ಅವರನ್ನು ಕಾಡಿರುವುದು, ಆಳುವವರ ಸಿರಿವಂತರ ಹಾಗೂ ನಗರವಾಸಿಗಳ ತಳುಕಿನ ಜೀವನವಾಗದೆ, ಅವರ ಬಾಲ್ಯದ ಹಳ್ಳಿಗಾಡಿನ ಜನಸಾಮಾನ್ಯರ ಬದುಕಾಗಿದೆ. ದೀನದಲಿತರ ಎರಡು ಹೊತ್ತಿನ ಕೂಳಿಗಾಗಿ ನಡೆಸುವ ಹೊಡಬಾಳು; ಜಮೀನ್ದಾರ ಸಿರಿವಂತರ ದ್ವೇಷ ಅಸೂಯೆ ದರ್ಪ ಅವರನ್ನು ತೀವ್ರವಾಗಿ ಕಾಡಿದೆ. ಹುಣಸೂರಿನ ಸಮೀಪದ ಕಲ್ಲಹಳ್ಳಿಯಲ್ಲಿ ಹುಟ್ಟಿದ ಚದುರಂಗ ಅವರು ಬಾಲಕನಾಗಿದ್ದಾಗ ತನ್ನ ಮುಗ್ಧ ಕಣ್ಣುಗಳಲ್ಲಿ ತುಂಬಿಕೊಂಡ ಅಂದಿನ ಬದುಕನ್ನು ಹುಣಸೂರು ಪಿರಿಯಾಪಟ್ಟಣದ ಆಡು ನುಡಿಯಲ್ಲಿ ಆತ್ಮೀಯವಾಗಿ ಕಥೆಯಾಗಿಸಿದ್ದಾರೆ. (ಕಲ್ಲಹಳ್ಳಿಯಲ್ಲಿ ಈಗಲೂ ಜೈನ ಬಸದಿ ಇದೆ. 'ನಾವು ಮೂಲತಃ ಜೈನರು' ಎಂದು ಒಮ್ಮೆ ಮಾತನಾಡುವಾಗ ಚದುರಂಗರು ತಿಳಿಸಿದ್ದರು. ಕಥೆಗೆ ಕಲಾತ್ಮಕತೆಯ ನೆನಪಿನ ಹಾಗೂ ವರ್ತಮಾನದ ಬದುಕಿನ ಜಾಣುಜಾಡನ್ನು ಬಳಸಿದ್ದಾರೆ. ಒಂದು ಮರೆತು ಹೋದ ಸಂಸ್ಕೃತಿಯ ಪುನರ್ ನಿರ್ಮಾಣ ಮಾಡಿದ್ದಾರೆ. ನಮ್ಮ ನಾಡಿನ ಸಾಂಸ್ಕೃತಿಕ ಮೌಲ್ಯವನ್ನು ಓದುಗ ಕಂಡು ಅರಿಯುವಂತೆ ಅದರ ಎಲ್ಲ ಮಗ್ಗಲುಗಳನ್ನು ಸ್ಪರ್ಶಿಸಿದ್ದಾರೆ. ಕಾಲೂರನ ಹೆಂಡತಿ ಸ್ಯಾವಂತಿ ತೋಟದಲ್ಲಿ ಹೆರುವ ಸುಂದರ ಚಿತ್ರಣ, ದೊಡ್ಡೇಗೌಡರ ಹೆಣ ಮುಂದಿಟ್ಟುಕೊಂಡು ಪಾಲು ಪಡೆಯುವ ಮಕ್ಕಳ ಕ್ರೌರ್ಯ; ದೊಡ್ಡೇಗೌಡರ ನಾಯಿ ತನ್ನ ಪಾಲಾಗಿ ಆತ ಉಣ್ಣುತ್ತಿದ್ದ ತಟ್ಟೆಯನ್ನು ತನ್ನದೆಂದು ತನ್ನ ಮುಂಗಾಲುಗಳಿಂದ ಎಳೆದು ತಂದು ಹೆಣದ ಮುಂದೆ ಇಟ್ಟುಕೊಳ್ಳುವ ಚಿತ್ರ, ಆಲದ ಮರ ಹತ್ತಿ ವಡ್ಡರ ಮೊಟ್ಟೆ ತರುವ ಗಂಗೂರನ ಸಾಹಸ ಹಾಗೂ ಆಲದ ಮರದ ಬಣ್ಣನೆ ಓದುಗನ ಸ್ಮೃತಿಪಟಲದಲ್ಲಿ ಸದಾ ಇರುವಂತೆ ಚಿತ್ರಿತವಾಗಿದೆ. ಒಂದು ಹಿರಿಯ ಜೀವ ತನ್ನ ಮುಂದಿನ ಜನಾಂಗಕ್ಕೆ ನೀಡಿರುವ ಒಂದು ಅಪೂರ್ವ ಕೊಡುಗೆಯಾಗಿ ಈ ಕೃತಿ ಕನ್ನಡ ಜನಾಂಗಕ್ಕೆ ದೊರಕಿದೆ.

(೧೯೯೮)

೦

ತಿ.ತಾ. ಶರ್ಮ: ನನ್ನ ಜೀವನ ಮತ್ತು ಧ್ಯೇಯ

ಕನ್ನಡದ ಪುನರುಜ್ಜೀವನಕ್ಕೆ ಕರ್ನಾಟಕ ಏಕೀಕರಣಕ್ಕೆ ದುಡಿದು ರಾಷ್ಟ್ರಪ್ರೇಮಿಯಾಗಿದ್ದ ಚಿಂತಕ, ಸ್ವಾತಂತ್ರ್ಯಹೋರಾಟಗಾರ ತಿ.ತಾ ಶರ್ಮ ಕನ್ನಡದ ಶಕ್ತಿ, ಚೈತನ್ಯವಾಗಿದ್ದರು. ಅವರ ಒಂದೊಂದು ನುಡಿಯೂ ಕನ್ನಡ ದೀಕ್ಷೆಯನ್ನು ನೀಡುವಂತಹದಾಗಿತ್ತು. ಆ ನುಡಿಯನ್ನು ಕೇಳಿ ಕನ್ನಡ ದೀಕ್ಷೆಗೆ ಬದ್ಧರಾದ ಹಲವು ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬ. ಅವರ ಕಂಚಿನ ಕಂಠದಿಂದ ಹೊರಹೊಮ್ಮುತ್ತಿದ್ದ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಶಿಲ್ಪ ವೈಭವದ ಪರಿಯೇ ಕನ್ನಡ ತೇಜದಲ್ಲಿ ಕೇಳುಗನನ್ನು ಮುಳುಗಿಸಿಬಿಡುತ್ತಿತ್ತು. ಅಂತಹ ವೀರ ಕನ್ನಡಿಗ ತಿರುಮಲೆ ತಾತಾಚಾರ್ಯ ಶರ್ಮರ ಆತ್ಮಕಥೆ 'ನನ್ನ ಜೀವನ ಮತ್ತು ಧ್ಯೇಯ'.

ಉತ್ಥಾನ ಪತ್ರಿಕೆಯಲ್ಲಿ ೧೯೬೯ರಿಂದ ೧೯೭೩ರ ವರೆಗೆ ಪ್ರಕಟವಾದ ಆತ್ಮಕಥೆ ಈಗ ಪುಸ್ತಕರೂಪದಲ್ಲಿ ಅವರ ಸುಪುತ್ರ ಶ್ರೀರಂಗಾಚಾರ್ಯರ ಶ್ರಮದಿಂದ ಮೊದಲ ಮುದ್ರಣವಾಗಿ ಹೊರಬಂದಿದೆ. ತಂದೆಯಷ್ಟೇ ತೀವ್ರ ಕನ್ನಡಾಭಿಮಾನಿಯಾದ ಶ್ರೀರಂಗಾಚಾರ್ಯರು ನಿವೇದನೆಯಲ್ಲಿ 'ಈ ಲೇಖನಗಳೆಲ್ಲ ಶರ್ಮರು ತಾವು ಬರೆದುದನ್ನು ಸವರಿಸಿ-ಪುಟಮಿತಿಗೆ ಸೀಮಿತಗೊಳಿಸಿ ಕೊಟ್ಟಂಥವು' ಎಂದು ಹೇಳಿದ್ದಾರೆ. ಹೀಗಾಗಿ ಇದರ ಸಂಪಾದಕರು ಶ್ರೀರಂಗಾಚಾರ್ಯರಾಗಿದ್ದಾರೆ. ಹಾಗಿದ್ದೂ ಅದನ್ನು ತೋರಗೊಡದ ಅವರ ವಿನಯ, ಪಿತೃಭಕ್ತಿ ಮತ್ತು ಕನ್ನಡ ಪರಿಚಾರಿಕೆ ಅನನ್ಯವಾಗಿದೆ.

ಚಿಕ್ಕಬಳ್ಳಾಪುರದಲ್ಲಿ ಶ್ರೀನಿವಾಸ ತಾತಾಚಾರ್ಯ ಮತ್ತು ಜಾನಕಮ್ಮ ಅವರ ಮಗನಾಗಿ ಹುಟ್ಟಿ (೧೮೯೫); ಶ್ರೀನಿವಾಸ ತಾತಾಚಾರ್ಯರ ಚಿಕ್ಕಪ್ಪನವರಾದ ಶ್ರೀ ರಂಗಾಚಾರ್ಯರಿಗೆ ದತ್ತುಪುತ್ರನಾಗಿ ಬೆಳೆದ ತಿ.ತಾ. ಶರ್ಮ ಅವರ ಹೆಸರು ಲಕ್ಷ್ಮೀಕುಮಾರ ತಾತಾಚಾರ್ಯ. ಅವರ ದತ್ತು ತಂದೆಯವರು ಸೂಲಿಕುಂಟೆಯಲ್ಲಿದ್ದು ಗೊಲ್ಲಹಳ್ಳಿಯಲ್ಲಿ, ವಾಟದ ಹೊಸಹಳ್ಳಿಯಲ್ಲಿ ಉಪಾಧ್ಯಾಯರಾಗಿದ್ದರು. ಸಾಕು ತಾಯಿಯಾದ ಅಜ್ಜಿ ಅಲಮೇಲಮ್ಮನವರ ಗಾನವೈಭವ, ಚಿಕ್ಕಬಳ್ಳಾಪುರದ ರೆಡ್ಡಿ, ಗೌಡ ಜಮೀನುದಾರರ; ಸಹಜಕವಿ ಅಮೀನ ನಂಜುಂಡಪ್ಪ ಹಾಗೂ ಜನಸಾಮಾನ್ಯರ ಸಾಂಸ್ಕೃತಿಕ ಸಂಪತ್ತು ವಿವರವಾಗಿ ತಿ.ತಾ. ಶರ್ಮರ ಗಂಡುಶೈಲಿಯಲ್ಲಿ ಮೂಡಿ ಕಳೆದ ಶತಮಾನದ ಪ್ರಾರಂಭಕ್ಕೆ ಓದುಗನನ್ನು ಕೊಂಡೊಯ್ಯುತ್ತದೆ.

ಶರ್ಮ ಅವರು ದೈತ್ಯ ಆಕಾರದ ದೊಡ್ಡ ತಾತಂದಿರಾದ ಪುರಾಣಂ ರಾಮಾಚಾರ್ಯರನ್ನು 'ಅವರ ಕಿರು ಬೆರಳೇ ನನ್ನ ಮುಂಗೈಗಾತ್ರ' ಎಂದು ಪರಿಚಯಿಸಿದ್ದಾರೆ. 'ನಾನು ನನ್ನ ಮನೆಗೆ

ಕೀರ್ತಿ ತರದೆ ಇದ್ದರೆ ಹೋಗಲಿ, ಅಪಕೀರ್ತಿಗೆ ಕಾರಣನಾಗದೆ ಇದ್ದರೆ ಸಾಕು' ಎಂದು ಬಾಲ್ಯದಲ್ಲಿಯೇ ತೀರ್ಮಾನಿಸಿ ಅದರಂತೆ ನಡೆದು ಜೀವನ ನಡೆಸಿದ ರೀತಿ ಮತ್ತು ಧ್ಯೇಯದ ನಿಲುವು ಮುಂದಿನ ಜನಾಂಗಕ್ಕೆ ಮಾರ್ಗದರ್ಶಿಯಾಗಿದೆ.

ಅವರ ತಾತಂದಿರು ದೆವ್ವ ಬಿಡಿಸುವ ಪರಿಣತರಾಗಿ ಬಾಲಕ ಶರ್ಮರಿಗೆ 'ಯಾಕೋ ಹೆದರತಿ? ಎಲ್ಲಿದೆಯೋ ದೆವ್ವ? ಅದೆಲ್ಲ ಭಯದಿಂದ ಸೃಷ್ಟಿಯಾದ ಕಲ್ಪನಾ ಜೀವಿಗಳು; ಜೀವಿಗಳೂ ಅಲ್ಲ, ನೆರಳು... ಜನರಿಗೆ ತಿಳುವಳಿಕೆ ಬರ್ತಾ ಜನರನ್ನು ಕಂಡರೆ ದೆವ್ವಗಳು ಹೆದರಿಕೊಂಡು ಓಡುವ ಕಾಲ ಬರುತ್ತೆ' ಎಂದು ಹೇಳಿದ ನುಡಿ, ಅವರನ್ನು ಮನೋವೈಜ್ಞಾನಿಕ ಹಾಗೂ ವೈಚಾರಿಕ ಚಿಂತಕನನ್ನಾಗಿ ಮಾಡಿದೆ.

ತಿ.ತಾ. ಶರ್ಮ ಅವರು ತಾನು ಬಾಲ್ಯದಲ್ಲಿ 'ಆಚಾರ್ಯ ಸ್ವಾಮಿ' ಅಂದರೆ ಶ್ರೀನಿವಾಸಾಚಾರ್ಯ ಗುರುಗಳಿಂದ ಕಲಿತ ಸಂಸ್ಕೃತ ಪಾಠದ ಮಹತ್ವವನ್ನು ಕುರಿತು 'ಆಗ ಶಬ್ದ ಸಂಪತ್ತು, ಈಗ ಅರ್ಥ ಸಂಪತ್ತು' ಎಂದಿದ್ದಾರೆ. ಗೌರಿಬಿದನೂರಿನಲ್ಲಿ ಇಂಗ್ಲಿಷ್ ಶಾಲೆಯಲ್ಲಿ ಶಿಕ್ಷಕರಿಂದ ಕೇಳಿದ ಬುದ್ಧನ ಸಾಸಿವೆ ಕಾಳಿನ ಕತೆ ತಾನು ನಡೆಸುವ ಜೀವನವನ್ನು ಸದಾ ತಿದ್ದುತ್ತಿದೆ ಎಂದು ಬಾಲ್ಯದಲ್ಲಿ ಕೇಳಿದ ಕಥೆಯ ಆಗಾಧ ಪ್ರಭಾವವನ್ನು ದಾಖಲಿಸಿದ್ದಾರೆ. ಚಿಕ್ಕಬಳ್ಳಾಪುರ, ಬೆಂಗಳೂರು, ಹಾಸನದ ವಿದ್ಯಾಭ್ಯಾಸ; ಮಹಾರಾಜ ಕಾಲೇಜಿನ ಓದಿದ ವಿವರ ನೀಡುತ್ತ, ಜೀವನದ ಏಳು ಬೀಳು ತುಮುಲಗಳ ಸತ್ಯಸಂಗತಿಗಳ ಆತ್ಮಕಥೆ ಬರೆದಿದ್ದಾರೆ. 'ದತ್ತುಪುತ್ರ'ನಾಗಿ ದತ್ತು ತಂದೆ ತಾಯಿಯ ಆಕಾಂಕ್ಷೆಯಂತೆ ವಿವಾಹವಾಗಿ ಹೆತ್ತ ತಂದೆ ತಾಯಿ ಅಣ್ಣ ತಮ್ಮಂದಿರಿಂದ ದೂರಾದ ಅನುಭವದಿಂದ 'ದತ್ತವೆಂಬುದು ದೂಷ್ಯವಾದ ಆಚಾರ. ಈ ಆಚಾರದಲ್ಲಿ ಪಾರಮಾರ್ಥಿಕ ಪ್ರಾಪ್ತಿಗಿಂತ ಅಧಿಕವಾಗಿ ಲೌಕಿಕ ಲಾಭದಾಸೆ ಬಹಳವಾಗಿದೆ' ಎಂದಿದ್ದಾರೆ.

ಮಹಾರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್‌ನ ಎರಡನೇ ಪಾದದಲ್ಲಿ ಕನ್ನಡ ವಿಷಯ ತೆಗೆದುಕೊಂಡು ಬಾಪ್ಪ ಸುಬ್ಬರಾಯರು, ಕಾನಕಾನಹಳ್ಳಿ ವರದಾಚಾರರಿಂದ ಕನ್ನಡ ಅಭ್ಯಾಸಕ್ಕೆ ತೊಡಗಿ ಕನ್ನಡಾಭಿಮಾನಿಯಾದ ವಿವರ ನೀಡಿದ್ದಾರೆ. ಬೆಂಗಳೂರಿನಲ್ಲಿ 'ಅಮೆಚೂರ್ ನಾಟ್ಯ ಸಂಘ'ದಲ್ಲಿ ಆದ ಕೈಲಾಸಂ ಪರಿಚಯ; ಅವರ ಮೊದಲ ನಾಟಕ 'ಟೊಳ್ಳುಗಟ್ಟಿ'ಯನ್ನು ಮೊದಲ ಸಲ ರಂಗಭೂಮಿಗೆ ತಂದಾಗ ಕೈಲಾಸಂ ಅವರು ಮಾಧು, ಸಾಗತ್ತೆ ಪಾತ್ರ ವಹಿಸಿ, ತಾನು ಹಿರಣ್ಣಯ್ಯನ ಪಾತ್ರವಹಿಸಿದ ನಾಟ್ಯಾನುಭವ ಓದುಗರಿಗೆ ಉಣಬಡಿಸಿದ್ದಾರೆ. ಆ ನಾಟಕವನ್ನು 'ಕೈ ಹೇಳುತ್ತಾ ಹೋದ, ನಾನು ಬರೆಯುತ್ತಾ ಹೋದೆ. ಹೀಗೆ ನಡೆಯಿತು ಹೇಳಿ ಬರೆಸಿ' ಎಂದು ಕೈಲಾಸಂರ ಮೌಖಿಕ ನಾಟಕ ಕೃತಿರೂಪವಾದುದನ್ನು ತಿಳಿಸಿದ್ದಾರೆ.

ಮಾವನವರು ನಿವೃತ್ತರಾಗಿ ಮೈಸೂರಿನಿಂದ ಬೆಂಗಳೂರಿಗೆ ಬಂದ ಕಾರಣ ಹಾಗೂ ದತ್ತು ತಂದೆ ತಾಯಿಗಳನ್ನು ಅವರ ಇಳಿವಯಸ್ಸಿನಲ್ಲಿ ತನ್ನ ಓದಿಗಾಗಿ ಸಾಲಗಾರರನ್ನಾಗಿ ಮಾಡಬಾರದೆಂದು ವಿದ್ಯಾಭ್ಯಾಸ ನಿಲ್ಲಿಸಿ ಬೆಂಗಳೂರಿಗೆ ಬಂದು ನೆಲೆ ನಿಂತ ವಿವೇಚನಾಪೂರ್ಣ

ನಿಲುವು ತಿಳಿಸಿದ್ದಾರೆ. ಮದರಾಸಿನಲ್ಲಿ ಭಾರತ ಸರ್ಕಾರದ ಪ್ರಾಚ್ಯವಸ್ತು ವಿಮರ್ಶಾ ಶಾಖೆಯ ಶಿಲಾಶಾಸನಗಳ ವಿಭಾಗದ ಮುಖ್ಯಾಧಿಕಾರಿಗಳಾಗಿದ್ದ ರಾವ್ ಬಹದ್ದೂರ್ ಹೊಸಕೋಟೆ ಶ್ರೀನಿವಾಸಸಾಸ್ತ್ರಿಗಳ ಕೃಪೆಯಿಂದ ಮದರಾಸಿನಲ್ಲಿ ದೊರೆತ, ತೆಲುಗು-ಕನ್ನಡ ರೀಡರ್ ಕೆಲಸ ಬದುಕಿಗೆ ಆಸರೆಯಾಗಿ, ಶಿಲಾಶಾಸ್ತ್ರ ಅಧ್ಯಯನ ನಿಪುಣನಾದ ಅನುಭವ ಕಥನ ನೀಡಿದ್ದಾರೆ. ಅವರು ಲಿಪ್ಯನ್ವೇಷಣಾಖಾ ನಿಪುಣರಾಗಿ ಆಂಧ್ರಪ್ರದೇಶದ ಸಿಂಹಾಚಲ, ಧರಣಿಕೋಟೆ, ಪೆದ್ದಚೆರು, ಗುತ್ತಿಬೆಟ್ಟದ ಕಲ್ಯಾಣಿ ಚಾಲುಕ್ಯರ ಶಾಸನದ ಅಧ್ಯಯನ ನಡೆಸಿದ ವಿವರಗಳನ್ನು ಓದಿಯೇ ಆನಂದಪಡಬೇಕಾಗಿದೆ. ೧೯೨೧ರಲ್ಲಿ ಅವರ ಹೆಂಡತಿ ಶ್ರೀಮತಿ ರಾಜಮ್ಮನವರಿಗೆ ಅಹಮದಾಬಾದಿನಿಂದ ಅಖಿಲಭಾರತ ಸಂಗೀತ ಸಮ್ಮೇಳನಕ್ಕೆ 'ವೀಣಾ ವಿದುಷಿ'ಯಾಗಲು ಬಂದ ಆಹ್ವಾನ, ಅದೇ ವೇಳೆಯಲ್ಲಿ ಅಲ್ಲಿ ನಡೆಯುತ್ತಿದ್ದ 'ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ'; ಸರ್ಕಾರಿ ನೌಕರನಾಗಿ ಅಲ್ಲಿಗೆ ಹೋಗಲು ಒಪ್ಪದ ಮನಸ್ಸು, ಅಲ್ಲಿ ಭಾಗವಹಿಸಿದ್ದ ಕಾರಣ ಕೆಲಸ ಕಳೆದುಕೊಂಡು ನಿರುದ್ಯೋಗಿಯಾಗುವ ಭಯದ ತುಮುಲುಗಳನ್ನು ಆತ್ಮಕಥೆಯಲ್ಲಿ ತಿಳಿಸಿದ್ದಾರೆ. ಕೊನೆಗೆ ಹೋಗಲು ತೀರ್ಮಾನಿಸಿ ಅಲ್ಲಿ ಸ್ವಾತಂತ್ರ್ಯ ಪ್ರೇಮಿಗಳ ಒಡನಾಟಕ್ಕೆ ಸಿಕ್ಕು, ದೇಶಪ್ರೇಮದ ಕಿಚ್ಚು ಹೊತ್ತಿಸಿಕೊಂಡು ಸರ್ಕಾರಿ ಕೆಲಸ ಬಿಟ್ಟು ಬೆಂಗಳೂರಿನ ದೇಶೀಯ ವಿದ್ಯಾಶಾಲೆ (ಇಂದಿನ ನ್ಯಾಶನಲ್ ಹೈಸ್ಕೂಲ್)ನಲ್ಲಿ ಶಿಕ್ಷಕರಾಗಿ ಸೇರಿದ ಭಾವಲಹರಿ ಗದ್ಯಕಾವ್ಯವಾಗಿ ಹರಿದಿದೆ. ಅನಂತರ ೧೯೨೪ ಮಹಾನವಮಿಯಂದು 'ವಿಶ್ವಕರ್ನಾಟಕ' ಪತ್ರಿಕೆ ಸಂಪಾದಿಸಿದ್ದು ದಾಖಲಾಗಿ ಆತ್ಮಕಥೆ ಮುಕ್ತಾಯವಾಗಿದೆ.

ಒಬ್ಬ ರಾಷ್ಟ್ರಪ್ರೇಮಿ, ಕನ್ನಡದ ಚಿಂತಕ ತನ್ನ ವೈಯಕ್ತಿಕ ನೋವು ನಲಿವಿನಲ್ಲಿ ಭಾಷೆ, ನಾಡು ಮತ್ತು ರಾಷ್ಟ್ರಕ್ಕೆ ಸ್ಪಂದಿಸಿದ ದಾಖಲೆಯಾಗಿರುವ ಈ ಆತ್ಮಕಥೆ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇಲ್ಲಿ ವೈಯಕ್ತಿಕ ದಾಖಲೆಯ ಹೆಂಡತಿ ಮಕ್ಕಳ ವರ್ಷಕಾಲಗಳ ವ್ಯವಸ್ಥಿತ ವಿವರವಿಲ್ಲ. ಒಂದು ಚಲನಶೀಲ ವ್ಯಕ್ತಿತ್ವ ತನ್ನ ಜೀವನದ ಹೋರಾಟದಲ್ಲಿ ಸತ್ಯದ ಹಾದಿ ಹಿಡಿದು ವಿಕಾಸಗೊಂಡ ಘಟನೆಗಳ ಸರಮಾಲೆ ಈ ಆತ್ಮಕಥೆಯಾಗಿದೆ. ಈ ನಾಡಿನ ಜನ ಇದನ್ನು ಓದಿ ಅವರು ನಡೆದ ಹಾದಿಯಲ್ಲಿ ಒಂದೊಂದು ಹೆಜ್ಜೆ ಇಡಲು ಪ್ರಯತ್ನಿಸಿದರೆ ಕನ್ನಡ ನಾಡು ನುಡಿ ಮತ್ತೆ ಪ್ರಕಾಶಗೊಳ್ಳುತ್ತದೆ.

(೨೦೦೩)

ಸುಧಾಕರ: ಕಾಗಿನೆಲೆಯ ಕನಕದಾಸೋತ್ತಮ

ಕನಕದಾಸರು ದೀನದಲಿತರ ನೋವನ್ನು ಅನುಭವಿಸಿ ಅದನ್ನು ಕಾವ್ಯವಾಗಿಸಿದ ದಾಸಶ್ರೇಷ್ಠರು. ಅವರ ಚಿಂತೆಗಳು ಜನಸಾಮಾನ್ಯರನ್ನು ವಿಚಾರಶೀಲರನ್ನಾಗಿಸಲು ಪ್ರಯತ್ನಿಸಿದ ದಾಖಲೆಗಳಾಗಿವೆ. ಅವರ ವೈಚಾರಿಕತೆ ಹಾಗೂ ನೀತಿ ಬೋಧೆಯು ಜನಪದರ ನುಡಿಯಲ್ಲಿ ಮಡುಗಟ್ಟಿದೆ. ಅವರು ಕನ್ನಡ ಕಾವ್ಯಲೋಕಕ್ಕೆ ನೀಡಿದ ಹೊಸ ಸಾಹಿತ್ಯ ಪ್ರಕಾರ 'ಮುಂಡಿಗೆ'ಗಳನ್ನು ಕನ್ನಡಿಗರು ಇನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕನಕದಾಸರನ್ನು ತಿಳಿಯಲು ಪ್ರಯತ್ನಿಸಿರುವ ಸಾರ್ಥಕ ಕೃತಿ 'ಕಾಗಿನೆಲೆಯ ಕನಕದಾಸೋತ್ತಮ'. ಇದರ ಕರ್ತೃ ಸುಧಾಕರ ಅವರು ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನವರಾಗಿ ಆ ಪ್ರದೇಶದ ಹಳ್ಳಿಗರ ನುಡಿಯನ್ನು ವಿಮರ್ಶಾ ಭಾಷೆಯಾಗಿ ಬಳಸಿ ಹೊಸ ವಿಮರ್ಶಾ ನುಡಿಗಟ್ಟನ್ನು ನೀಡಿದ್ದಾರೆ. ಪಂಡಿತ ವಲಯಕ್ಕೆ ಸಾಮಾನ್ಯ ಗ್ರಾಮ್ಯ ಭಾಷೆಯ ಕಸುವನ್ನು ಪರಿಚಯಿಸಿದ್ದಾರೆ.

ಈ ಕೃತಿಯಲ್ಲಿ ಕನಕದಾಸರ ಜೀವನ, ಕಾಲ, ಕನಕದಾಸರು ಮತ್ತು ಕರ್ನಾಟಕ ಸಂಗೀತ, ಸಮಾಜ ಚಿಂತನೆ, ನೀತಿ ಬೋಧನೆ, ವೈಚಾರಿಕತೆ, ಕನಕ ಸಾಹಿತ್ಯದಲ್ಲಿ ಜಾನಪದ ಸೊಗಡು, ದಾಸ ಸಾಹಿತ್ಯಕ್ಕೆ ಸಂದ ಹೊಸ ಆಯಾಮ, ಮುಂಡಿಗೆಗಳು ಎಂಬ ವಿಭಾಗದಲ್ಲಿ ಆಧಾರ ಸಹಿತವಾಗಿ ವಿಚಾರಗಳನ್ನು ಮಂಡಿಸಿ ಕನಕದಾಸರನ್ನು ಅವರ ಕಾವ್ಯವನ್ನು ಪರಿಚಯಿಸಿದ್ದಾರೆ. ಒಂದು ಕುಗ್ರಾಮದಲ್ಲಿ ಜನಿಸಿದ ಸುಧಾಕರ ಅವರು ಆ ನೆಲದ ಭಾಷಾ ಕಸುವನ್ನು, ಸಂಸ್ಕೃತಿ ಸಂಪನ್ನ ಬದುಕನ್ನು ಕನಕದಾಸರ ಕಾವ್ಯವನ್ನು ವಿಮರ್ಶಿಸುವಲ್ಲಿ ಬಳಸಿರುವುದು ವಿಮರ್ಶಾ ಪರಂಪರೆಯಲ್ಲಿ ವಿಶಿಷ್ಟವಾಗಿದೆ. ಅವರು ಜನನುಡಿಯ ಮೊನಚುಗಾರಿಕೆಯನ್ನು ಯಥಾವತ್ತಾಗಿ ಬಳಸುತ್ತ ಕನಕರನ್ನು ಪರಿಚಯಿಸುವ ರೀತಿ ಹೊಸ ಬಗೆಯಾಗಿದೆ. ಅವರ ವಿಮರ್ಶಾ ನುಡಿ ಸೊಗಡು ಈ ರೀತಿ ಇದೆ.

ವೈಚಾರಿಕತೆಯ ಎದೆಗಾರಿಕೆಯುಳ್ಳ ಕನಕದಾಸರಂಥ ಮಾಸಾಳಿಗೆ ಮತಧರ್ಮಗಳ 'ತೊಳ್ಳೆ ನಡುಕ'ದ ಏಸಾಳು ಯಾವ ಲೆಕ್ಕ?

ಅಷ್ಟೇ ಅಲ್ಲ 'ಆತ್ಮ ಯಾವ ಕುಲ, ಜೀವ ಯಾವ ಕುಲ, ತತ್ವೇಂದ್ರಿಯಗಳ ಕುಲ ಪೇಳಿರಯ್ಯ' ಎಂಬ ಸವಾಲು ಅವಲಾಗಿ ಸಿಡಿದಾಗ, ಕುಲದ ಬಗೆಗಿನ 'ಗೀಳು' ತಾತ್ಕಾಲಿಕವಾಗಿ 'ಗಳ್ಳು' ಹಾಕುವುದನ್ನು ನಿಲ್ಲಿಸಿರಬೇಕು.

ಕನ್ನಡ ಸಾಹಿತ್ಯದ ಮೊಟ್ಟ ಮೊದಲ ದಲಿತ ಧ್ವನಿಯ ರಣಕಹಳೆ ಮೊಳಗಿದ್ದಾರೆ. ದಲಿತ ಯಾತನೆಯಲ್ಲಿ ಬಸವಳಿದು ಸೊಕ್ಕ ಸೊರಗ ಸಿದ್ದೆ ಹೋದ ದಲಿತ ಸಮುದಾಯವನ್ನು ಎಚ್ಚರಿಸುವ ಮೊದಲ ಜಾವದ ಕೋಳಿ ಕೂಗಾಗಿದ್ದಾರೆ.

ಜಾತಿಭೇದದ ಆವುಗೆಯಲ್ಲಿ ಬೆಂದ ಕನಕದಾಸರು, ಹುಚ್ಚು ಹೊಗಳು ಸನ್ನಿಯ ಬಣಗು ಭೂದೇವತೆಗಳು ಸುತ್ತಮುತ್ತ ಗಳ್ಳು ಹಾಕುತ್ತಾ ತಮ್ಮನ್ನು ಕಿಳ್ಳಿಗೆ ತಳ್ಳಲು ಮೇಲೇರಿ ಬರುತ್ತಿರುವಾಗ ಒಂಟಿ ದನಿಯ ಕನಕದಾಸರು ಅವರಂತೆ ತಾನೂ ಅವಿವೇಕಿಯಾಗಿ ವರ್ತಿಸಬಾರದೆಂದು ತನ್ನೊಳಗೆ ಎಲ್ಲವನ್ನೂ ನುಂಗಿಕೊಂಡು ಒಂಟಿದೈವ ಬಾಡದಾದಿ ಕೇಶವನಲ್ಲಿ ನೋವು ತೋಡಿಕೊಂಡರು.

ಸವಕಲಾದ ಸುಸಂಸ್ಕೃತ ಭಾಷೆಯನ್ನು ಬದಿಗಿರಿಸಿ ಗರಿಮುರಿಯಾದ ಆಡುಮಾತನ್ನು ಸಾಹಿತ್ಯದ ಗಾದಿಗೇರಿಸಿದಾಗ ಒಂದು ಹೊಸ ಹೊಗರು ಹೊಮ್ಮುತ್ತದೆ. ಜೀವ ಕಳೆಯ ಚಿಗುರು ನಳನಳಿಸುತ್ತದೆ. ಜನಪದ ಜೀವನದ ಸಮಷ್ಟಿ, ಸತ್ವ ಅದಕ್ಕೆ ಗೋಡು ಗೊಬ್ಬರವಾಗಿ ಜೀವದ್ರವ್ಯವನ್ನು ನೀಡಿ ಪೋಷಿಸುತ್ತದೆ.

'ಕಂಗಣ್ಣ ಮೀನನಾಗಿ ನಮರಂಗ ಗುಂಗಾಡು ಸೋಮ ಕೊಂದನ್ಮ್ಯಾ' ಎಂಬ ಕೀರ್ತನೆಯ 'ನ್ಮ್ಯಾ' ಎಂದು ಕೊನೆಯಾಗುವ ನುಡಿಗೆ–'ಭಾಷೆಯ ಮೂಲಾರ್ಥ ಅರಿಯದವರು' ಕುರಿಗಳ ಅರಚು ದನಿ 'ಮ್ಯಾ' ಎಂದು ಹೇಳಿರುವುದನ್ನು ಸುಧಾಕರ ಅವರು ಖಂಡಿಸಿದ್ದಾರೆ. ಆ ಪದದ ಮೂಲ ವ್ಯುತ್ಪತ್ತಿಯನ್ನು ತಮ್ಮ ಗ್ರಾಮ್ಯ ಬದುಕಿನ ಸೆಲೆಯಿಂದ ಸವಿದು ಅದರ ವಿಸ್ತಾರವಾದ ವಿವರವನ್ನು ಹೀಗೆ ನೀಡಿದ್ದಾರೆ:

ಹಳೆಯ ಮೈಸೂರಿನ ಕಡೆ 'ಅಮ್ಮೋ' (< ಅಮ್ಮ + ಓಂ) ಎಂಬುದು ಹಳ್ಳಿಗಾಡಿನ ಜನರ ಬಾಯಲ್ಲಿ ಬರಿಯ 'ಮೋ' ಎಂಬ ರೂಪ ತಾಳಿರುವಂತೆ 'ಅಮ್ಮಯ್ಯ' ಎಂಬುದು 'ಅಮ್ಮಾ' ಆಗಿ ಕೊನೆಗೆ 'ಮ್ಯಾ' ಆಗಿದೆ. ಕೀರ್ತನೆಯ ಪಲ್ಲವಿ 'ದೇವಿ, ನಮ್ಮ ದ್ಯಾವರು ಬಂದರು ಬನ್ನೀರೆ, ನೋಡ ಬನ್ನೀರೆ' ಎಂದಿರುವುದರಿಂದ ಕನಕದಾಸರು ಸ್ತ್ರೀ ಸಮುದಾಯವನ್ನು ಸಂಬೋಧಿಸಿ ಕರೆಕೊಡುತ್ತಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ಪ್ರತಿಯೊಂದು ಚರಣದಲ್ಲೂ ಬರುವ 'ಮ್ಯಾ' 'ಅಮ್ಮಯ್ಯ' ಎಂಬ ಸ್ತ್ರೀ ಸಂಬೋಧನಾ ಶಬ್ದದ ಕೂಸು ಎಂಬುದು ಸುವಿದಿತ.

'ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ–ಇದರ ಕುರುಹ ಪೇಳಿ ಕುಳಿತಿರುವ ಜನರು' ಎಂಬ 'ಮುಂಡಿಗೆ'ಯ ಲೌಕಿಕ ಅರ್ಥ ರಾಗಿ ಕಲ್ಲು ಎಂಬುದು ತಿಳಿದಿದ್ದು. ಅದರ ಆಧ್ಯಾತ್ಮಿಕ ಅರ್ಥವನ್ನು ತಿಳಿಯಲು ಯಾರೂ ಪ್ರಯತ್ನಿಸಿರಲಿಲ್ಲ. ಆ ಪ್ರಯತ್ನವನ್ನು ಪ್ರಥಮ ಬಾರಿಗೆ ಸುಧಾಕರ ಅವರು ಮಾಡಿದ್ದಾರೆ.

ಇದೇ ರೀತಿಯ ಇನ್ನೊಂದು ಮುಂಡಿಗೆ

'ಪರಮ ಪುರುಷ ನೀನೆಲ್ಲಿ ಕಾಯಿ ॥ಪ॥

ಸರಸಿಯೊಳಗೆ ಕರಿಕೂಗಲು ಕಾಯಿ ॥ಅ॥ ಎಂಬುದು 'ಕಾಯಿ' ಎಂಬ ಅಂತ್ಯ ಪ್ರಾಸ

ಹೊಂದಿದೆ. ಇದರಲ್ಲಿರುವ 'ಕಾಯಿ' ನಾವು ಬಳಸುವ ತರಕಾರಿಯ 'ಕಾಯಿ' ಮಾತ್ರವಲ್ಲ. ಅದರ ಜೊತೆಗೆ ಕಾಪಾಡು ಎಂದು ಅರ್ಥವಿದೆ ಎಂದು ವಿಶ್ಲೇಷಿಸಿದ್ದಾರೆ. 'ನೀನು + ಎಲ್ಲಿ+ ಕಾಯಿ = ನೀ ನೆಲ್ಲಿಕಾಯಿ' ಅಂದು ಸ್ಪಷ್ಟಗೊಳಿಸಿದ್ದಾರೆ. ಕನಕನ ಮುಂಡಿಗೆಯನ್ನು ತಮ್ಮ ಅನುಭವ ಕುಶಲತೆಯಿಂದ ಮೊದಲ ಬಾರಿಗೆ ವಿವರಿಸಿ ಕಾವ್ಯ ಅಂತರಾರ್ಥವನ್ನು ಪರಿಚಯಿಸಿದ್ದಾರೆ.

ಈ ಕೃತಿಯಲ್ಲಿ ಜನಪದ ನುಡಿಗಳಾದ ಅಣಸು, ಲಲುವುತ್ತ, ಅಟಕಾಯಿಸಿದ, ಹೊಡೆ ಹೊರಟು ತೊನೆಯುತ್ತಿದೆ, ಬಾಬ್ತು, ಸೊಗಡು, ಅಗಡು, ಚಕಾರವೆತ್ತದೆ, ತೊಣಕಿದ್ದರ ಫಲ, ಗೋರಿ ಬಟ್ಟಲು ತುಂಬಿ, ಸುಂಕು ಮುರಿಯದ, ದಾವೆ ವರಸೆ, ಪಕ್ಕಲು, ಅಬ್ಬಳಿಸಿ ಮುಂತಾದವುಗಳನ್ನು ಸುಧಾಕರ ಅವರು ಸಮರ್ಥವಾಗಿ ವಿಮರ್ಶಾ ಭಾಷೆಯಾಗಿ ಬಳಸಿದ್ದಾರೆ. ಹೀಗೆ ವಿಮರ್ಶಿಸುತ್ತ ಸಾಗಿದ ಸುಧಾಕರ ಅವರು 'ರಾಮಧಾನ್ಯ ಚರಿತ್ರೆ'ಯನ್ನು 'ಅಣಕು ಮಹಾಕಾವ್ಯ' ಎಂದು ಕರೆದಿರುವುದರ ಅಣಕು ಅರ್ಥ ಸ್ಪಷ್ಟತೆಯ, ಜನಬಳಕೆಯ ನುಡಿಯಾಗದೆ ಬಲವಂತದ ಪದಸೃಷ್ಟಿಯಾಗಿದೆ. 'ಅಂದು ವ್ಯಾಸರಾಯರ ಮುಂದೆ ಕನಕದಾಸರ ಉತ್ತರ ಕೇಳಿ ಪಾಂಡಿತ್ಯದ ಮಡಿವಂತರು ಸಿಟ್ಟಿನಿಂದ ದ್ವಿಜಗಳನ್ನು ಕಡಿದರೆ' ಎಂಬಲ್ಲಿನ 'ದ್ವಿಜ' ಪದ ಮತ್ತೊಂದು ಪಾಂಡಿತ್ಯ ಪ್ರದರ್ಶನವಾಯಿತು ಎನಿಸುತ್ತದೆ. ಈ ಬಗೆಯ ಅಲ್ಲೊಂದು ಇಲ್ಲೊಂದು ಅಸ್ಪಷ್ಟತೆ ಹಾಗೂ ಪಾಂಡಿತ್ಯ ಬಿರುಸನ್ನು ಹೊರತುಪಡಿಸಿದರೆ ಕನಕದಾಸರನ್ನು ಜನನುಡಿಯಲ್ಲಿ ಪರಿಚಯಿಸಿದ ಉತ್ತಮ ಕೃತಿ ಇದಾಗಿದೆ.

ಅಚ್ಚಿನ ದೋಷಗಳಿಲ್ಲದ, ಉತ್ತಮ ಮುದ್ರಣದ ಸಂಗ್ರಹ ಯೋಗ್ಯ ಕೃತಿ ಇದಾಗಿದೆ. ಗ್ರಾಮ್ಯ ಹಿನ್ನೆಲೆಯ ಜನಕ್ಕೆ ಇದೊಂದು ಅಧ್ಯಯನಶೀಲ ಕೃತಿಯಾಗಿದೆ. ಇಂತಹ ಕೃತಿಯನ್ನು ರಚಿಸಿ ಸುಧಾಕರ ಅವರು ಕನ್ನಡಿಗರಿಗೆ ಭಾಷೆಯ ಆಂತರ್ಯ ಅರಿಯಲು ಪ್ರೇರಣೆ ನೀಡಿದ್ದಾರೆ.

(೧೯೯೯)

○

ಶ್ರೀ ಜಚನಿ: ಭಾಷಣಗಳು

ಭಾರತದಲ್ಲಿ ಜನಸಾಮಾನ್ಯರಿಗೆ ವಿದ್ಯೆ, ವಸತಿ, ಅನ್ನ ದಾಸೋಹ ನೀಡಿ ನೈತಿಕ ಬುನಾದಿಯನ್ನು ಸೃಷ್ಟಿಸಿ ಯೋಗ್ಯಮಾನವರನ್ನಾಗಿಸಲು ಕರ್ನಾಟಕದ ಮಠಗಳು ಶ್ರಮಿಸುತ್ತಿರುವುದು ಈ ನಾಡಿನ ಪುಣ್ಯ ವಿಶೇಷವಾಗಿದೆ. ಅದರಲ್ಲೂ ವೀರಶೈವ ಮಠಗಳ ದಾಸೋಹ ಪರಂಪರೆ ವಿಶ್ವದಲ್ಲಿಯೇ ಅಪೂರ್ವವಾಗಿದೆ. ಅಂತಹ ಮಠಗಳಲ್ಲಿ ಒಂದಾದ ನಿಡುಮಾಮಿಡಿ ಮಹಾಸಂಸ್ಥಾನ ಮಠದ ಜಗದ್ಗುರುಗಳಾಗಿದ್ದ ಶ್ರೀ ಜಚನಿಯವರು ನಡೆದ ಹಾದಿ, ನುಡಿದ ನಾಲಗೆಯನ್ನು ಅನುಸರಿಸಿ ಜನರ ಕಲ್ಯಾಣವನ್ನು ಸಾಧಿಸಿತು. ಶ್ರೀ ಜಚನಿಯವರು ವೀರಶೈವ ಮಠದಲ್ಲಿ ದಲಿತರಿಗೆ ಅವಕಾಶ ಕಲ್ಪಿಸಿಕೊಟ್ಟ ಮಹಾಮಾನವತಾವಾದಿ. ಅವರು ಇಪ್ಪತ್ತನೇ ಶತಮಾನದಲ್ಲಿ ವಚನಗಳನ್ನು ರಚಿಸಿ ವಚನ ಪ್ರಕಾರಕ್ಕೆ ಮರು ಜೀವ ತುಂಬಿದವರು. ಅವರು ಸಾಹಿತ್ಯ ಸೇವೆ ಗೈಯ್ಯುತ್ತ ಅದರ ಸವಿಯನ್ನು ವಿದ್ಯಾರ್ಥಿಗಳಿಗೆ, ಮಠದ ಬಂಧುಗಳಿಗೆ, ಜನಸಾಮಾನ್ಯರಿಗೆ ಉಣಿಸಿ ತೃಪ್ತಿಯನ್ನು ಪಡೆದವರು.

ಶ್ರೀ ಜಚನಿ ಯೋಗಿಗಳ ಹತ್ತು ಅಮೂಲ್ಯ ಭಾಷಣಗಳನ್ನು ಸಂಪಾದಿಸಿ ಪ್ರಕಟಣೆ ಮಾಡಿದ ಶ್ರೀಮಠದ ಇಂದಿನ ಪೀಠಾಧಿಪತಿಗಳಾದ ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮೀಜಿಯವರು ಕರ್ನಾಟಕ ಕಂಡ ಕ್ರಾಂತಿಕಾರಿ ವೀರಶೈವಯೋಗಿಗಳಾಗಿದ್ದಾರೆ. ಶ್ರೀ ಮಠದ ಉತ್ತಮ ಉತ್ತರಾಧಿಕಾರಿಯಾದ ಅವರು ಸಮಾಜಮುಖಿಯಾದ ಸಾರ್ಥಕ ಕೆಲಸಗಳನ್ನು ಮಾಡುವ ಧೀ ಶಕ್ತಿಯನ್ನು ಹೊಂದಿದ್ದಾರೆ. ಅದರ ಸುಮಧುರ ಫಲ ಈ ಪ್ರಕಟಣೆಯಾಗಿದೆ.

ಇಲ್ಲಿಯ ಪ್ರತಿಯೊಂದು ಭಾಷಣವು ಆಯಾ ಸಂದರ್ಭಕ್ಕೆ ತಕ್ಕುದಾಗಿ ಆಯಾ ವಿಷಯದ ಆಳ ಹರಹನ್ನು ಹೊಂದಿದ್ದರೂ; ಅದನ್ನು ಮೀರಿ ಕಾಲಾತೀತ ಚಿಂತನೆಗಳನ್ನು, ನಿಷ್ಠುರ ಸತ್ಯದ ನುಡಿಗಳನ್ನು ಒಳಗೊಂಡು ಓದುಗರನ್ನು ಬೆಳಕಿನ ಪಥದತ್ತ ಕೊಂಡೊಯ್ಯುವ ಮಾತಿನ ಜ್ಯೋತಿಯಾಗಿದೆ. ಈ ಕೃತಿಯ ಮುನ್ನುಡಿಯಲ್ಲಿ ಚಂದ್ರಶೇಖರ ಕಂಬಾರರು 'ಸಾಮಾಜಿಕ ಚಿಂತನೆ, ದೀನರ ಬಗೆಗಿನ ಕಳಕಳಿ, ಸಾಮೂಹಿಕ ಶ್ರೇಯಸ್ಸಿನ ಬಗೆಗಿನ ವಿಚಾರಧಾರೆ ಪ್ರಸ್ತುತ ದಿನಮಾನಗಳಲ್ಲಿ ಮತೀಯ ವ್ಯವಸ್ಥೆಯಲ್ಲಿ ಕಾಣೆಯಾಗುತ್ತಿದ್ದು, ಈಗ್ಗೆ ೨೫ ವರ್ಷಗಳ ಹಿಂದೆ ಪ್ರಗತಿಪರ ಮನಸ್ಸೊಂದು ಚಿಂತಿಸಿದ ಕ್ರಮವನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ' ಎಂದು ಹೇಳಿದ್ದಾರೆ.

ಹತ್ತು ಭಾಷಣಗಳಲ್ಲಿ ೫-ಶಿವಾನುಭವ, ವೀರಶೈವ ಸಾಹಿತ್ಯ, ವಚನ ಸಾಹಿತ್ಯ, ವೀರಶೈವ ಉಪಾಚಾರ್ಯರು, ಸಿದ್ಧರಾಮ ಅವರನ್ನು ಕುರಿತದ್ದು; ೩-ಸಿದ್ಧಗಂಗಾ ಸಾಹಿತ್ಯ ಸಮ್ಮೇಳನ, ಕಲಬುರ್ಗಿ ಜಿಲ್ಲಾ ಸಾಹಿತ್ಯ ಸಮ್ಮೇಳನ, ಗೂಳೂರು ಮಹಾಸಂಸ್ಥಾನದ ಗಡಿನಾಡ ಸಮ್ಮೇಳನದಲ್ಲಿ ಸಾಹಿತ್ಯವನ್ನು ಕುರಿತು ಹೇಳಿದ್ದು; ಇನ್ನೆರಡು ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತಿ ಸತ್ಕಾರ ಸಂದರ್ಭದ್ದು.

'ಭಾರತೀಯ ಸಾಹಿತ್ಯ ವೇದಾದಿಯಾದುದು. ಶಿವಶರಣರ ಸಾಹಿತ್ಯ ವಚನಾದಿಯಾದುದು.' 'ಶಿವಾನುಭವ ಎಂದರೆ ಶಿವಮಯವಾದ ಜಗತ್ತು.' 'ಈಶ, ಕೇನ, ಕೈವಲ್ಯ, ಮುಂಡಕ, ಈಶಾವಾಸ್ಯ, ವಜ್ರಸೂಚಿ ಮತ್ತು ರುದ್ರೋಪನಿಷತ್, ಶಿವೋಪನಿಷತ್, ಪಿಂಡೋಪನಿಷತ್, ಲಿಂಗೋಪನಿಷತ್, ಬಿಲ್ವ, ಭಸ್ಮ, ರುದ್ರಾಕ್ಷೋಪನಿಷತ್ತುಗಳು ವೀರಶೈವ ವಾಙ್ಮಯಕ್ಕೆ ಸೇರಿದವುಗಳೆಂದರೆ ಅಚ್ಚರಿಯೆನಿಸಬಹುದಾದರೂ ವಾಸ್ತವಿಕಾಂಶವಾಗಿದೆ. ಯೋಗ ವಾಸಿಷ್ಠ, ಯೋಗಸಾರ; ಸಿದ್ಧಾಂತ ಶೇಖರಾದಿ ಸಂಸ್ಕೃತ ಕೃತಿಗಳಲ್ಲಿ ವೀರಶೈವ ವಾಙ್ಮಯ ವಿಪುಲವಾಗಿದೆ, 'ತಿರುಳ್ಗನ್ನಡ ಸಾಹಿತ್ಯವೆಂದರೆ ವಚನ ಸಾಹಿತ್ಯ, ಇದು ಕನ್ನಡ ಸಾಹಿತ್ಯಕ್ಕೆ ನವೋದಯವನ್ನುಂಟುಮಾಡಿದೆ. ನವ್ಯ ಸಾಹಿತ್ಯಕ್ಕೆ ನಾಂದಿಯನ್ನು ಹಾಡಿದೆ. ವಿಪುಲವಾದ ವಿಧವಿಧವಾದ ವೀರಶೈವ ಕನ್ನಡ ಸಾಹಿತ್ಯ ಪ್ರವಾಹದ ಗಂಗೋತ್ರಿಯೆನಿಸಿದೆ. ಪ್ರತಿಭೆಯಲ್ಲಿ ಗಾಯತ್ರಿಯೆನಿಸಿದೆ.' 'ಆಳುವವರು ಆಳಿಸಿಕೊಳ್ಳುವವರು ಸಾತ್ವಿಕರು, ಸಮರ್ಥರು ಆಗುವಂತೆ ಸಾಮಾಜಿಕರನ್ನು ರೂಪಿಸುವುದು ಶಿವಾಚಾರ್ಯರ ಕೆಲಸವಾಗಿದೆ.' 'ಸಮಾಜದಲ್ಲಿ ಆರ್ಥಿಕವಾಗಿ ಪ್ರಗತಿ ಸಾಧಿಸಬೇಕಾದ ಹಳ್ಳಿಹಳ್ಳಿಗೂ ಶಿವಾಚಾರ್ಯರು ವೃತ್ತಿಶಿಕ್ಷಣವನ್ನೀಯಬೇಕು. ತಂತಮ್ಮ ಮಠಗಳಲ್ಲಿಯೂ ವೃತ್ತಿಶಿಕ್ಷಣವನ್ನೀಯಬೇಕು. ಇಂದಿನ ಯುವ ಜನಾಂಗವನ್ನು ಕರ್ತವ್ಯಶೀಲರನ್ನಾಗಿಸಬೇಕು; ಇದುವೇ ನಿಜವಾದ ಆಚಾರ. ನಿಜವಾದ ಯೋಜನೆ.' ಎಂಬ ಚಿಂತನಾ ನುಡಿಗಳಲ್ಲಿ ಜಚನಿಯವರ ಆಳವಾದ ಅಧ್ಯಯನ, ಜನಸಾಮಾನ್ಯರ ಬದುಕನ್ನು ಉತ್ತಮಗೊಳಿಸುವುದರ ಬಗೆಗಿನ ಯೋಜನೆ; ವಾಸ್ತವ ವಿಷಯಗಳ ನೇರ ವಿಶ್ಲೇಷಣೆ ಇದ್ದು ಓದುಗರನ್ನು ವಿಚಾರಶೀಲರೂ, ಕ್ರಿಯಾಶೀಲರೂ ಆಗಿಸುವಲ್ಲಿ ಯಶಸ್ವಿಯಾಗಿದೆ.

ಅವರು ಸಂಘಟಕರನ್ನು ರಂಜಿಸುವ ಹುಸಿಭಾವದ ಗುರುವಲ್ಲ. ಮಾರ್ಗದರ್ಶಿ ಸಾಧಕರಾಗಿದ್ದರು ಎಂಬುದು ಅಖಿಲ ಭಾರತ ವೀರಶೈವ ಉಪಾಚಾರ್ಯರ ಸಭೆಯಲ್ಲಿ ನುಡಿದ ನುಡಿಯಿಂದ ಸ್ಪಷ್ಟವಾಗುತ್ತದೆ: 'ಈ ಸಮಿತಿಗೆ 'ಶಿವಾಚಾರ್ಯ ಸಮಿತಿ' ಎಂದು ಹೆಸರಿಸಬೇಕೆಂದು ಇಲ್ಲಿ ಸಮಯೋಚಿತವಾಗಿ ಸೂಚಿಸುತ್ತೇನೆ. ಇದನ್ನು ಈ ಕೂಡಲೇ ಕಾರ್ಯರೂಪಕ್ಕೆ ತರಲೆಂದು ಹಾರೈಸುತ್ತೇನೆ. ಉಪಾಚಾರ್ಯ ಪದ ಸಾಮಾಜಿಕ ಸಂಘಟನಾ ಕಾರ್ಯಕ್ಕೆ ಆಘಾತವಾದುದಾಗಿದೆ.'

ಸಾಹಿತ್ಯ ಸಮ್ಮೇಳನಗಳನ್ನು ಕುರಿತು ಜಚನಿ ಅವರು 'ಇತ್ತೀಚೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳು, ಜಿಲ್ಲಾ ಸಾಹಿತ್ಯ ಸಮ್ಮೇಳನಗಳು, ಸಾಹಿತ್ಯ ಗೋಷ್ಠಿಗಳು, ಉತ್ಸವಾದಿಗಳು ನಡೆಯುತ್ತಿವೆ. ಇವೆಲ್ಲ ಗತಿ ಸೂಚನೆಗಳೇ ಹೊರತು ಪ್ರಗತಿ ಸೂಚಕಗಳಲ್ಲ' ಎಂದು

ನುಡಿದಿರುವ ಮಾತು ಇಂದಿನ ಜಾತ್ರೆಯೋಪಾದಿಯ ಸಾಹಿತ್ಯ ಸಮ್ಮೇಳನಗಳನ್ನು ಕಂಡಾಗ ಸಾಹಿತಿಯಾದ ಈ ಜಗದ್ಗುರುವಿನ ಮಾತು ಎಷ್ಟು ಸತ್ಯ ಎಂಬ ಅರಿವಾಗುತ್ತದೆ. ನವ್ಯ ಕಾವ್ಯದ ಅಬ್ಬರದ ಕಾಲ ೧೯೬೨ರಲ್ಲಿ ಅದನ್ನು ತಮ್ಮ ವಿಮರ್ಶೆಯಿಂದ ವಿಶ್ಲೇಷಿಸಿರುವ ರೀತಿಯನ್ನು ಕಂಡಾಗ ಅವರ ಸೂಕ್ಷ್ಮ ಸಾಹಿತ್ಯಾಧ್ಯಯನ ಗೋಚರವಾಗುತ್ತದೆ. 'ಭಾವ ಸೌಂದರ್ಯಕ್ಕೆ ಕಾವ್ಯ ಮಾಧುರ್ಯಕ್ಕೆ ನವ್ಯತಂತ್ರವೊಂದೇ ಕಾರಣ ಎಂದು ಹೇಳಲಾಗುವುದಿಲ್ಲ; ಹೇಳಲೂ ಬಾರದು. ಕಾವ್ಯ ಧರ್ಮಗಳು ಹಲವಾರಿವೆ. ಅವುಗಳಲ್ಲಿ ನವ್ಯತಂತ್ರವೂ ಒಂದು; ಹೊರಗಿನದು. ಇದರೊಡನೆ ಅಂತರಂಗಿಕ ಭಾವ ನವ್ಯತೆಯೂ ಇರಬೇಕು; ಮತ್ತು ಪರಿಪಕ್ವಾನುಭವವೂ ಇರಬೇಕು. ಆಗ ಕಾವ್ಯ ಮೌಲ್ಯ ಹೆಚ್ಚಿಸುತ್ತದೆ.' ಜಚನಿಯವರು 'ಸೂಳ್ನುಡಿ' ಪದ 'ಸಾಹಿತ್ಯ'ಕ್ಕೆ ಸಂವಾದಿಯಾದುದು ಎಂಬ ವಿಶ್ಲೇಷಣೆಯನ್ನು ನೀಡಿದ್ದಾರೆ. 'ಧರ್ಮ ಜಾತಿಯಲ್ಲ; ಜಾತಿ ಧರ್ಮವಲ್ಲ. ಧರ್ಮಸ್ವರೂಪ ಜಾತ್ಯಾತೀತವಾಗದು.' ಎಂಬ ಸ್ಪಷ್ಟ ನುಡಿಯನ್ನು ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದಾರೆ.

ವಚನ ಸಾಹಿತ್ಯಕ್ಕೆ ಬಸವಾದಿ ಶರಣರ ಅನಂತರ ಅತ್ಯಧಿಕ ವಚನಗಳನ್ನು ರಚಿಸಿ ಆ ಪ್ರಕಾರದ ಸಾಹಿತ್ಯಕ್ಕೆ ಒಂದು ಗಟ್ಟಿ ನೆಲೆ ಸೃಷ್ಟಿಸಿ ನೂರಾರು ಸಾಹಿತ್ಯ ಕೃತಿಗಳನ್ನು ರಚಿಸಿ ತಮ್ಮ ಇಡೀ ಜೀವನವನ್ನೇ ಮಾನವಧರ್ಮದ ಏಳ್ಗೆಗೆ ಮೀಸಲಿಟ್ಟ ಜಗದ್ಗುರು ಜಚನಿ. ಅವರ ಸಾಹಿತ್ಯವು ದೇಶ ಕಾಲಾತೀತವಾದ ಜೀವನ ಮೌಲ್ಯಗಳನ್ನು ಹೊಂದಿವೆ. ಅವರ ಅತ್ಯುತ್ತಮ ಭಾಷಣಗಳನ್ನು ಸಂಪಾದಿಸಿ ಪ್ರಕಟಿಸಿದ ನಿಡುಮಾಮಿಡಿ ಸಂಸ್ಥಾನದ ಇಂದಿನ ಪೀಠಾಧ್ಯಕ್ಷರು ಗುರುಪರಂಪರೆಯ ಚಿಂತನೆ ಸದಾ ಜನರಲ್ಲಿ ಜಾಗೃತವಾಗಿರುವಂತಹ ಸಾರ್ಥಕ ಕೆಲಸ ಮಾಡಿದ್ದಾರೆ. ಸಂತ ಜಚನಿ ಅವರ ಭಾಷಣಗಳು ಎಲ್ಲ ಕನ್ನಡಿಗರ ಮನೆ ಸೇರಿ ಅವರ ಮನಗಳನ್ನು ಬೆಳಗಿಸುವ ಜ್ಯೋತಿಯಾಗಲಿ.

(೨೦೦೭)

ಹೈದ್ರಾಬಾದ್ ಕರ್ನಾಟಕದ ಬಂಡಾಯ ಕವಿ: ಸೂಗಯ್ಯ ಹಿರೇಮಠ

೧೯೮೪ರಲ್ಲಿ ಪ್ರಥಮ ಕವನ ಸಂಕಲನ 'ಉಂಡು. ಮಲಗಿದವರು' ಹೊರತಂದು ಕಾವ್ಯಕೃಷಿಯಲ್ಲಿ ತೊಡಗಿರುವ ಪ್ರೊ. ಸೂಗಯ್ಯ ಹಿರೇಮಠ ಅವರು ಶೋಷಣೆಯ, ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ ಬಂಡಾಯ ಕವಿ. ಕಲಬುರ್ಗಿ ಬಿರುಬಿಸಿಲಿನ ನಾಡಿನಲ್ಲಿ ಮಳೆಗಾಗಿ ಕಾದು, ಬಂದ ಬೆಳೆಯಲ್ಲಿ ವರ್ಷಪೂರ್ತಿ ಉಣ್ಣಲಾಗದೆ; ಸಿರಿವಂತರ ಶೋಷಣೆಗೆ ಒಳಗಾಗಿ, ಬಡತನದ ಬೇಗೆಯಲ್ಲಿ ಬೆಂದು ಬಳಲಿದ ಜೀವ–ಅಕ್ಷರ ಜ್ಞಾನ ಪಡೆದು ಬೆಳಕು ಕಂಡಾಗ ಅಲ್ಲಿ ಕಂಡ ಕತ್ತಲೆಯನ್ನು ಬಣ್ಣಿಸಲು–ಕಾವ್ಯಮಾಧ್ಯಮಕ್ಕೆ ಮೊರೆಹೊಕ್ಕಿರುವುದು ಕಂಡಿದೆ. ಸ್ವಾತಂತ್ರ್ಯ, ಸಮಾನತೆ, ಗಣತಂತ್ರ ಸಾರ್ವಭೌಮತ್ವವು ಆಳುವವರ, ಸಿರಿವಂತರ ಕೈದಾಳವಾಗಿರುವುದಕ್ಕೆ ನೊಂದಿದೆ. 'ಉಂಡು ಮಲಗಿದವರು' ಮತ್ತು 'ನೀರುನೆಲೆ' ಕವನ ಸಂಕಲನಗಳಲ್ಲಿ ಸ್ವಾತಂತ್ರ್ಯಾನಂತರದ ನಾಡಿನ ಶೋಷಿತರ, ದಲಿತರ, ಬಡವರ, ಶ್ರಮಿಕರ ನೋವು ನರಳಾಟಕ್ಕೆ ಸ್ಪಂದಿಸುತ್ತ ಮನುಷ್ಯತ್ವದ ನೆಲೆಗಳು ನಾಶವಾಗಿರುವುದಕ್ಕೆ ಕ್ರುದ್ಧವಾಗಿದೆ. ಹಳ್ಳಿಗಾಡಿನ ರೈತನ ಮಗನಾದ ಅವರಲ್ಲಿ ರೈತನ ಬದುಕಿನ ಉಪಮೆಗಳು,ಪ್ರತಿಮೆಗಳು, ಶೋಷಣೆಯನ್ನು ಧ್ವನಿಸಲು ಬಂಡಾಯದ ಕಿಡಿಯಾಗಿ ಹೊಮ್ಮಿರುವ ಬಗೆ ಅನನ್ಯವಾಗಿದೆ.

'ಪ್ರಜಾತಂತ್ರ' ಕವನದಲ್ಲಿ ಚುನಾವಣೆ ಬಂದ ರೀತಿಯನ್ನು 'ಮುಂಗಾರು ಪ್ರಾರಂಭದಲ್ಲಿಯೇ। ಕಾರಹುಣ್ಣಿಮೆ ಬರುತ್ತದೆ' ಎಂದು ಬಣ್ಣಿಸಿರುವ ರೀತಿ ಅವರ ಗ್ರಾಮ್ಯ ಅನುಭವವನ್ನು ಪ್ರಜಾತಂತ್ರದಲ್ಲಿಯ ಗೂಢ ಹಿಡಿತವನ್ನು ಕಾವ್ಯವಾಗಿಸಲು ಬಳಸಿರುವ ಬಗೆ ಚೆನ್ನಾಗಿದೆ. ಶೋಷಿತ 'ಕೆಂಚನೆ ಕರಿಹಿಡಿಯುತ್ತಾನೆ' ಎಂಬ ನುಡಿಯಲ್ಲಿ ಈ ನಾಡಿನ ಪ್ರಜಾಪ್ರಭುತ್ವದಲ್ಲಿ ಆತ ಮತದಾರನ ಪ್ರತೀಕವಾಗಿ ಪಕ್ಷಗಳನ್ನು ಬೆಂಬಲಿಸಿ ಮೆರೆಯುವುದು ಮೆರೆಸುವುದು; ಅಲ್ಪ ಆಮಿಷಕ್ಕೆ ಒಳಗಾಗಿ ತತ್ವ ಸಿದ್ಧಾಂತ, ನಿಲುವುಗಳಿಲ್ಲದ ಚುನಾವಣೆಯಲ್ಲಿ ಪ್ರಚಾರಕ್ಕೆ ಇಳಿಯುವುದರ ಚಿತ್ರಣವಿದೆ. ಈ ನಾಡಿನ ಸಿರಿವಂತರ, ಮೇಲ್ವರ್ಗದ ಸಮಯ ಸಾಧಕತನವನ್ನು ತೀವ್ರವಾಗಿ ಗಮನಿಸುತ್ತ; ಅವರ ಸೃಷ್ಟಿಯ ವ್ಯವಸ್ಥೆಯ ಹಿಡಿತದಲ್ಲಿ ಗೋಣು ಕೊಟ್ಟ ದಲಿತ, ದುಡಿವ ಜನಾಂಗದ ಪ್ರತೀಕವಾಗಿ 'ಕೆಂಚ'ನಿದ್ದಾನೆ. ಚುನಾವಣೆ ಫಲಿತಾಂಶ

'ಗೌಡರ ಹಂಡಹೋರಿ
ಮುಂದೋಡಿ ಕರಿಹರಿಯುತ್ತದೆ.
ಬಲವಿಲ್ಲದವು ಅಡ್ಡದಾರಿಲೆ ಮನೆ ಸೇರುತ್ತವೆ
ಜನರೆಲ್ಲ ಕರಿಹಿಡಿದು ನೂಕ್ಯಾಡುತ್ತಾರೆ।'

ಅನಂತರ 'ಮನೆ ಸಮೀಪಿಸಿದಂತೆ ಹೋರಿ । ಘುರುಕಿ ಹೊಡೆದೋಡುತ್ತದೆ' ಎಂದಿರುವುದು ಹಲವು ಅರ್ಥವ್ಯಾಪ್ತಿಯನ್ನು ಹೊಮ್ಮಿಸಿದೆ. 'ಮನೆ' ಶಾಸನ ಸಭೆ, ಲೋಕಸಭೆಯಾಗಿ ಅಲ್ಲಿನ ಸ್ಥಾಪಿತ ವ್ಯಕ್ತಿಯ ಎಲ್ಲ ಗತ್ತು ಗಮ್ಮತ್ತು ಹಾಗೂ ಜನರಿಂದ ನೆಗೆವ ನಂತರ ಹಿಡಿಯಲಾಗದ ಸ್ಥಿತಿಯನ್ನು ಧ್ವನಿಸಿದೆ. ಇಷ್ಟೆಲ್ಲಾ ಆದ ನಂತರದ ವಾಸ್ತವ ಕರಿಹಿಡಿದ ಕೆಂಚನ ಪರಿಸ್ಥಿತಿ–ಅದೇ ದುಡಿಮೆ, ಕಾಯುವಿಕೆ, ಶೋಷಣೆಗೆ ಒಳಗಾದ ಬದುಕು ಹಾಗೂ ಮತ್ತೆ ಮುಂದಿನ ಪಂಚವಾರ್ಷಿಕದ ಆಸೆ.

'ಕರಿಕಟ್ಟಿದವರಿಗೆ ಗೌಡರು
ಖುಷಿ ಕೊಡುತ್ತಾರೆ,
ಒಂದಿನದ ಖುಷಿಗೆ ಕೆಂಚ ವರ್ಷವೂ
ಕರಿಗೆ ನಾರೊಪ್ಪೆಯುತ್ತಾನೆ!'

ಸೂಗಯ್ಯ ಹಿರೇಮಠ ಅವರು 'ಬತ್ತಿದ ಕಣ್ಣಾಸೆಗಳು' ಕವನದಲ್ಲಿ ಯುವಕರ ಇಂದಿನ ಹೀನಾಯ ಸ್ಥಿತಿಯನ್ನು 'ಕಸದ ಗುಂಡಿಯಲ್ಲಿ ಎಸೆದ ಹಂದಿಗಳು' ಎಂದು ಕರೆದು, ನಿರುದ್ಯೋಗಿಗಳನ್ನು ವ್ಯಂಗ್ಯಾತ್ಮಕವಾಗಿ 'ಬತ್ತಲೆ ಬದುಕಿನ ಹುತ್ತದಲ್ಲಿ ಸಿಕ್ಕ ಇಲಿಗಳು' ಎಂದಿದ್ದಾರೆ.

ಕವಿಯು ಜನಪದ ತ್ರಿಪದಿಯಲ್ಲಿ 'ರೈತನ ಹಾಡು' ಹಾಡುತ್ತ ರೈತರು ಮಣ್ಣಲ್ಲಿ ದುಡಿದು, ಬೆವರು ಸುರಿಸಿ ಸುಗ್ಗಿ ಮಾಡುತ್ತ 'ಮಣ್ಣಲ್ಲಿ ಕಣ್ಣು ತೆರೆದವರು' ಎಂದಿದ್ದಾರೆ. ರೈತರ ಬೆಳಕು ಈ ನೆಲದ ಮಣ್ಣು ಎಂಬ ನುಡಿ ತುಂಬಾ ಅರ್ಥಪೂರ್ಣವಾಗಿದೆ.

'ನೀರು ನದಿಯಲ್ಲಿ ಬಿತ್ತು, ಮಳೆ ಮುಗಿಲಲ್ಲೆ ಹೋಯ್ತು
ನಾಡೆಲ್ಲ ಉರಿತು ಕಾಡಾಗಿ । ರೈತರ
ನರವೆಲ್ಲ ಹರಿತು ತಂತ್ಯಾಗಿ'

ಎಂದು ಬೆಂಡಾದ ನೆಲ ಹಾಗೂ ಕುಸಿದ ಅವನ ಬಾಳನ್ನು ತೀವ್ರಭಾವದಲ್ಲಿ ಸೆರೆಹಿಡಿದಿದ್ದಾರೆ. ಆ ಭಾವದ ಹಿಂದೆ ದ.ರಾ. ಬೇಂದ್ರೆಯವರ 'ತುತ್ತಿನ ಚೀಲ'ದ ಪ್ರಭಾವವಿದೆ.

'ನಮ್ಮೂರ ಅರಳಿಮರ'ವನ್ನು ಭಾರತದೇಶದ ಸಂಕೇತವಾಗಿಟ್ಟುಕೊಂಡು ಕಂದಾಚಾರ, ಸಂಪ್ರದಾಯ, ಮೌಢ್ಯತೆಯೇ ಆದ ಶ್ರಮಜೀವಿಗಳನ್ನು 'ಗದ್ದಲು' ಎಂದು ಕರೆದಿದ್ದಾರೆ. ಅವರ ದುಡಿಮೆಯಲ್ಲಿಯೇ ಮರಗಟ್ಟಿ ಹೋಗಿರುವುದನ್ನು

'ದಿನಾಲು ಮಣ್ಣೆಳೆದು ಕಣಕಣವು
ಬೆವರಿನ ಹನಿ ನೀಡಿ
ಹೆಣೆದು ಕಲ್ಲಾಗುತ್ತವೆ'

ಎಂದು ಬಣ್ಣಿಸುತ್ತ ಶೋಷಣೆಗೆ ಒಳಗಾದ ಜೀವಿಗಳು 'ಕಲ್ಲಾಗು'ವಲ್ಲಿ ಬಂಡಾಯ ಕಾವ್ಯವನ್ನು ಕಲೆಯಾಗಿಸಿದ್ದಾರೆ. ತನ್ನ ಪರಿಸರದಲ್ಲಿ ಮರದ ಮೇಲಿನ ಹಕ್ಕಿ, ಜೇಡಗಳ ಜಾಣತನ ನೋಡಿ ಕಲಿಯದೆ, ತಿಳಿಯದೆ ಇರುವುದನ್ನು ಸೂಕ್ಷ್ಮವಾಗಿ ಹೇಳುತ್ತ; ಶ್ರೀಮಂತರನ್ನು, ವ್ಯಾಪಾರಿ, ಧನಿಕ, ಬಂಡವಾಳಶಾಹಿಗಳನ್ನು 'ಹಾವುಗಳು' ಎಂದು ಕರೆದು ಅವುಗಳು ಬರುವ ಬಗೆಯನ್ನು 'ಎಲ್ಲಿಂದಲೋ ಬರುವ ಹಾವುಗಳು । ಬಾಯುಸಿರಿನ ಬಿಸಿ ತಗಲಿಸಿಯೆ । ಮನೆ ಸೇರುತ್ತವೆ।' ಎಂದಿದ್ದಾರೆ. ಅವುಗಳ ಕ್ಷಿಪ್ರ ಯಜಮಾನ್ಯವನ್ನು, ಸಿಕ್ಕಿದ್ದನ್ನೆಲ್ಲಾ ಬಾಚಿ ನುಂಗಿಹಾಕುವ ದಾಹವನ್ನು, ಹೊಳೆ ಹೊಳೆಯುತ್ತ ವಿಷಮಯವಾದ ಬಗೆಯನ್ನು ಹಾಗೂ ಅವಕ್ಕೆ ಆಹಾರವಾಗುವ ಶ್ರಮಿಕ ಬಡಜೀವಿಗಳ ರೀತಿಯನ್ನು ಕವಿ ವರ್ಣಿಸಿರುವುದು ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ.

'ಹಸಿವೆಯಾದಾಗೆಲ್ಲ ನಾಲಿಗೆ ಚಾಚಿ ನೆಕ್ಕಿ
ಮನೆಯ ಒಳಹೊರಗೂ ಓಡಾಡುತ್ತವೆ!
ಅವುಗಳ ಸರಳತನ ಕಂಡು
ಸಮೀಪ ಹೋದುವೆಲ್ಲ ಸಾಯುತ್ತವೆ!'

ಬಡವ-ಬಲ್ಲಿದ, ಶ್ರಮಜೀವಿ ಶೋಷಕ, ಉಚ್ಚ-ನೀಚ ಮೂಲದ ವರ್ಗ-ವರ್ಣ ವ್ಯವಸ್ಥೆ ಎಂಬುದು ರೈಲು ಹಾದಿಯ ಪಟ್ಟಿಗಳಂತೆ ಸದಾ ಸಮಾನಾಂತರವಾಗಿ ಸಾಗುವುದಿಲ್ಲ. ಶ್ರಮಜೀವಿಗಳು, ದಲಿತರು, ಬಡವರು ಎಚ್ಚೆತ್ತು ಸಿಡಿದು ನಿಲ್ಲುತ್ತಾರೆ.

'ಬೋಳಾದ ಗಿಡ ಚಿಗಿಯುತ್ತಿದೆ
ನಮ್ಮ ಕಾಯಿಗೆ ಕಣ್ಣಿಟ್ಟರೆ
ನಿಮ್ಮ ಗೋರಿಯ ಮೇಲೆ
ಮನೆ ಕಟ್ಟುತ್ತೇವೆ.'

ಆಗ ಶೋಷಿತರ ಅರಿವು 'ನೀವಿಟ್ಟ **ಸಂಸ್ಕೃತಿಯ ಅಂಗಡಿಯಲ್ಲಿ । ನಾವೂ ವ್ಯಾಪಾರ ಮಾಡುತ್ತೇವೆ'** ಎಂಬ ಧೈರ್ಯ, ಸ್ಥೈರ್ಯದ, ವ್ಯವಹಾರ ಕುಶಲತೆಯ ನುಡಿಯಾಗಿ ವ್ಯವಸ್ಥೆಯನ್ನು ಅದಲುಬದಲಾಗಿಸುತ್ತದೆ ಎಂದು ಶೋಷಕರ ಸಂಗ್ರಹಿತ ಆಸ್ತಿಯನ್ನು ಪಡೆಯುವ ಧೀಮಂತಿಕೆ ವ್ಯಕ್ತವಾಗಿದೆ.

ಸ್ವತಂತ್ರ ಭಾರತದಲ್ಲಿ ನಗರಸಭೆಯಿಂದ ಸಂಸತ್ತಿನ ತನಕ ಬದಲಾದ ವ್ಯವಸ್ಥೆಯನ್ನು ಮಾರ್ಮಿಕವಾಗಿ 'ನಗರಸಭೆಯ ಹಿಂದೆ-ಮುಂದೆ' ಕವನ ಚಿತ್ರಿಸಿದೆ.

ವಾಸ್ತವತೆಯ ನೆಲೆಗಟ್ಟಿನಲ್ಲಿ ನಿಂತು ಚಿಂತಿಸುವ ಸೂಗಯ್ಯ ಹಿರೇಮಠ ಅವರು 'ಎಣ್ಣೆ ತರುವವರ್ಯಾರು?' ಎಂಬ ಕವನದಲ್ಲಿ **'ಸಾಹುಕಾರನ ಮನೆಯ ಕೋಗಿಲೆ ಹಾಡುವುದನ್ನು ಬರಿ ಕೇಳಿದ್ದು; ನೋಡಲೇ ಇಲ್ಲ'** ಎಂಬ ನುಡಿಯಲ್ಲಿ ಹುಟ್ಟಿದಾಗಿನಿಂದ ದುಡಿದು ಹೈರಾಣಾದ ಬರಿ ಶಬ್ದ, ದನಿ, ನಾದ ಕೇಳುವ ಸತ್ಯ ಕಾಣಲಾಗದ ಸ್ಥಿತಿಯನ್ನು

ಕಾವ್ಯವಾಗಿಸಿದ್ದಾರೆ. 'ಯುಗಾದಿಗಿ ಏನ ಸಂತೀರಿ' ಎಂಬ ಹೆಂಡತಿಯ ಮಾತಿಗೆ ಭದ್ರ ಬುಡವಿಲ್ಲದ ಬಗೆಯನ್ನು ವ್ಯಂಗ್ಯಾತ್ಮಕವಾಗಿ ಹೇಳಿ, ಕಟುವಾಸ್ತವತೆಗೆ ಹೊರಳಿ **'ಎದ್ದು ಹೋಗಿ ದೀಪಾ ತಗಿ । ನಾಳ್ಗಿ ಎಣ್ಣೆ ತರುವವರ್‍ಯಾರ?'** ಎಂದು ನುಡಿದು ಉಗಾದಿ ಆಚರಣೆಯ ಹೋಳಿಗೆಗೆ ಎಣ್ಣೆ ತರಲಾಗದ ಕಟುವಾಸ್ತವವನ್ನು ನೆನೆದು, ದೀಪ ಹೊತ್ತಿಸುವ ಎಣ್ಣೆಗೂ ಗತಿ ಇಲ್ಲದ ದುರಂತ ಚಿತ್ರ ಪಲವು ಆಲೋಚನೆಯನ್ನು ಹೊಮ್ಮಿಸಿ ಎಚ್ಚರಿಸುವ ಉತ್ತಮ ಕವನವಾಗಿದೆ.

ಕ್ರಾಂತಿಯಾದರೆ ತಡೆಯಲು ಸಾಧ್ಯವಿಲ್ಲ. ಶೋಷಿತರಿಗೆ ಕಪ್ಪು ಆವರಿಸುವಲ್ಲಿ ಬೆಳಕಿನ ಪ್ರಜ್ಞೆ ಬಂದರೆ ಶೋಷಕರು ಯಾರೂ ಉಳಿಯುವುದಿಲ್ಲ ಎಂಬುದನ್ನು 'ಕಣ್ಣು ತೆರೆದು ನೋಡು ಗೆಳೆಯಾ' ಕವನದಲ್ಲಿ ವರ್ಣಿಸುತ್ತ ಕವಿ ಹೇಳಿದ್ದಾರೆ.

'ಕಪ್ಪು ಮೋಡದಾಚೆಯ ಮಿಂಚು
ಬೆಂಕಿ ಮಳೆ ತಂದರೆ ಆಶ್ಚರ್ಯವಿಲ್ಲ!'

ದೀನದಲಿತರ, ಶ್ರಮಿಕರ ದುರವಸ್ಥೆಯ ಜೀವನದ ರೀತಿಗೆ ಕಾರಣಗಳನ್ನು ಹುಡುಕುತ್ತ ಸಮಾಜವಾದದ ಹಿನ್ನೆಲೆಯಲ್ಲಿ, ಮಾರ್ಕ್ಸ್ ಚಿಂತನೆಯಲ್ಲಿ ಶೋಷಣಾ ವ್ಯವಸ್ಥೆಯ ಮೂಲ ಬೇರುಗಳನ್ನು ಹುಡುಕುತ್ತ 'ಸಮಾಧಿಯಾದವರ' ಕವನ ಸಾಗಿದೆ. ಆ ಕವನ ರಚಿತವಾದ ಎಂಭತ್ತರ ದಶಕದ ಪರಿಸ್ಥಿತಿ ಈಗ ಇನ್ನೂ ಹದಗೆಟ್ಟಿರುವುದರಿಂದ ಆ ಕವನ ಇಂದಿಗೂ, ಎಂದಿಗೂ ಪ್ರಸ್ತುತವಾಗಿರುವುದು ಕವಿಯ ಸಾರ್ವಕಾಲಿಕ ಮೌಲಿಕ ಚಿಂತನೆಗೆ ಸಾಕ್ಷಿಯಾಗಿದೆ.

'ನೀರು ಸಿಗದ ಊರಿನೊಳಗೆ ಬೀರುದಾರು ಹರಿತಾದ
ಹಾರಿ ಹೋಗುತಾವ ಜೀವ!!'
....
....
'ಕಲ್ಲು ಕಲ್ಲಿನ ಮ್ಯಾಲೆ ಕೊಲೆಗಳು ನಡಿತಾವ
ಕಾಸು ಕಾಸಿಗೆಲ್ಲ ಕೂಸುಗಳು ಮಾರುತಾವ.'

ಈ ಬಗೆಯ ತೀವ್ರಭಾವದ ಕವನಗಳು ಮ್ಯಾಕ್ಸಿಂಗಾರ್ಕಿಯ ನುಡಿಯನ್ನು ನೆನಪಿಗೆ ತರುತ್ತವೆ "We hold that society which looks upon the individual as nothing but a means of making others rich is inhuman and hostile to our interests."

'ಉಂಡು ಮಲಗಿದವರು' ಕವನ ಸಂಕಲನದಲ್ಲಿ ಸ್ವಾತಂತ್ರ್ಯದ ಆದರ್ಶದ ಹೊಸ ಅಲೆಗೆ ತೆರೆದುಕೊಂಡ ಕವಿಯ ಮನಸ್ಸು ತುರ್ತುಪರಿಸ್ಥಿತಿಯ ವಿರುದ್ಧ ಕಿಡಿಕಾರಿರುವ ಆರು ಕವನಗಳಿವೆ. 'ಸತ್ತು ಬದುಕಿದ್ದೇವೆ', 'ಸರ್ಕಸ್ಸಿನವಳು', 'ಜೋಗುತಿ', 'ಅಜ್ಜನಮನೆ' ಮುಂತಾದವುಗಳು ತೀವ್ರ ವ್ಯಂಗ್ಯಾತ್ಮಕವಾಗಿವೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕುಗೊಂಡಿದ್ದಕ್ಕೆ, ಸರ್ವಾಧಿಕಾರಿಯ ದಮನಕಾರಿ ರೀತಿಗೆ ಸ್ಪಂದಿಸಿದ ವಿಶಿಷ್ಟ ಕವನಗಳಾಗಿವೆ.

ಅಪ್ರಯೋಜಕವಿದ್ಯೆಯ, ಅಸಹಾಯಕ ವಿದ್ಯಾವಂತ ನಿರುದ್ಯೋಗಿಯ ನೋವು 'ಸೋಡ ಚೀಟಿ' ಕವನದ ನುಡಿ ನುಡಿಯಲ್ಲೂ ಕೆಲಸರಹಿತ ನರಳಾಟದ ಕಾವನ್ನು ಹೊಂದಿದೆ. ತನ್ನ ಪದವಿಯ ಸರ್ಟಿಫಿಕೇಟ್, ಅಂಕಪಟ್ಟಿ ಆತನಿಗೆ 'ಚರಿತ್ರೆ ಹೇಳುವ ಮಾರ್ಕ್ಸ್ ಕಾರ್ಡು ಬಿಟ್ಟ ಗಂಡನಿಗೆ ಕೊಟ್ಟ ಸೋಡ ಚೀಟಿ'. ಅವನ ಮನೆಯ ದಾರುಣತೆ:

'ಕಣ್ಣಂಚಿನಲ್ಲಿ ಜೀವ ಹಿಡಿದ ತಾಯಿ
ಹರಿದ ಬಟ್ಟೆಯಲ್ಲಿ ಹರೆಹಿಡಿದ ತಂಗಿ.'

ಹೀಗೆ ಅಸಹಾಯಕತೆಯ ಅನುಭವ ಕಾವ್ಯವಾಗಿ ಹರಿದು ಮನದ ಮಾಡದಲ್ಲಿ ಗೂಡುಕಟ್ಟುತ್ತದೆ. ನಿರುದ್ಯೋಗಿಯ ಅನಾಥತ್ವ, ಅವನ ದುಡಿಯುವ ಕಸುವು, ಕೆಲಸ ಸಿಗದ ವ್ಯವಸ್ಥೆ, ತಾಳದ ಹಸಿವು, ವ್ಯವಸ್ಥೆಯ ವಿಷವರ್ತುಲದಲ್ಲಿ ಸಿಕ್ಕ ಚಿತ್ರಣ–ವಿದ್ಯೆ ನೀಡಿದ ಜೀವಂತಸಾವನ್ನು ದಾಖಲಿಸಿದೆ.

ಸೂಗಯ್ಯ ಹಿರೇಮಠ ಅವರು ೧೯೯೨ರಲ್ಲಿ ಪ್ರಕಟಿಸಿರುವ 'ನೀರು-ನೆಲೆ' ಕವನ ಸಂಕಲನ ಅದೇ ಬಂಡಾಯದ ಧ್ವನಿಯನ್ನು ಮುಂದುವರಿಸಿದೆ. 'ಹೆಸರಿಲ್ಲ' ಎಂಬ ಕವನದಲ್ಲಿ ನಾವು ವಾಸಿಸುವ ಭಾರತ ನಮ್ಮದಾಗಿದೆಯೇ? ದುಡಿವವರಿಗೆ, ದಲಿತರಿಗೆ, ಬಡ ಅಸಹಾಯಕರಿಗೆ ತಮ್ಮದಾಗಿದೆಯೆ? ಎಂಬ ಪ್ರಶ್ನೆ ಎತ್ತುತ್ತ ಇಡೀ ದೇಶವನ್ನು 'ಮನೆ' ಎಂದು ಸಂಕೇತಿಸಿ ಅಲ್ಲಿರುವ ಅರಾಜಕತೆ, ಶಿಥಿಲತೆಯನ್ನು ಶೋಧಿಸಿದ್ದಾರೆ.

'ಬಣ್ಣ ಬಳಿದರೆ ಮನೆ ಬದಲಾಗುವುದಿಲ್ಲ
ಬದಲಿಸುವ ಮನಸು ಇಲ್ಲ,
ಹುಟ್ಟು ಸಾವಿನಷ್ಟೇ ಮನೆಗೂ-ಮಸಣಕ್ಕೂ
ವ್ಯತ್ಯಾಸವೇ ಕಾಣುವುದಿಲ್ಲ.'

ಎಂಬ ನುಡಿ ಹಲವಾರು ಅರ್ಥವನ್ನು ಹೊಮ್ಮಿಸುತ್ತ ಚಿಂತನೆಗೆ ತೊಡಗಿಸುತ್ತದೆ. ನಮ್ಮ ನಾಡಿನಲ್ಲಿಯ ಸನಾತನ ಧರ್ಮ, ಸಂಪ್ರದಾಯ ಹುಳಹತ್ತಿದ್ದು ಇಲ್ಲಿ ಹೊಮ್ಮುವ ಹೊಸ ಹುನ್ನಾರದ ಸಣ್ಣ ಸಣ್ಣ ತತ್ವಗಳು ಇಡೀ ವ್ಯವಸ್ಥೆಯನ್ನು ಬದಲಾಯಿಸಲಾಗದ್ದು ಎಂಬುದನ್ನು 'ಈ ಭೂಮಿ' ಕವನದಲ್ಲಿ ವರ್ಣಿಸಿದ್ದಾರೆ.

'ಕಾಲಕಾಲಕ್ಕೆ ಹರಿವ ನೀರಿಗೆ
ಉಂಟಾದ ಹಳ್ಳ, ಸವಕಲು ಮಣ್ಣಿಗೆ
ಬೇರು ಕಿತ್ತಿನಿಂತ ಮರ
ಕುರುಚಲ ಗಿಡ
ತೇಲಿದ ಹಾಸುಬಂಡೆ.'

ಎಂದು ಕರೆದು; ಇಲ್ಲಿ ಸಂತೋಷ, ನೆಮ್ಮದಿ ತರುತ್ತವೆ ಎಂದು ಬರುವ ನಾಯಕರನ್ನು ಕವಿ 'ಕಾಗೆ-ಬೆಳ್ಳಕ್ಕಿ'ಗೆ ಹೋಲಿಸಿರುವುದು, ಕುರಿಕಾಯುವ ಹುಡುಗನಾಗಿ ಕವಿ ಕಂಡ ಸತ್ಯ ಸಾಂಕೇತಿಕವಾಗಿ ಕಾವ್ಯರೂಪ ಪಡೆದಿದೆ. ಉಣ್ಣೆ ತಿನ್ನಲು ಪ್ರೀತಿ ಮಾಡುವ ಕಾಗೆ-ಬೆಳ್ಳಕ್ಕಿ ನಿಜ ಗೆಳೆಯರೇ? ಎಂಬ ಪ್ರಶ್ನೆ ಎತ್ತಿದ್ದಾರೆ.

ಸ್ವತಂತ್ರ ದೇಶವಾಗಿ, ಭಾಷಾವಾರು ರಾಜ್ಯವಿಂಗಡಣೆಯಾಗಿ ಕರ್ನಾಟಕ ಒಂದಾದರೂ ಸಮಸ್ಯೆಗಳು ಹಾಗೇ ಉಳಿದಿವೆ ಎಂಬುದನ್ನು 'ಓ ಕನ್ನಡಿಗನೆ' ಕವನ ಸಾರುತ್ತದೆ.

'ಕತ್ತಲಲ್ಲಿ ಹೊಳೆವಚುಕ್ಕಿ
ಒಡಲ ಬೆಳಕ ತೋರವು
ಹೊಸ ಒಡವೆ ತರಲು ಹೋಗಿ
ನಕಲಿ ಮಾಲೆ ತಂದೆವು.'

ಇಂಗ್ಲಿಷಿನ ವಿಷಕಟ್ಟೆ, ನೈಜತೆ ಒತ್ತೆಯಿಟ್ಟು ನಕಲಿಯಾಗಿ ರಾಜ್ಯೋತ್ಸವ ಆಚರಿಸುವ ಕನ್ನಡಿಗರ ಬಗೆಯು:

'ಕೊರಳ ಸುತ್ತ ಹಾವುಸುತ್ತಿ
ಆಡಳಿತಕ್ಕೆ ಒತ್ತೆಯಿಟ್ಟವು
ವರುಷ ವರುಷ ತೇರೆಳೆದು
ಉಧೋ ಉಧೋ ಎಂದೆವು.'

ಕವಿ 'ಮರದ ಮಾತು' ಕವನದಲ್ಲಿ ವ್ಯವಸ್ಥೆಯನ್ನು ಚಿತ್ರಿಸುತ್ತ ಚುನಾವಣೆಯನ್ನು ಕುತೂಹಲಕಾರಿಯಾಗಿ ಹೊಸರೂಪಕದಲ್ಲಿ ಬಣ್ಣಿಸಿದ್ದಾರೆ.

'ಸುಗ್ಗಿ ಬಂದಾಗಲೆ ಜಾತ್ರೆ
ಮಾಡುವ ಜನ
ಬರಿದೊಡಲ ಮೇಲೆ
ಬರೆಹಾಕಿದ
ಮಸಾಲೆ ದೋಸೆ
ಒಂದೊಂದು ಭಾಗಕ್ಕೂ
ಚಿತ್ರ ಹಿಂಸೆ'

'ನಮ್ಮೂರ ಗಣರಾಜ್ಯೋತ್ಸವ' ನಮ್ಮಲ್ಲಿ ಬೆಳಕಿನ ಪ್ರಜ್ಞೆ ಬಂದಿಲ್ಲದಿರುವುದನ್ನು, ಸ್ವಾತಂತ್ರ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿಲ್ಲ ಎಂಬುದನ್ನು ಬಣ್ಣಿಸಿದೆ.

'ಲ೨ರ ಬರದ ಚಿತ್ರ ವಿಚಿತ್ರ' ಕವನದಲ್ಲಿ ಕವಿಯು ಬರದಲ್ಲಿ ವಲಸೆ ಹೋಗುವ ಅಸಹಾಯಕರನ್ನು 'ಸಂಘರ್ಷದ ರೇಲ್ವೆ ಸ್ಟೇಷನ್ । ಹಸಿದ ಕಂಗಳಲ್ಲಿ ಹೊತ್ತಿದ ಒಲೆ"

ಎಂದು ಬಣ್ಣಿಸಿರುವುದು ಅವರ ಹಸಿವು, ಆಸೆ, ನಿರಾಸೆ, ಬೆಂಕಿಯ ಅನುಭವ ಬಂಡಾಯದ ಅನುಭಾವವತ್ತ ಸಾಗಿದೆ. 'ಬೆವರು ಹಿಂಗಿದ ಮಣ್ಣು ಮುಖ' ದುಡಿಮೆಗೆ ತಯಾರಾಗಿದ್ದರೂ ಕೆಲಸವಿಲ್ಲದ ನಿಷ್ಕ್ರಿಯತೆಯನ್ನು ಸೂಚಿಸಿದರೆ; ದುಡಿಯದೆ ಗಳಿಸುವ ಬಂಡವಾಳಶಾಹಿಯನ್ನು 'ಕೆಂಪು ಬಣ್ಣದಲ್ಲಿ ನೀ(ಬೀ)ರು ತುಂಬಿದ/ಡ್ರಮ್ಮು ಹೊಟ್ಟೆ'ಯು ಢಾಳಾಗಿ ಬಿಂಬಿಸಿದೆ.

'ಸಂದರ್ಶನ' ವ್ಯವಸ್ಥೆಯ ಜಾಲದ ನಿರುದ್ಯೋಗಿಯ ನೋವಿನ ಕಾವ್ಯ. ಒಂದು ನೌಕರಿಗಾಗಿ ಸಾವಿರಾರು ವಿದ್ಯಾವಂತ ಯುವಕರು ಮುಗಿಬೀಳುವುದನ್ನು 'ಒಂಪಗಳು' ಮತ್ತು 'ಸಾವಿರಾರು ಕಾಗೆಗಳು' ಪ್ರತಿಮಿಸಿವೆ. ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಿಕೊಂಡು ಕುಂತ ವ್ಯಕ್ತಿಯನ್ನು 'ವಂಚನೆಯ ಹುಲಿ' ಎಂದು; ಮೆರಿಟ್ ಮೀರಿ ಅವಕಾಶ ಪಡೆಯುವ ಕ್ಷುಲ್ಲಕರನ್ನು 'ಉಪಾಯದ ನರಿಯ । ಕಣ್ಣಿಗೂ ಮಣ್ಣೆರಚಿ ತಿನ್ನುವ । ನಾಯಿಗಳು' ಎಂದು ಕರೆದಿದ್ದಾರೆ.

ಈ ದೇಶದಲ್ಲಿ ಉತ್ತಮವಾದುದನ್ನೇ ಮಾಡುವೆವು ಎಂದು, ಎಲ್ಲ ಒಳಿತನ್ನು ನಾಶಮಾಡುವವರನ್ನು 'ನಾವು' ಕವನದಲ್ಲಿ ವ್ಯಂಗ್ಯಾತ್ಮಕವಾಗಿ ಪರಿಚಯಿಸಿದ್ದಾರೆ. ಮಹಾತ್ಮಾ ಗಾಂಧಿಯನ್ನು ನೆನೆಯುವ ಈ ಕವನವು ಅಂತಹ ಮಹಾತ್ಮನ ನಾಡಿನಲ್ಲಿ ಬೆಳಕ ಮಾಡುವೆವೆಂದು ಬೆಂಕಿ ಹಚ್ಚಿ, ಉತ್ತಮವಾದುದರ ಮೇಲೆ ತಮ್ಮ ಬುಗುರಿ ಆಡಿಸಿ ನಾಶಪಡಿಸುವ ನೀಚ ಬಗೆಯನ್ನು; ಸುಲಿಸಿಕೊಂಡ ಪ್ರಾಣಿಯ ಬಗ್ಗೆ ಯೋಚಿಸುವ ಗೋಜಿಗೂ ಹೋಗದ ಅದರ ಸಾವಿನ, ನೋವಿನ ಕಲ್ಪನೆಯೂ ಇಲ್ಲದೆ ಸುಖಿಸುವ ಹೀನ ರೀತಿ.

'ಸಿಕ್ಕ ಪ್ರಾಣಿಯ ಸುಲಿದು
ಚಿಮ್ಮಾವಿಗೆಯ ಜೇಕಿಗೆ ಇವರು
ಜೋಕು ಹೊಡೆಯುತ್ತ!'

ಇರುವದು ಶೋಷಕರ ಪಶುವರ್ತನೆಯಾಗಿದೆ.

ಆಧುನಿಕ ಮಹಿಳೆ ಎಂದು ಕರೆದರೂ ಇಂದಿನ ಹೆಣ್ಣಿನ ಶೋಷಣೆ, ಕತ್ತೆಯ ದುಡಿತ, ಅಸಹಾಯಕತೆ, ಸ್ವಾತಂತ್ರ್ಯರಹಿತ ಜೀವನ ಕೊನೆಯಾಗಿಲ್ಲವೆಂದು 'ಬಲಿ' ಕವನ ಸಾರುತ್ತಿದೆ. ಅವಳನ್ನು ದುಡಿಸಿಕೊಳ್ಳುತ್ತ ಶೋಷಿಸುವ ಕ್ರಿಯೆ ನಿರಂತರವಾಗಿದೆ ಎಂಬುದನ್ನು 'ಒಲೆ' ಧ್ವನಿಸುತ್ತದೆ. ಇದೊಂದು ಪ್ರತಿಮಾತ್ಮಕವಾದ ಕವನ.

'ಆಧುನಿಕತೆಗೆ ಮನಸೋತು
ಒಲೆ ಬದಲಿಸಿದರೂ
ದಹಿಸಿ ತಿನ್ನುವ ಕ್ರಿಯೆ
ನಿಲ್ಲುವುದಿಲ್ಲ.'

ಸಂಪ್ರದಾಯವನ್ನು 'ಪಾಚಿ ಗಟ್ಟಿದ ನೆಲ । ಹಸನಾಗುವುದಿಲ್ಲ' ಎಂದು ಹೇಳುತ್ತ; ಆಶೆಯ ನೋವು, ನಿಸ್ಸಹಾಯಕತೆ ಯಾವುದೋ ಒಂದು ಸಮಸ್ಯೆಯಿಂದಾದುದಲ್ಲ, ಸಾವಿರಾರು ನಿಗೂಢತೆಗಳಿಂದಾದುದು ಎಂಬುದನ್ನು 'ದಿನಾ ಸುಡುವ ಬೆಂಕಿಗೆ । ಸಾವಿರಾರು

ನಾಲಿಗೆ' ಎಂದು ವರ್ಣಿಸಿ ಅವಳ ಪ್ರತಿದಿನದ ಚೀರಾಟ ನೋವನ್ನು ಉಪಮಾನಾತ್ಮಕವಾಗಿ ಹೀಗೆ ಬಣ್ಣಿಸಿದ್ದಾರೆ:

'ಆಶೆಯ ಹಕ್ಕಿಗೆ
ಬಾಗಿಲು ಮುಚ್ಚಿ
ಬೆಂಕಿಗೆ ಮೈಯೊಡ್ಡಿದಂತೆ
ನೋವಿನ ಕೂಗು.'

'ಜನ' ಕವನದಲ್ಲಿ ಧಾರ್ಮಿಕ ವ್ಯಕ್ತಿಗಳ, ಬುದ್ಧಿಜೀವಿಗಳ, ಅವಕಾಶವಾದಿಗಳ ಎಡಬಿಡಂಗಿತನವನ್ನು ವರ್ಣಿಸಿ; ಕೊನೆಗೆ ದುಡಿಯುವ ವರ್ಗದ ಬದುಕನ್ನು ಚಿತ್ರಿಸಿ ಅವರ ಅಸಹಾಯಕತೆಯನ್ನು 'ಈ ಜನರೆ ಹೀಗೆ ಜೀವಂತ ಸತ್ತವರು' ಎಂದಿರುವುದು ಎಚ್ಚರಿಕೆಯ ಮೀಟುಗೋಲಿನಂತಿದೆ.

'ಬಿಸಿಲುಗಾಳಿ' ಕವನವು ಬರಪೀಡಿತ ಪ್ರದೇಶದ ಜನರ ನಿರ್ಜೀವತೆ, ಸ್ತಬ್ಧತೆಯನ್ನು 'ಗೋಣು ಮುರಿದ ಗೊಂಬೆ ಮನೆ' ಎಂದು ಕರೆದು, ಬದುಕು ನೆಲೆ ಇಲ್ಲದೆ ಹಾರಿಹೋಗುತ್ತಿರುವುದನ್ನು 'ತರಗೆಲೆಯ ವ್ಯವಹಾರ'ವೆಂದು, ಗುಳೇ ಹೋಗುವ ಸ್ಥಿತಿಯನ್ನು 'ಬೇರು ಕತ್ತರಿಸಿದ ಬಂಜೆಮರ। ಎತ್ತಿ ಬಿಸಾಡಿದ ಪರದೇಶಿ ಗಾಳಿ' ಎಂಬ ಪ್ರತಿಮೆಗಳಲ್ಲಿ ಹಿಡಿದಿಟ್ಟಿದ್ದಾರೆ. ಅಂತಹ ಅಸಹಾಯಕರು ನೆಲಕ್ಕು ಹತ್ತದ, ಆಕಾಶ ಮುಟ್ಟದ ಮಧ್ಯದಲ್ಲಿಯೇ ಅತಂತ್ರವಾಗಿ ಸುತ್ತುವ ಕ್ರಿಯೆಗೆ ಒಳಗಾಗಿರುವ; ಅವರ ಬದುಕಿನಲ್ಲಿ ಪ್ರಾರಂಭವನ್ನು ಗುರುತಿಸಲು ಸಾಧ್ಯವಾಗದೆ, ಸತ್ತದ್ದನ್ನು ಮಾತ್ರ ಹೇಳಲು ಸಾಧ್ಯ ಎಂದಿದ್ದಾರೆ.

'ಸ್ಮಶಾನ ಮೌನದಲಿ ಭೂಮಿ ಆಕಾಶಕ್ಕೆ
ಬೂದಿ ಚೆಲ್ಲಿದ ಬಿರುಗಾಳಿ
ಕ್ರಮಿಸಿದ್ದು ಸಮುಹಾದಿ
ಆದಿಯೋ ಅನಾದಿಯೋ ಎಲ್ಲವೂ ಸಮಾಧಿ.'

'ಎಲ್ಲಿ ಹೋದಳು ಗೆಳೆಯ' ಎಂಬ ಕವನ ನವೋದಯ ಧಾಟಿಯಲ್ಲಿ ಅಮೂರ್ತಭಾವ 'ಶಾಂತಿ'ಯನ್ನು ಹುಡುಕುವ ಪ್ರಯತ್ನವಾಗಿದೆ.

ಈ ಕವಿಯು ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮಾನವೀಯ ನೆಲೆಗಳು ನಾಶವಾಗುತ್ತಿರುವ ಕಾರಣವನ್ನು ಶೋಧಿಸುತ್ತ; ವರ್ಗ, ವರ್ಣ, ಪ್ರಾಂತ್ಯದ ಮಿತಿಗೆ ಒಳಗಾಗದೆ ಪ್ರಗತಿಶೀಲ ಚಿಂತಕರಾಗಿ, ಸಾರ್ವಕಾಲಿಕ ಸತ್ಯದ ಕಾವ್ಯ ನೀಡಿದ್ದಾರೆ.

(೨೦೦೭)

ಬೀದರ ಕವಿ: ವಿಸಾಜಿ

ಕಾವ್ಯವು ಮಧುರಭಾವ ಆಹ್ಲಾದವನ್ನೀಯುವ ರಸಚೇತನವಾಗಿದ್ದು ಸಮಾಜದಲ್ಲಿ ನಿರ್ಮಲ ಬದುಕನ್ನು ಆಶಿಸುತ್ತದೆ. ಅದು ಒಳಿತಿಗೆ ವಿರುದ್ಧವಾದ ಸಾಮಾಜಿಕ, ರಾಜಕೀಯ, ಆರ್ಥಿಕ, ಡಾಂಭಿಕ ಶಕ್ತಿಗಳನ್ನು ಛೇದಿಸುತ್ತ ಸತ್ಯವನ್ನು ಆರಾಧಿಸುತ್ತದೆ. ಸತ್ಯಕ್ಕೆ ನೇರ ನಡೆ-ನುಡಿಯ ಬದುಕಷ್ಟೇ ಸಾಕ್ಷಿ. ಅಂತಹ ಶುದ್ಧಜೀವಿಯಾಗಿ, ಸಜ್ಜನಿಕೆಯ ಸಾಕಾರದಂತಿರುವ ಬೀದರದ ಹಿರಿಯ ಕವಿ ಡಾ. ಜಿ.ಬಿ. ವಿಸಾಜಿ ಅವರು ಮೂವತ್ತು ವರ್ಷಗಳಲ್ಲಿ ಅರವತ್ತೊಂದು ಕವನಗಳನ್ನು ಮಾತ್ರ ರಚಿಸಿರುವುದು–ಮನಸ್ಸಿನ ಭಾವ ಮಾಗುವಿಕೆಗೆ ಕಾದ ತಾಳ್ಮೆ, ಉದ್ವೇಗರಹಿತ ಆಲೋಚನೆ, ಸ್ಥಿತ ಪ್ರಜ್ಞತ್ವವನ್ನು ಸಾರುತ್ತದೆ.

ಈ ಕವನ ಸಂಕಲನದಲ್ಲಿ ಭಾಲ್ಕಿ ಪಟ್ಟಣದಲ್ಲಿ ಕನ್ನಡ ಶಾಲೆಯನ್ನು ನಡೆಸಿ, ವಿದ್ಯಾಕೇಂದ್ರವನ್ನು ಸ್ಥಾಪಿಸಿ ಎಲ್ಲ ವರ್ಗ, ವರ್ಣದ ಜನರ ಪ್ರೀತಿಯ ಉಸಿರಾಗಿದ್ದ ಶ್ರೀ ಚೆನ್ನಬಸವ ಪಟ್ಟದ್ದೇವರ ಕುರಿತು ಏಳು ಕವನಗಳಿವೆ. ನಾನು ಧಾರವಾಡದಿಂದ ಬೀದರಕ್ಕೆ ವರ್ಗವಾದಾಗ ಕವಿ ಚೆನ್ನವೀರಕಣವಿ ಅವರನ್ನು ಕಂಡು ಆಶೀರ್ವಾದ ಪಡೆಯಲು ಹೋದಾಗ ಅವರು "ಹೈದ್ರಾಬಾದ್ ಆಡಳಿತದಲ್ಲಿ ಮುಸ್ಲಿಂ ಆಳ್ವಿಕೆಯಲ್ಲಿ ಬೀದರ ಇದ್ದಾಗ ಹೊರಗೆ ಉರ್ದು ಶಾಲೆಯೆಂದು ಫಲಕ ತಗುಲಿಸಿ ಒಳಗೆ ಕನ್ನಡ ಕಲಿಸಿ ಬೀದರದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಿದ ಮಹಾಮಹಿಮರು ಭಾಲ್ಕಿ ಚೆನ್ನಬಸವ ಪಟ್ಟದ್ದೇವರು" ಎಂದು ಹೇಳಿದರು. ಆ ಕನ್ನಡಶ್ರೀಯ ವ್ಯಕ್ತಿತ್ವ ವಿಸಾಜಿ ಅವರ ಕಾವ್ಯದಲ್ಲಿ ಅಮರವಾಗಿದೆ.

> **"ಭಾಲಕಿ ಊರಿನೊಳಗ ಜನರ ಅರಣ್ಯದೊಳಗ**
> **ಕತ್ತಲಗವಿಯೊಳಗ ದೀಪದ ಕಂಭಾಗಿ**
> **ದಿಕ್ಕೆಟ್ಟ ಜೀವಿಗಳಿಗೆ ದಿಕ್ಕು ತೋರಿಸ್ಯಾರ।**
> **........ ....**
> **ಎಡಗೈಯಲ್ಲಿ ಬಸವಧ್ವಜ ಬಲಗೈಯಲ್ಲಿ ಕನ್ನಡಧ್ವಜ**
> **ಅವರ ಕಣ್ಣೆರಡರ ಬೆಳಕೇ ಶಿಕ್ಷಣವು**
> **ನಮ್ಮ ಭುವನದ ಭಾಗ್ಯ ಈ ಜೀವ ನೋಡ॥"**

ಆ ಯೋಗಿಯನ್ನು ಚೆನ್ನಾಗಿ ತಿಳಿದ ವಿಸಾಜಿಯವರು ಅವರ ಅಂತರಾಳವನ್ನು ಪ್ರವೇಶಿಸಿದಂತೆ ನುಡಿದದ್ದು ಕನ್ನಡ ಕಾವ್ಯದ ಪ್ರಭೆ.

"ಉಲ್ಲಾಸ ಉಕ್ಕಿ ಹಾರ್‍ಯಾವ ಹಕ್ಕಿ
ಎದಿಯಾಗ ಹೂವ ನಕ್ಕಾದ।
ಅಜ್ಞಾನ ತಮವು ಸುಜ್ಞಾನ ತರಣಿ
ಶಿವಯೋಗಿ ತೆಕ್ಕಿಗೆ ಸಿಕ್ಕಾದ॥"

ತ್ರಿಪದಿಯಲ್ಲಿ ಪ್ರಾಸ ಸಹಿತವಾಗಿ ಕಾವ್ಯ ರಚಿಸುವುದರಲ್ಲಿ ಸಿದ್ಧಹಸ್ತರಾದ ವಿಸಾಜಿ ಅವರು ಆ ಯೋಗಿಯನ್ನು "ಬೀದರದ ಬಂಗಾರ ಕಳಸ" ಎಂದುದು; ಕನ್ನಡದ ಶರಣರ ನಾಡಿನ ಸುಕ್ಷೇತ್ರ ಕಲ್ಯಾಣದ ಆ ಪರಂಪರೆಯ ಬೀಜವಿದು ಎಂಬುದು ಕಾಯಕ, ವಿದ್ಯಾದಾನ, ದಾಸೋಹ, ಶರಣ ಪಂಥದ ನಿರಂತರತೆಯನ್ನು ಸಾರುತ್ತದೆ.

"ಬಾಗಿದ ತಲೆಯೇನ ಮುಗಿದಿರುವ ಕೈಯೇನ
ಕೂಸು ಮನಸಿನ ಮೋಜೇನ। ಕಲ್ಯಾಣ
ಶರಣರ ಉಳಿದ ಬೀಜೇನ॥"

ವಿಸಾಜಿ ಅವರ ಪ್ರೇಮದ ಆನಂದವೆಲ್ಲ ವರಕವಿ ದ.ರಾ. ಬೇಂದ್ರೆಯವರ ದಾಂಪತ್ಯದೊಳಗೆ ಅರಳಿದ ಪ್ರೇಮದಂತಹದು. ಅವರ ಒಂಭತ್ತು ಪ್ರೇಮಕವನಗಳು ನವ ಉಲ್ಲಾಸದಿಂದ ಕೂಡಿದ ಮಧುರಭಾವದ ಸೆಲೆ. "ನನ್ನ ಕೈಯ ಹಿಡಿದಾಕಿ", "ಬಾಳ ಸಂಗಾತಿ ಬದುಕಿಸೆನ್ನನು" ಕವನಗಳ ಮೇಲೆ ಬೇಂದ್ರೆ ಕಾವ್ಯದ ಪ್ರೇರಣೆ ಕಂಡುಬಂದರೂ ಭಾವಲಹರಿಯ ಬಿನ್ನಾಣ ಬೇರೆಯಾಗಿಯೇ ಸ್ವಂತಿಕೆಯನ್ನು ಹೊಂದಿದೆ. "ಆರು ತಿಂಗಳ ಬಸುರಿ" ಹಲವುಭಾವಗಳನ್ನು ಬಿಂಬಿಸುತ್ತ ಒಂದೊಂದು ನುಡಿಯು ಹಲವು ಅರ್ಥವಿಸ್ತಾರಗಳನ್ನು ಹೊಂದುತ್ತ ಕನ್ನಡ ಪ್ರೇಮ ಕವನಗಳಲ್ಲಿಯೇ ಅಪೂರ್ವವಾಗಿದೆ.

"ಬಾಲಸಿಂದಿಗಿಡದ ಬದಿಕುಳಿತ ನಾರಿ
ಬೈತಲೆ ತೆಗೆದಾಳ ವಾರಿ
ನಗು ನಗುತಾ ನನ್ನ ನೋಡತಾಳ
ನನ್ನ ಬಿಟ್ಟು ಜಗ ಮರತಾಳ"

ಎಂಬಲ್ಲಿ ಬಾಲಸಿಂದಿಗಿಡ ಎಂಬುವುದು ಚಿಕ್ಕ ಈಚಲಮರ. ಬಾಲಸಿಂದಿಗಿಡದ ಧ್ವನ್ಯಾರ್ಥವನ್ನು ಹೊಂದಿ, ಆರು ತಿಂಗಳ ಬಸುರಿ ಪುಟ್ಟ ಈಚಲ ಮರದಡಿ ಕುಳಿತವಳು ಬಾಲನನ್ನು ತನ್ನ ಒಡಲಲ್ಲಿಟ್ಟುಕೊಂಡು ಅದರ ಸೇಂದಿ ಕುಡಿದ ಭಾವನೆಯಲ್ಲಿ ಮುಳುಗಿ ತನ್ನ ಇನಿಯನನ್ನು ನೋಡುತ್ತ ಜಗವನ್ನು ಮರೆತ ಸುಂದರ ಭಾವದ ಅನನ್ಯ ಚಿತ್ರಣವಾಗಿದೆ. ಅದೇ ಬಸುರಿ ಹುಟ್ಟಲಿರುವ ಕಂದನನ್ನು ಹೊತ್ತು ತೊಯ್ದಾಡುತ್ತ ಮಾಮರದ ಕೆಳಗೆ ಕುಳಿತು ತನ್ನ ಒಡಲ ಮಾವಿನ ಒಗರಿನಲ್ಲಿ ನಲ್ಲನನ್ನು ಅಳೆಯುವ ಚಿತ್ರ ಅಪೂರ್ವವಾಗಿದೆ.

ಚದುರುಯ್ಯಾಲೆಯ ಕಬ್ಬಿನ ಬನದಲ್ಲಿ ಸಿಹಿಮೊಳಕೆಯನ್ನು ಹೊತ್ತು ಒನೆದಾಡುತ್ತ ಮಾತಿನ ಚದುರಿಯಾಗಿರುವ ಚಿತ್ರಣ ಓದಿಯೇ ಸವಿಯಬೇಕಾಗಿದೆ. ವಿಸಾಜಿ ದಾಂಪತ್ಯದಲ್ಲಿ

ಪ್ರೇಮದ ಸಾರ್ಥಕತೆಯನ್ನು ಕಂಡವರು. ಅದರ ಫಲ ಕಾವ್ಯವಾಗಿ ಹರಿಯುವಲ್ಲಿ ಪ್ರಾಸ, ಅನುಪ್ರಾಸ, ಸ್ಪರ್ಧೆಗಳಿದಂತೆ ಮುನ್ನುಗ್ಗಿ ಸಹೃದಯನಿಗೆ ಮುದವನ್ನೀಯುತ್ತದೆ.

"ಕೈಯಾಗ ಬೆಳ್ಳಿಮಗು ಮಾರಿಮ್ಯಾಗ ಒಳ್ಳೆ ನಗು
ಮುಂದ ಬಂದು ಕಂದನ ತೋರಾಕಿ
ಹೊಸ್ತಿಲು ಮ್ಯಾಲೆ ನಿಂತಾಕಿ, ಚೊಚ್ಚಲು ಮಗನ್ನ ಎತ್ತಾಕಿ
ಮೆಚ್ಚಿಮೆಚ್ಚಿ ಮುದ್ದು ಕೊಡಾಕಿ"

(ನನ್ನ ಕೈಯ ಹಿಡಿದಾಕಿ)

ಅದೇ ಪ್ರೇಮಲಹರಿಯ 'ಉಪಮೆಯೋಪಮಾ' ಒಂದು ಹೊಸ ಪ್ರಯೋಗವಾಗಿ ಹೆಣ್ಣಿನ ಚೆಲುವನ್ನು ಪ್ರಕೃತಿಗೆ ಹೋಲಿಸುವ ಬಗೆಯಾಗಿದೆ. ಆ ನೂತನ ಭಾವದ ಎರಡು ಸಾಲು ಹೀಗಿವೆ.

"ಘನನಿತಂಬದೊಲು ಮಳಲು ದಿನ್ನೆ
ಮುಡಿಗೆ ಸುತ್ತಿದ ಮೊಲ್ಲೆಮಲ್ಲಿಗೆಯ ಸಮ ತಾರಾಳಿಯು"

ಆದರೆ ಪ್ರಾಸಕ್ಕಾಗಿಯೇ ಬಂದ 'ಪ್ರಶ್ನೋತ್ತರ' ಕವನದ ಮುಂಡದಾಚೆ, ಕೊಳಚೆ ಮಧುರಭಾವದಿಂದ ಹೊರಗುಳಿದಂತಿದೆ.

ಇಡೀ ನಾಡಿನಲ್ಲಿ ಕನ್ನಡದ ಕೆಲಸವನ್ನು ಸ್ವಚ್ಛ ಮನಸ್ಸಿನಿಂದ ಮಾಡುತ್ತ ಶುದ್ಧಹಸ್ತರಾಗಿ ಉಳಿದ ಸಜ್ಜನ ಶ್ರೇಷ್ಠರು ಜಿ. ನಾರಾಯಣ. ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಬೆಂಗಳೂರಿನ ಮೇಯರ್ ಆಗಿದ್ದ ಅವರು ಸಾಹಿತ್ಯಪರಿಷತ್ತಿನ ಅಧ್ಯಕ್ಷರಾಗಿ ಮನೆಮನೆಗೆ ಪುಸ್ತಕ ಮಾರಾಟ ಕೈಗೊಂಡಾಗ ಹೆಗಲಿಗೆ ಒಂದು ನೇತಾಡುವ ಚೀಲ ಹಾಕಿಕೊಂಡು ಪುಸ್ತಕ ಮಾರಾಟ ಮಾಡಿದ ನೂರಾರು ಜನರಲ್ಲಿ ನಾನೊಬ್ಬ. ಅವರ ಕನ್ನಡ ಸೇವೆ ಉದ್ವೇಗ ರಹಿತವಾದ ಶಾಂತ ಸಮಚಿತ್ತದ್ದು. ಅಂತಹವ್ಯಕ್ತಿ ಬೀದರಿಗೆ ಬಂದಾಗ "ತಾಯಿ ಬಂದಿರುವಳು ತನಮುನಿಗೊ" ಎಂದು ವಿಸಾಜಿ ಅವರು ರಚಿಸಿರುವ ಕವನ ತುಂಬಾ ಅರ್ಥಪೂರ್ಣವಾಗಿದೆ, ಜಿ. ನಾರಾಯಣರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ.

"ಕನ್ನಡ ಸರಸೋತೆ ಮಾನವು ಕಾಯಲು
ಹುಟ್ಟಿ ಬಂದಾನ ನಾರಾಯಣೊ
....
ಕನ್ನಡ ಮನಿಮಂದಿ ಒಂದಾಗಿ ಮೆರೆದರ
ನಾಡ ಭೂಮೆಲ್ಲಾ ಬೆಳಿ ಬಂತೊ"

'ನೆತ್ತರುಣಿಗಳ ನೀನು ನಿರ್ಭಯದಿ ಖಂಡಿಸಿ' ಎಂದು ಬಸವರಾಜ ಕಟ್ಟೀಮನಿ ಅವರನ್ನು ಚಿತ್ರಿಸಿರುವ ವಿಸಾಜಿ ಅವರು

"'ಕುವೆಂಪು'ವೇ ಗುರು ದಲಿತ ಜನ ದೇವರು
ಬರವಣಿಗೆ ನಿನ್ನ ಉಸಿರು
ಸಾಹಿತಿ ಸಾಮ್ರಾಟ ನಡೆಹಸನು ನುಡಿನೇರ
ಅನುಭವವೇ ಕಲಾಕುಸಿರು"

ಎಂದು ಬಣ್ಣಿಸಿರುವುದು ಕಟ್ಟೀಮನಿ ಅವರ ನಿಜ, ನೈಜ ಬಣ್ಣನೆಯಾಗಿದೆ.

ಬಸವಣ್ಣನವರನ್ನು ಕುರಿತ ನುಡಿ 'ಕಾಯದ ಕಪಟ, ಮನದ ವಿಕಾರ ಹರಿದು। ಸತತ ಸಂಗನ ಹಾತೊರೆದು ಸಾಧಿಸಿದ ದೇವ ಮಾನವ', 'ಬೆಳಗ ಬೆಳಗನಪ್ಪಿ ಮಹಾಬೆಳಗಾದ ನಮ್ಮ ಬಸವ' ಮನನೀಯವಾಗಿದೆ. ವಯಸ್ಕರ ಶಿಕ್ಷಣ, ಮಾನವತಾ ಸಪ್ತಾಹ, ಏಡ್ಸ್ ಮುಂತಾದ ವಿಷಯದ ವಿಶೇಷ ಸಂದರ್ಭದಲ್ಲಿ ಬರೆದ ಸಾಮಾಜಿಕ ಚಿಂತನೆಯ ಕವನಗಳು ಚೆನ್ನಾಗಿವೆ. ವೈಚಾರಿಕ ಕವನಗಳೆಲ್ಲ ಗಪದ್ಯವಾಗಿ ವಾಚ್ಯದ ದೋಷವಿದ್ದರೂ ಸಾಮಾಜಿಕ ಚಿಂತನಾ ಕಾವು ಮನ ತಟ್ಟುತ್ತದೆ.

ಐವತ್ತು ವರ್ಷದ ಸ್ವಾತಂತ್ರ್ಯ ಫಲದ ಚಿತ್ರಣ ಇಲ್ಲಿದೆ. ಕುಡುಕರನ್ನು ಕುರಿತು ಹಲವಾರು ಕವನಗಳು ಬಂದಿದ್ದರೂ ಕುಡಿತದಿಂದ ನಾಯಿಗೂ ಕೀಳಾದ ಅವನ ಈ ಚಿತ್ರಣ ಕುಡುಕರ ದುರಂತವನ್ನು ಕಣ್ಣಿಗೆ ಮನಕ್ಕೆ ರಾಚುವಂತಿದೆ.

"ಆಕೋ! ಸರಿರಾತ್ರಿಯಲ್ಲಿ ಸತ್ತವನಂತೆ
ರಸ್ತೆ ಬದಿಗೆ ಸೆಟೆದುಬಿದ್ದಿರುವವನು
ವಾಯಿಕ್ ವಾಯಿಕ್ ಕಾರುತ್ತಿರುವವನು
ನಾಯಿ, ಹೇಸಿಕೆ ನೆಕ್ಕುತ ನೆಕ್ಕುತ
ಅವನ ಬಾಯಿ ನೆಕ್ಕುತಿದೆ."

"ಹೇ! ಉಗಾದಿ" ಕವನದಲ್ಲಿ ಅವರು "ಹೊಸ ವಿಚಾರದ ಹೊಸ ಜನಾಂಗ ಉದಿಸಿ ಬರಲಿ" ಎಂದಿದ್ದಾರೆ. ನವಧಾಟಿಯ "ಒಂದು ಬೆಂಕಿ", "ಚೂರು ಬೆಳಕು", "ಎಷ್ಟು ಒಳ್ಳೆಯದಾಗಿದೆ" ಚೆನ್ನಾಗಿವೆ. ಆದರೂ ನವೋದಯದ ಭಾವಲಹರಿಯ ಕವಿಯಾಗಿಯೇ ಅವರು ಹೆಚ್ಚು ಸಹೃದಯರಿಗೆ ಹತ್ತಿರವಾಗಿದ್ದಾರೆ. ಮುನ್ನುಡಿಯಲ್ಲಿ ಪ್ರೊ. ವೀರೇಂದ್ರ ಸಿಂಪಿ ಅವರು ನುಡಿದಿರುವಂತೆ ವಿಸಾಜಿಯವರು "ಬೀದರ ಜಿಲ್ಲೆಯ ಹೆಮ್ಮೆಯ ಹಿರಿಯ ಕವಿಗಳಾಗಿದ್ದಂತೆ, ಕರ್ನಾಟಕದ ಹೆಮ್ಮೆಯ ಕವಿಗಳೂ ಆಗಿದ್ದಾರೆ... ಬೀದರ ಜಿಲ್ಲೆಯ ಮಟ್ಟಿಗಾದರೂ ಕವಿಗಳ ಕವಿಗಳಾಗಿದ್ದಾರೆ."

(೨೦೦೧)

ವೀರೇಂದ್ರ ಸಿಂಪಿ: ಲಲಿತ ಪ್ರಬಂಧಗಳು

ಕನ್ನಡ ಸಾಹಿತ್ಯದಲ್ಲಿ ಲಲಿತ ಪ್ರಬಂಧಗಳ ಪ್ರಕಾರ ವಿಫುಲವಾಗಿ ಬೆಳೆದಿದೆ. ವಿಶ್ವದ ಎಲ್ಲ ವಿಷಯಗಳನ್ನು ತನ್ನಲ್ಲಿ ಅಡಗಿಸಿಟ್ಟುಕೊಂಡು ಓದುಗರ ಅಭಿರುಚಿಯನ್ನು ಉತ್ತಮಪಡಿಸುವ ಸಾಹಿತ್ಯ ಇದಾಗಿದೆ. ಅಂತಹ ಪ್ರಬಂಧ ರಚನೆಯಲ್ಲಿ ಜೀವನಾನುಭವವನ್ನು ನಿರ್ಲಿಪ್ತವಾಗಿ ದಾಖಲಿಸುತ್ತ; ತಿಳಿಹಾಸ್ಯದಲ್ಲಿ, ಸತ್ಯಶೋಧನೆಯ ಮಾರ್ಗ ಹಿಡಿದು, ತನ್ನನ್ನೇ ವಸ್ತುವಾಗಿಸಿಕೊಂಡು ನಕ್ಕು ನಲಿಸುವವರು ಪ್ರೊ. ವೀರೇಂದ್ರ ಸಿಂಪಿ. ಅವರ 'ಲಲಿತ ಪ್ರಬಂಧಗಳು' ಕೃತಿಯಲ್ಲಿ ಒಟ್ಟು ೧೧ ಪ್ರಬಂಧಗಳಿದ್ದು, ಅವು ಅವರ ತಂದೆ ಸಿಂಪಿ ಲಿಂಗಣ್ಣನವರ ಮತ್ತು ಅವರ 'ಕ್ಷೌರಿಕೋಪಾಖ್ಯಾನ'ದ ಬಾಲ್ಯ ಘಟನೆಯಿಂದ ಹಿಡಿದು ನಿವೃತ್ತಿಯ ನಂತರದ 'ನಿವೃತ್ತಿಯ ಆಚೆ ಈಚೆ' ಅನುಭವದವರೆಗೆ ವಿಸ್ತಾರಗೊಂಡಿವೆ. ಇಂದಿನ ಕನ್ನಡ ಸಾಹಿತ್ಯದಲ್ಲಿ ಹಾಸ್ಯ, ವಿನೋದ ಕಡಿಮೆಯಾಗುತ್ತಿರುವಾಗ ಈ ಲಲಿತ ಪ್ರಬಂಧಧ ಒಳಹೊಕ್ಕು ಕುಳಿತಿರುವ ನಗೆ ಉಲ್ಲಾಸವನ್ನು ನೀಡುತ್ತದೆ.

'ಹೀಗೆ ಕಲಿತ ನಂತರ ನನಗೆ ಎಂಥದೋ ಒಂದು ನೌಕರಿಯ ನಂತರ ಛೋಕರಿಯೂ ಬಂದಳು. ಅವಳಿಂದು ನನ್ನ ನಾಲಿಗೆಯ ಹಿತ ಚಿಂತಕಿ, ಹೊಟ್ಟೆಯ ಹಿತ ಚಿಂತಕಿ' ಎಂದು 'ಹೊಸ ರುಚಿ ಹೊಸ ಪ್ರಯೋಗಗಳು' ಪ್ರಬಂಧದಲ್ಲಿ ಹೆಂಡತಿಯನ್ನು ಪರಿಚಯಿಸುತ್ತ ಆಕೆಯ ಬಿಸಿ ಬೇಳೆಬಾತ್ ಪ್ರಯೋಗವನ್ನು ವಿವರಿಸಿರುವ ರೀತಿಯನ್ನು ಓದಿಯೇ ಸವಿಯಬೇಕಾಗಿದೆ. 'ವಾಕಿಂಗಿನ ಇತಿಮಿತಿಗಳು' ಲೇಖನ ವಾಕಿಂಗ್ ಪ್ರತಿಷ್ಠೆಯ ಜನಕ್ಕೆ ಚಾಟಿ ಏಟಿನ ಬರೆಹವಾಗಿದೆ. ಅದನ್ನು ಓದುತ್ತ ಸಾಗಿದಂತೆ ಇಷ್ಟೊಂದು ಸತ್ಯವನ್ನು ಪ್ರಬಂಧದಲ್ಲಿ ದಾಖಲಿಸಲು ಸಾಧ್ಯವೇ ಎನಿಸುತ್ತದೆ. 'ಸಾಲಕ್ಕೆ ಭಯ ಬೇಡ' ಪ್ರಬಂಧದಲ್ಲಿ ಅವರ ಆಂಗ್ಲ ಪ್ರೌಢಿಮೆ ಪರಿಚಯವಾಗುತ್ತದೆ. ಸಾಮರ್ಸೆಟ್ ಮಾಮ್, ಸ್ಟೀಫನ್ ಲೀಕಾಕ್, ಗೋಲ್ಡ್‌ಸ್ಮಿತ್‌ರ ಲೇಖನಗಳಿಂದ ಹಲವು ಉದಾಹರಣೆಗಳನ್ನು ನೀಡಿ ಸಾಲಿಗ ಮತ್ತು ಸಾಲಗಾರರ ಒಂದು ಅಪೂರ್ವ ಚಿತ್ರವನ್ನು ಕಣ್ಮುಂದೆ ಕುಣಿದಾಡಿಸಿದ್ದಾರೆ. 'ವಿಶ್ವ ಸಾಹಿತ್ಯದಲ್ಲಿ ಸಾಲ ಪಡೆದವರು ಸ್ಥಾನ ಪಡೆದಿದ್ದಾರೆಯೇ ವಿನಃ ಸಾಲ ಕೊಟ್ಟವರಲ್ಲ' ಎಂಬ ಅವರ ಮಾತು ನಿಜವನ್ನು ಸಾರುತ್ತಿದೆ.

'ಮನೆಯಲ್ಲಿ ಅಳಿಯ ಇರಬಾರದು, ಜಂತಿಯಲ್ಲಿ ಹಾವು ಇರಬಾರದು' 'ಭಾವ ಊರ ಸರದಾರ, ಮನೀ ಹೆಂಡತಿ ಪಿಂಜಾರ' ಎಂಬ ನಾಣ್ನುಡಿಗಳಿಂದ ಕೂಡಿದ 'ಅಳಿಯನ ದೃಷ್ಟಿಯಲ್ಲಿ' ಪ್ರಬಂಧ ಇನ್ನೂ ವಿಸ್ತಾರವಾಗಿದ್ದರೆ ಚೆನ್ನಾಗಿತ್ತು ಎನಿಸುತ್ತದೆ. 'ಉಪದೇಶಗಳು'

ಪ್ರಬಂಧದ 'ಉಪದೇಶದ ಇನ್ನೊಂದು ಸಾಮಾನ್ಯ ಲಕ್ಷಣವೆಂದರೆ ಅದು ನಿಷೇಧಾತ್ಮಕವಾಗಿದೆ' ಎಂಬ ನುಡಿ ಸತ್ಯವಾಗಿದೆ.

ಈ ಪ್ರಬಂಧಗಳ ವೈಶಿಷ್ಟ್ಯವೆಂದರೆ ಅವು ತನ್ನೊಡಲಿನಲ್ಲಿ ಬೀದರ ಮತ್ತು ಬಿಜಾಪುರ ಜಿಲ್ಲೆಯ ಪದಗಳನ್ನಿಟ್ಟುಕೊಂಡು ಅದನ್ನು ಕನ್ನಡದ ಓದುಗರಿಗೆ ಪರಿಚಯಿಸುತ್ತಾ ಸಾಗುವುದಾಗಿದೆ.

ಜೇಟುಕೊಟ್ಟು - ಕಾಲು ಉದ್ದಕ್ಕೆ ನೀಡಿ ಮಲಗುವುದು

ಹೆಡಕು ಹಾರಿಸುವ - ಭುಜ ಕುಣಿಸುವ

ಆ ಹೇರ - ಉಡುಗೊರೆ Gift

ಜೇಳಜಿ - ಮುಂಬಾಗಿಲ ಎರಡೂ ಪಕ್ಕದಲ್ಲಿ ಕೂಡಲು ಕಟ್ಟಿದ ಕಟ್ಟೆ

(ಈ ಪದಗಳನ್ನು ಮೈಸೂರಿನ ಜನ ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿದೆ. ಅದಕ್ಕಾಗಿ ಅವುಗಳ ಅರ್ಥವನ್ನು ನಾನು ತಿಳಿದುಕೊಂಡು ವಿವರಿಸಿದ್ದೇನೆ.)

ಈ ಪ್ರಬಂಧ ಸಂಕಲನವು ಸದಭಿರುಚಿಯ, ತಿಳಿಹಾಸ್ಯದ ಸಂಗ್ರಹಯೋಗ್ಯ ಕೃತಿಯಾಗಿದೆ.

(೨೦೦೦)

೦

ಜಗನ್ನಾಥ ಹೆಬ್ಬಾಳೆ: ಓ ದೊರೆ ಬಾ ಧರಿಗೆ

ನಾವದಗೇರಿ ಬೀದರ ನಗರದ ಅಂಚಿನಲ್ಲಿರುವ ಒಂದು ಗ್ರಾಮ. ಅದು ಲೇಖಕ ಜಗನ್ನಾಥ ಹೆಬ್ಬಾಳೆ ಅವರ ಜನ್ಮಸ್ಥಳ. ಹಾಗಾಗಿ ಕನ್ನಡ ಸಾಹಿತ್ಯಪ್ರಿಯರಿಗೆ ಆ ಊರಿನ ಪರಿಚಯವಾಗುತ್ತ 'ಓ ದೊರೆ ಬಾ ಧರಿಗೆ' ಎಂದು ಕರೆಯುತ್ತ ತನ್ನ ಕಥೆ ಹಾಗೂ ವ್ಯಥೆಯನ್ನು ಸಾರುತ್ತಿದೆ. ಇಂತಹ ಲಕ್ಷಾಂತರ ಗ್ರಾಮಗಳು ನಮ್ಮ ದೇಶದಲ್ಲಿ ಹೀನಾವಸ್ಥೆಯಲ್ಲಿ ಉಸಿರಾಡುತ್ತಿರುವಾಗ ಜನಪದ ವಿದ್ವಾಂಸರೂ, ಕ್ರಿಯಾಶೀಲ ಉತ್ಸಾಹಿ ಪ್ರಾಧ್ಯಾಪಕರೂ ಆದ ಹೆಬ್ಬಾಳೆ ಅವರು ಭೌಗೋಳಿಕ ಚಿತ್ರಣ ನೀಡುತ್ತ, ಆ ಗ್ರಾಮದ ಹೆಸರಿನ ಮೂಲವನ್ನು ಪರಿಚಯಿಸುತ್ತ (ನಾವಿಂದ ಕೇರಿ > ನಾವಿದ ಕೇರಿ >ನಾವದ ಗೇರಿ), ಅದರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ವಸ್ತುಸ್ಥಿತಿಗಳನ್ನು ತುಂಬಾ ಚೆನ್ನಾಗಿ ತಿಳಿಸಿದ್ದಾರೆ. ಅವರು ನಾವದಗೇರಿಯಲ್ಲಿ ಹುಟ್ಟಿದ್ದು ಆ ಊರಿನ ಪುಣ್ಯ. ಇಲ್ಲದಿದ್ದರೆ ಅದರ ಚರಿತ್ರೆ ಬೀದರಿನ ಹಲವು ಮರೆತ ವಿಷಯಗಳಂತೆ ಕಾಲನ ಮರೆಗೆ ಸೇರಿಹೋಗುತ್ತಿತ್ತು.

ಹೆಬ್ಬಾಳೆ ಅವರು ಧರಿನಾವದಗೇರಿಯ ಹಳೆನಾವದಗೇರಿ, ಹೊಸ ನಾವದಗೇರಿಗಳ ಚಿತ್ರ ನೀಡುವಲ್ಲಿಯೇ ಆ ಗ್ರಾಮದ ಬವಣೆಯ ಮುಖವನ್ನು ಕಾಣಿಸುತ್ತಾರೆ. ಅವರು 'ಸಂಕ್ಷಿಪ್ತ ಇಣುಕು ನೋಟ' ಎಂದು ಕರೆದರೂ ಅದರ ಸಮಗ್ರ ಚಿತ್ರ ಈ ಪುಸ್ತಕದಲ್ಲಿ ದಾಖಲಾದಂತಿದೆ. ಕನ್ನಡಿಗರ ಬಡತನ, ಕುಡಿತ, ವರದಕ್ಷಿಣೆ, ಅವಿದ್ಯೆ, ಆರ್ಥಿಕ ಅಸಹಾಯಕತೆಯ ತಾಂಡವ ಕಣ್ಣಿಗೆ ರಾಚುತ್ತದೆ. ಅದರಲ್ಲೂ ಬೆಳಗುವ ಉಗಾದಿ, ದೀಪಾವಳಿ, ದಸರ, ನಾಗರಪಂಚಮಿಯ ಆನಂದ, ಪಾತರಕುಣಿತದ ನೆನಪು, ಶವಸಂಸ್ಕಾರದ ರೀತಿ ರಿವಾಜುಗಳು, ತಿಪ್ಪೆ ಪೂಜೆ, ಬೂದಿ ಸಂಪ್ರದಾಯ ಜನಪದ ನಂಬಿಕೆಗಳು, ಮಕ್ಕಳ ಆಟ ಎಲ್ಲವೂ ಸಂಕ್ಷಿಪ್ತವಾಗಿದ್ದರೂ ಸ್ಪಷ್ಟವಾಗಿ ಚಿತ್ರಣಗೊಂಡಿವೆ.

'ಬುಲಾಯಿ' ಪದ ಬೋಲನಾ ಎನ್ನುವ ಪದದಿಂದ ಬಂದಿದೆ ಎಂಬ ವಿವರದೊಂದಿಗೆ ಹಾಡಿನ ಉದಾಹರಣೆ ಸಹಿತ ದಾಖಲಾಗಿರುವ ಬೀದರದ 'ಬುಲಾಯಿ' ಪದಗಳು ನಾಗರಪಂಚಮಿಯಲ್ಲಿ ಹೆಣ್ಣುಮಕ್ಕಳು ಹಾಡಿ ಕುಣಿವ ಆ ವಿವರ ಓದಿಯೇ ಸವಿಯಬೇಕಾಗಿದೆ. ಆ ಊರಿನ ಹೆಂಗಳೆಯರ ಬಾಯಲ್ಲಿ ಇನ್ನೂ ಉಳಿದಿರುವ 'ರಾಜಾಕರ ಹಾಡು' ಜಾನಪದ ಗಾಯನ ಕುಣಿತದ ಪರಿಚಯ ಈ ಕೃತಿಯಲ್ಲಿದೆ.

ಹಳ್ಳಿಯಿಂದ ಮೂರು ಪರ್ಲಾಂಗ್ ಅಂತರದಲ್ಲಿರುವ ಶುಕ್ಲ ತೀರ್ಥ ಝುರಿ; ಝುರಿಯ ದಡದ ಮೇಲಿರುವ ಮಡಿವಾಳೇಶ್ವರ ಸಮಾಧಿ ಆ ಊರಿನ ಭವ್ಯ ಧಾರ್ಮಿಕ ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸಿದರೆ, ಇಂದು ಆ ಊರಿನಲ್ಲಿ ಕುಡಿಯಲು ನೀರಿಲ್ಲದೆ ಜನ ಪಡುವ ಬವಣೆ ಇಂದಿನ ಗ್ರಾಮದ ಹೀನಾಯ ಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಒಂದು ಬೋರ್‌ವೆಲ್ ಹಾಕಿಸಲು ಪ್ರಯತ್ನಿಸಲೂ ಆಗದ ಸ್ಥಿತಿ ತಲುಪಿರುವ ವ್ಯವಸ್ಥೆ ಕಂಡಾಗ ಕನ್ನಡದ ಗ್ರಾಮಗಳ ದುಃಸ್ಥಿತಿಗೆ ಅಯ್ಯೋ ಎನಿಸುತ್ತದೆ.

ಝುರಿಯಲ್ಲಿ ಈಗ ಹೊಲಸು ನೀರು ಹರಿಯುತ್ತಿದ್ದು, 'ಈಗ ನಾವದ ಗೇರಿಯಲ್ಲಿ ನೀರಿನ ಬರ ಹೆಚ್ಚಿರುವುದರಿಂದ, ಈ ನೀರು ಕುಡಿಯಲು ಸುರುಮಾಡಿದ್ದು ದುಃಖದ ಮಾತಾಗಿದೆ' ಎಂಬ ಲೇಖಕರ ನುಡಿ ನಮ್ಮ ನಾಡಿನ ಗ್ರಾಮಗಳ ದುಃಸ್ಥಿತಿಯ ವಾಸ್ತವ ಚಿತ್ರಣವಾಗಿದೆ.

ಈ ಕೃತಿ ಕನ್ನಡ ಜಾನಪದ ತಜ್ಞರು ಬರೆದುದಾಗಿರುವುದರಿಂದ ಹಲವಾರು ಬೀದರದ ಕನ್ನಡ ಪದಗಳನ್ನು, ನುಡಿಗಟ್ಟುಗಳನ್ನು ಇತರ ಜಿಲ್ಲೆಯವರಿಗೆ ಪರಿಚಯಿಸುವ ಕೆಲಸವನ್ನೂ ಮಾಡಿದೆ. ನನ್ನ ಅಭಿಪ್ರಾಯದ ಪ್ರಕಾರ **ಬೀದರದ ಕನ್ನಡಿಗರ ನಾಲಿಗೆಯಲ್ಲಿ ಉಳಿದಿರುವ ಭಾಷೆಯು ಸಂಸ್ಕೃತ ಹಾಗೂ ಆಂಗ್ಲಭಾಷೆಯ ಪ್ರಭಾವಕ್ಕೆ ಒಳಗಾಗದೆ, ಮರಾಠಿ ಹಾಗೂ ಉರ್ದು ಪ್ರಭಾವಕ್ಕೆ ಒಳಗಾಗಿಯೂ ಅದರಿಂದಲೂ ದೂರವಿದ್ದು ಇನ್ನೂ ಕನ್ನೆ ಭಾಷೆಯಾಗಿದೆ. ತನ್ನ ನುಡಿಯಲ್ಲಿ, ಕನ್ನಡಿಗರ ಗೌರವದ, ಸಜ್ಜನಿಕೆಯ, ಪ್ರೀತಿಯ ಭಾವವನ್ನು ತುಂಬಿಕೊಂಡಿದೆ.** ಆ ನಾವದಗೇರಿಯ ಈ ಜನಪದ ತ್ರಿಪದಿಯಲ್ಲಿ ಅಲ್ಲಿಯ ಭಾಷೆಯು, ಆ ಊರಿನ ಹೆಣ್ಣಿನ ಒಲ್ಮೆಯೂ ಬಿಂಬಿತವಾಗಿದೆ:

'ಹಾಲು ಮಾರಿದರೇನು? ಕಲ್ಲು ಹೊತ್ತರೇನು?
ನನಗ ನನಗಂಡ ಬಡವೇನ ತಂಗೆಮ್ಮ
ನಾವದಗೇರಿಯ ಹುಲಿ ನನರಾಯ'

ಮುಸ್ಲಾಂನರು, ಕುಣಗೇರಿ, ಕುಳ್ಳ-ಕಟ್ಟಿಗೆ, ಇಗೋಡ, ಮೆಟ್ಟನಾಲಿಗೆ, ಕಾಟದಾಟ, ಎನಮಾಥಿನಾಲಿ, ಮಾಡುಕಿ ಪದಗಳು ತನ್ನ ಮೂಲಭಾವದಲ್ಲಿಯೇ ಇದ್ದು ಜೀವಂತ ವ್ಯವಹಾರದಲ್ಲಿರುವುದು ಒಂದು ವಿಶೇಷ. ಈ ದೃಷ್ಟಿಯಿಂದ ಬೀದರ ಭಾಷೆಯ ಅಧ್ಯಯನ ಮಾಡಬೇಕಾದುದು ಮುಖ್ಯ. ಹೀಗೆ ಜನ, ಭಾಷೆ, ಬದುಕಿನ ಬಗ್ಗೆ ಚಿಂತನೆಗೆ ಗ್ರಾಸವಾಗುವ ಕೃತಿ 'ಓ ದೊರೆ ಬಾಧರಿಗೆ' ಆಗಿದೆ.

(೨೦೦೦)

ಗುಲ್ಬರ್ಗ ಕವಿ: ಡಿ.ಎನ್. ಅಕ್ಕಿ

ಹೈದರಾಬಾದ್ ಕರ್ನಾಟಕದ ಕವಿಗಳಲ್ಲಿ ತನ್ನದೇ ಛಾಪನ್ನು ಹೊದಿದವರು ಡಿ.ಎನ್. ಅಕ್ಕಿ. ಕಲಾಶಿಕ್ಷಕರಾದ ಅವರು ಕನ್ನಡ ಸಾಹಿತ್ಯದಲ್ಲಿ ಆಸಕ್ತರಾಗಿ ಸಂಶೋಧಕರು, ಕವಿಗಳು ಆಗಿದ್ದಾರೆ. ಅವರು ಕವಿಯಾಗಿ ಮುಂಬೆಳಕು (೧೯೮೭), ಮಾಯೆಮದ್ದಲೆ (೨೦೦೮) ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಇತರ ಕವಿಗಳೊಡನೆ ಚಿಗುರು ಚಿಂತನ (೧೯೮೬) ಕವನ ಸಂಕಲನದಲ್ಲಿ ಕವನಗಳನ್ನು ಪ್ರಕಟಿಸಿದ್ದಾರೆ. ಅಕ್ಕಿಯವರು ಹೈದರಾಬಾದ್ ಕರ್ನಾಟಕದ ಭಾಷೆ, ಬದುಕು, ಇಂದಿನ ಸ್ಥಿತಿಗತಿಗಳನ್ನು ತಮ್ಮ ಕವನಗಳಲ್ಲಿ ನೀಡಿದ್ದಾರೆ. ಅವರ 'ಮಾಲಗಂಬದ ಮ್ಯಾಲಿನ ದೀಪ' ಒಂದು ಉತ್ತಮ ಕವನವಾಗಿದೆ. ಗುಲ್ಬರ್ಗದ ಕನ್ನಡಿಗರ ನಾಲಗೆಯಲ್ಲಿ ದಿನನಿತ್ಯ ನಲಿದಾಡಿ ಜೀವಂತಿಕೆಯಿಂದಿರುವ ಪದಗಳು ಇಲ್ಲಿ ಕಾವ್ಯರೂಪ ಪಡೆದಿವೆ. ಮಾಲಗಂಬ, ಪಣತಿ, ಧಕ್ಕಿ ಮುಕ್ಕ್ಯಾಗ, ಕಟ್ನೀಹರ್ದು, ವಟ್ರಾಗ್ಯಾದ, ಗುಂಡು ಸಂಗ್ರಾಣಿಕಲ್ಲು ಇಲ್ಲಿ ತಮ್ಮ ಅಸಲುತನದಲ್ಲಿ-ನಕಲಿಯಾಗಿ ಬದುಕುತ್ತಿರುವ ಇಂದಿನ ಯುವಕರನ್ನು ಚೆನ್ನಾಗಿ ವಿಡಂಭಿಸುತ್ತಿವೆ.

> **'ನೆರೆದ ಗಡ್ಡದ ಮುದಕ ಮಡ್ಡಿ ಏರ್ಸಿ**
> **ಮ್ಯಾಲೇರಿ ಜಮ್ಮಂತ ದೀಪ ಮುಡಸಿ**
> **ಕತ್ತಲಿಗಿ ಕಣ್ಣ ತರಸ್ತಿದ್ದ.'**

ಎಂಬ ಮೌಲ್ಯಯುತ ಹಳಬರನ್ನು ಚಿತ್ರಿಸಿರುವ ರೀತಿ ಅನನ್ಯವಾಗಿದೆ. ಈ ಕವನ ಮುಕ್ತಛಂದದಲ್ಲಿ ವೈನಾಗಿರೂಪುಗೊಂಡಿದೆ. ಗುಲ್ಬರ್ಗದ ಕವಿಗಳು ಅನುಸರಿಸಬೇಕಾದ ಭಾಷೆ, ಭಾವ, ಬದುಕಿನ ಶೈಲಿ ಇದಾಗಿದೆ. ಕವಿಯ ಲೋಕಾನುಭವ ಅವನ ಮನಸ್ಸು, ಬುದ್ಧಿಯಲ್ಲಿ ಪಾಕಗೊಂಡು ಸಹಜ ನುಡಿಗಳೊಡನೆ ಕುಸುರಿಗೊಂಡಾಗ ಕಲಾನುಭವ ಆಗುತ್ತದೆ. ಅದು ಕಾವ್ಯ ರಚನಾಕಲೆಯಲ್ಲಿ ತೊಡಗಿಕೊಂಡ ಅಕ್ಕಿ ಅವರು ನಿಧಾನವಾಗಿ ಸಾಧಿಸಿರುವ ಪರಿಣತಿ. ಅವರ ಈ ಬಗೆಯ ಕವನಗಳು ಸಮಾಜದಲ್ಲಿ ಭಾವಪರಿಷ್ಕಾರವನ್ನುಂಟು ಮಾಡುತ್ತಿವೆ. ಕವಿಕಂಡ ಲೋಕಾನುಭವಕ್ಕೆ ಗುಲ್ಬರ್ಗದ ಮಣ್ಣಿನ ಸಹಜ ರಂಗಿದೆ. ಬಿರುಬಿಸಿಲುಂಡ ವ್ಯಕ್ತಿಯ ಸಾಮಾಜಿಕ ಚಿಂತನೆಯ ಕಾವು ಇಲ್ಲಿದೆ. ಇದೊಂದು ಹೈದರಾಬಾದ್ ಕರ್ನಾಟಕದ ಪ್ರಮುಖ ಕವನ.

'ಪಾಯದವರು' ಈ ನೆಲದಲ್ಲಿ ದುಡಿವ ಗೌಂಡಿಗಳು, ಕೂಲಿ ಕೆಲಸ ಮಾಡುವ ಸಾಧಾರಣ ಜನ ಮತ್ತು ಕುಶಲಕರ್ಮಿಗಳು. ಅವರಿಂದ ಎಲ್ಲವೂ ಸೃಷ್ಟಿಗೊಂಡಿರುವುದು. ಅಲ್ಲಿ ಜಾತಿ, ಮತ, ಪಂಥಗಳಿಲ್ಲ. ದುಡಿವ ಕಾಯಕದವರಿಗೆ ದುಡಿದು ತಿನ್ನುವವರೆಲ್ಲ ತಮ್ಮವರು. 'ಗೋಪುರ ಕಟ್ಟಿದವ ಗುಲಾಮರಸೂಲ', 'ಗುಡಿಗೆ ಅಡಿಪಾಯಹಾಕಿದವ ಫರ್ನಾಂಡಿಸ್', 'ನಮ್ಮೂರ ಮಸೀದಿಯ ಬುನಾದಿ ತೋಡಿದವ ತಳವಾರ ಭೀಮಶ್ಯಾ'. ಆದರೆ ಅದನ್ನು ಹಾಳುಗೆಡವವರು ಐಷಾರಾಮಿ ಬದುಕಿನ, ಕಾಯಕರಹಿತ ಪುಡಾರಿಗಳು. ಅದನ್ನು ಅಕ್ಕಿಯೊಳಗಿನ ಕವಿ ಹೊರಗೆಡವಿರುವ ರೀತಿ ಹೀಗಿದೆ:

'ಗರಿಗರಿಯ ಬಿಳಿಯ ದಿರಿಸಿನವರ
ಹಸಿರು ಕೇಸರಿ ಹೊದ್ದವರ
ಗದ್ದಲಕೆ ಈಗ ಗುಡಿ ಶಿಖರ
ಮಿನಾರಿಗಳ ಮೇಲೆ ನಿರುಮ್ಮಳವಾಗಿ
ಆಡುತ್ತಿದ್ದ ಹಾಡುತ್ತಿದ್ದ ಹಕ್ಕಿಗಳು
ಬಿಕ್ಕಹತ್ತಿವೆ ರಕುತ ಕಕ್ಕಹತ್ತಿವೆ.'

'ಮಾಯೆಮದ್ದಲೆ' ಕವನದ ಅನುಭಾವ ನುಡಿಗಳು ಕಲ್ಯಾಣ ನಾಡಿನ ಅಕ್ಕಿಯ ಒಳಮನದ ಪಾಕವಾಗಿದೆ. ಅದನ್ನು ಓದಿ ಅನುಭವಿಸಬೇಕಾಗಿದೆ.

'ಶಬ್ದದಾಚೆಯ ಶಬ್ದ
ಬಯಲಿನಾಚೆಯ ಬಯಲು
ಅಪ್ಪುಗೆಯ ತೆಕ್ಕೆಗೆ ದಕ್ಕಬಹುದೆ!
ಅಹಮಿಕೆಯನಳಿದಾಗ
ಕಾಮನೆಯು ಗೆಲಿದಾಗ
ನೆಲದಲ್ಲೂ ಕಂಡಾವು ಶಬ್ದ ಶಿವನೆಜ್ಜೆ.'

ಅದೇ ಹಾದಿಯಲ್ಲಿ ಸಾಗಿದ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮನನ್ನು ಕುರಿತ ಕವನ 'ಹರದಿ ಹಚ್ಚಿದ ಹಣತೆ' ತ್ರಿಪದಿಯಲ್ಲಿ ರಚಿತಗೊಂಡು ಅದರ ಲಕ್ಷಣಗಳು ಇಂದಿಗೂ ಪ್ರಸ್ತುತ ಎಂದು ಸಾರುತ್ತಿದೆ.

'ಎಚ್ಚರದಿ ಆಯಿರಿ ಅಕ್ಕಿಯನು
ಎನ್ನರಸ, ಅಗಳು ಅಗಳಿಗೂ
ಶಿವನು ಕೇಳುವನು ಲೆಕ್ಕ.'

ಕವಿಯಾದವನಿಗೆ ಹಿಂದಿನ ಕನ್ನಡ ಕವಿಗಳ ಕಾವ್ಯ ಪ್ರಯೋಗಗಳ ಅರಿವಿರಬೇಕು. ಆ ಬಗೆಯಲ್ಲಿ ಪ್ರಯೋಗಶೀಲನಾಗಿ ಅಲ್ಲಿನ ಛಂದ, ನಾದ, ಲಯದಲ್ಲಿ ಮಿಂದು ಅನಂತರ

ಮುಕ್ತಛಂದಕ್ಕೆ ಬಂದಾಗ ಅದು ಯೋಗ್ಯ ಕಾವ್ಯವಾಗುತ್ತದೆ. ಆ ಹಿಂದಿನ ಅನುಭವವಿಲ್ಲದೆ ಒಡೆದ ಪದ, ವಾಕ್ಯ–ಇಂದಿನ ನಾಲ್ಕು ಜನ ಬರೆದದ್ದು ಓದಿ ನಾನು ಒಂದು ಪೋಣಿಸುವೆ–ಎಂಬುದು ಸಂತೆ ಹೊತ್ತಿಗೆ ಸಾಲೆ ನೇಯ್ದಂತೆ. ಈ ಎಚ್ಚರ ಇಂದು ಕವನ ಬರೆಯುವವರಿಗೆ ಇರಬೇಕಾಗಿದೆ.

ದೇಶವನ್ನು ನಿಯಂತ್ರಿಸುವವರು ವಿದೇಶಿಯರಾದಾಗ ನಮ್ಮತನ ಕಳೆದುಕೊಂಡು, ಅವರ ಲಾಭಕ್ಕೆ ನಾವು ಜೀತದಾಳು ಆಗುತ್ತೇವೆ. ಈ ಎಚ್ಚರ ಸಾರುವ ಕವನ 'ಕೋಲತುದಿ ಎಲ್ಲಿದೆ?' ರೂಪಕಾತ್ಮಕವಾಗಿ ರಚನೆಗೊಂಡಿದೆ. ಈ ನಾಡಿನ ಬುದ್ಧಿಜೀವಿಗಳು ಎನಿಸಿಕೊಂಡ ಕೆಲವರು ಈ ನೆಲದ ಜನರ ಚಿಂತನೆಗೆ ಒಳಗಾಗದೆ ತಮ್ಮ ಲಾಭವನ್ನಷ್ಟೇ ನೋಡುವ ರೀತಿಯನ್ನು ಅಕ್ಕಿಯವರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದು ಇಂದಿನ ಜಾಗತಿಕರಣ ತರುತ್ತಿರುವ ದಾಸ್ಯವನ್ನು ಸಾರುತ್ತಿದೆ.

'ಗಗನದೆಡೆಗೆ ಮೊಗವ ಮಾಡಿ ಕೂಗಿ
ಕರೆಯುವ ದೇವ ಜಾಗದ ಚಿಟಕೆ
ಮಣ್ಣುದುರಿದರೆ ಅಬ್ಬರಿಸಿ
ಬೊಬ್ಬಿಡುತ ಹುಯಿಲಿಗೆ ಪ್ರ–
ಚೋದಿಸುವ ಕುರು–
ಚಲು ಗಡ್ಡದವರಿಗೆ ಅಟ್ಟ ಕಟ್ಟುವ
ಕೋಲತುದಿ ತಾನೆಲ್ಲಿದೆ...?'

ಅಕ್ಕಿಯವರು ಮೌಲ್ಯಗಳಿಗೆ ಹುಡುಕಾಡುವ ಭಾವದಲ್ಲಿ 'ಧರ್ಮಜಯ' ಕವನ ರಚಿಸಿದ್ದಾರೆ. ಅದು ಅಶ್ವತ್ಥಾಮನ ಅರಚಾಟದಲ್ಲಿ ಪ್ರಾರಂಭವಾಗಿ ಅವನ ಅಪಜಯವನ್ನು ಸಾರುತ್ತದೆ. ಒಳಿತನ್ನು ಆಶಿಸುವ ಕವಿ ಹೃದಯವು ಕುರುಕ್ಷೇತ್ರಕ್ಕೆ ಕಾರಣವಾದ ತಂದೆ ಮಕ್ಕಳನ್ನು ಗುಲ್ಬರ್ಗ ಜನರ ನುಡಿಯಲ್ಲಿ ಬಣ್ಣಿಸಿರುವುದು, ಆಲೋಚನೆಗೆ ಒಳಗಾಗುವಂತೆ ಮಾಡುತ್ತದೆ.

'ಅಂಧ ತಂದೆ ಹುಂಬಸುತರ
ಕೆಟ್ಟ ಹಠದ ನಡೆಯಲಿ
ಕೆಂಪು ಹುದಲು ಸೆಳೆಯಿತೆಲ್ಲಿ
ಮಕುಟು ಬಿರುದು ಬಾವಲಿ.'

ಪ್ರಜಾಪ್ರಭುತ್ವದ ಪ್ರಭುಗಳಾದ ರಾಜಕಾರಣಿಗಳು ಪ್ರಕೃತಿವಿಕೋಪವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವುದನ್ನು 'ಪರಿಹಾರ' ಕವನದಲ್ಲಿ ಹೀಗೆ ಬಣ್ಣಿಸಿದ್ದಾರೆ:

'ಕಂಕಾಲಗೂಡಿನ ಪಾವಟ್ಟಿಗೆಯ ಮೇಲೆ
ಝುಗಮುಗಿಸುವ ಆ ಗದ್ದುಗೆ

ಕಾದು ಕುಳಿತಿರೆ ರಣಹದ್ದು ಕಾಗೆ, ಸಾಲು
ಸಾಲಿನ ಸಾವಿಗೆ, ಕೊನೆಯೇ ಇಲ್ಲದ ನೋವಿಗೆ.'

ಇದು ಪರಿಹಾರದ ನೆಪಮಾಡಿ ಪ್ರಚಾರ ಗಿಟ್ಟಿಸಿ, ಲಾಭಕ್ಕೆ ಕಾದು ಕುಳಿತ ಭಂಡರು ನಡೆದುಕೊಳ್ಳುವ ರೀತಿಯನ್ನು ರೂಪಕಾಲಂಕಾರದಲ್ಲಿ ಪ್ರಕಟಗೊಳಿಸಿ–ವ್ಯವಸ್ಥೆಯ ಕ್ರೂರಚಿತ್ರಣ ನೀಡುತ್ತಿದೆ. ಇಡೀ ಕವನವೇ ರೂಪಕಾತ್ಮಕವಾಗಿದೆ.

ಷೇರು ಮಾರುಕಟ್ಟೆ ಬಿದ್ದು, ಹವಾಲ ಹಗರಣವಾದಾಗ ಬರೆದ ಕವನ 'ಜಾರುತ್ತಿವೆ ಕಾಲುಗಳು.' ದೇಶದ ಬಗೆಗಿನ ಕಾಳಜಿ ಹೊಂದಿದ ಅಕ್ಕಿಯವರು ಆಳುವವರ ಜಾರುವಿಕೆಯನ್ನು ಇಪ್ಪತ್ತೈದು ಸಾಲುಗಳಲ್ಲಿ ಅಲ್ಲಲ್ಲಿ ಅರ್ಧವಿರಾಮ ನೀಡಿ ಪೂರ್ಣವಿರಾಮ ಕೊಡದೆ ಜಾರುತ್ತ ಸಾಗುವ ಕ್ರಿಯೆಯನ್ನು ಬಣ್ಣಿಸಿದ್ದಾರೆ. ಇದು ಭಾವಕ್ಕೆ ತಕ್ಕ ಕಾವ್ಯ ರಚನಾ ಓಟವಾಗಿ, ಜಾರುವಿಕೆಯನ್ನು ನುಡಿಯಲ್ಲಿ ನೀಡಿರುವ ಜಾಣ್ಮೆ. ಒಂದೇ ಉಸಿರಿಗೆ ಓಡಿದರೂ ಜಾರುವಿಕೆಗೆ ಕಾರಣಗಳು ಒಂದು ಇನ್ನೊಂದರ ಕೈಹಿಡಿದು ಜಾರುವ ರೀತಿ–ರಾಜಕೀಯ ಒಳವರ್ತುಲವನ್ನು ಸಮರ್ಥವಾಗಿ ಅನಾವರಣಗೊಳಿಸುವ ಬಗೆಯಾಗಿದೆ.

'ಜಾರುತ್ತಿವೆ ಕಾಲುಗಳು
ಪಾಚಿಗಟ್ಟಿದ ನೆಲದ ಮೇಲಲ್ಲ
ಭಾರತದ ಭಾಗ್ಯವಿ-
ಧಾತರನ್ನು ಪ್ರಸವಿಸುವ ಅ-
ಶೋಕ ಹಾಲಿನಲಿ.'

ಅದಕ್ಕೆ ಪರಿಹಾರವನ್ನು ಕಾವ್ಯದ ಒಡಲಿನಲ್ಲಿಯೇ ನೀಡಿರುವ ಬಗೆಯು ಅಕ್ಕಿಯವರ ಕಾವ್ಯಕೌಶಲವಾಗಿದೆ. ಈ ಜಾರುವ ಜಾಯಮಾನದವರನ್ನು ಮತದಾರ ತನ್ನ ಉಕ್ಕಿನ ಕೈಯಿಂದ ಸರಿಯಾದವರಿಗೆ ಓಟ್ ಮಾಡುವ ಮೂಲಕ ಹಿಡಿತಕ್ಕೆ ತರಬೇಕು ಎಂದಿದ್ದಾರೆ.

'ಬಗ್ಗಡ ಕಾಲುಗಳಿಗೆ ಬೇಕಾಗಿವೆ
ಭದ್ರ ಬೇಡಿ ಹಾಕುವ ಉಕ್ಕಿನ ಕೈಗಳು.'

'ಕೈ ಕೈ ಎಲ್ಲಿಟ್ಟೆ, ಬಾಗಿಲು ಸಂದ್ಯಾಗಿಟ್ಟ್ಯಾ...' ಎಂಬ ಮಕ್ಕಳ ಜನಪದ ಹಾಡನ್ನು (ಇದೇ ಹಾಡು ಕರ್ನಾಟಕದ ವಿವಿಧ ಭಾಗದಲ್ಲಿ ವಿವಿಧ ಘಟನಾವಳಿಗಳನ್ನು ಹೊಂದಿ ರಂಜನೀಯವಾಗಿದೆ.) ರಾಜಕೀಯ ಸಂಚುಗಾರಿಕೆಯನ್ನು ಚಿತ್ರಿಸಲು ಅಕ್ಕಿಯವರು ಚೆನ್ನಾಗಿ ಬಳಸಿಕೊಂಡಿದ್ದಾರೆ. ಭಾರತೀಯ ಪ್ರಜಾರಾಜ್ಯ ವ್ಯವಸ್ಥೆಯಲ್ಲಿ ಎಲ್ಲರಿಗೆ ಎಲ್ಲವೂ ಗೊತ್ತಿದೆ. ಅದು ಖುಲ್ಲಂ ಖುಲ್ಲಾ ಆಗಿದೆ. ಅದನ್ನು ವ್ಯಂಗ್ಯಾತ್ಮಕವಾಗಿ ಕಾವ್ಯದಲ್ಲಿ ಬಣ್ಣಿಸಲು ಸ್ವಾರ್ಥರಹಿತವಾದ, ರಾಜಕೀಯ ಕೃಪೆಗೆ ಒಲ್ಲದ, ಜನಪರ ಕಾಳಜಿಯ ಕವಿಯಾಗಬೇಕು. ಅಂತಹವರಿಗೆ ಕೆಚ್ಚಿನ ಎದೆಗಾರಿಕೆ ಬರುತ್ತದೆ. ಅಂತಹ ಕವಿಯ ಕವನ ಇದು.

'ಕೈ ಕೈ ಎಲ್ಲಿಟ್ಟಿ
ಮಂದಿ ತೆಲಿಮ್ಯಾಲಿಟ್ಟ್ಯಾ
....
ಬಡ್ದೇನ್ಮಾಡ್ದಿ?
ದಿಲ್ಲಿ ಅವಗ ಕೊಟ್ಟ್ಯಾ
ಅವ್ವೆನ್ಕೊಟ್ಲು?
ಮುಂದ ಮಂದಿ ತಲಿಮ್ಯಾಗ
ಕೈ ಇಡ್ಲಾಕ ತಿಕೇಟ ಕೊಟ್ಲು!'

ಶ್ರೀಸಾಮಾನ್ಯನು ಈ ಸಮಾಜದಲ್ಲಿ ಕಳೆದುಹೋಗಿದ್ದಾನೆ. ಎಷ್ಟೇ ಮಾಹಿತಿ ಹಕ್ಕು ಕಾಯಿದೆ ಬಂದರೂ, ಆಳುವ ವ್ಯಕ್ತಿಗಳು, ಆಡಳಿತ ವ್ಯವಸ್ಥೆ ಬದಲಾಗದಿದ್ದರೆ ಪ್ರಜಾಸತ್ತೆ-ಪ್ರಜೆಯನ್ನು ಉಳಿಸುವ ವ್ಯವಸ್ಥೆ ಆಗುವುದಿಲ್ಲ. ಈ ತಿಳಿವನ್ನು ವ್ಯಂಗ್ಯಾತ್ಮಕವಾಗಿ ಅಕ್ಕಿ ಅವರು 'ಕಳೆದುಕೊಂಡಿದ್ದೇನೆ' ಎಂಬ ಕವನದಲ್ಲಿ ನೀಡಿದ್ದಾರೆ.

'ಆಂಗ್ರೇಜರು ಹೋದರು
ಅವರ ತಾತ ಮುತ್ತಾತನಂತಿರುವ
ದರ್ಪ ದೌಲತ್ತಿನ, ಠಾಕುರೀಕಿನ
ಗತ್ತು ಗಮ್ಮತ್ತಿನ ನಮ್ಮ
ಕಚೇರಿಯ ಸಾಹೇಬರಿಗೆ
ನಜರೆ ಮುಜರಾನ ಒಪ್ಪಿಸುವಾಗ
ಫಳಕ್ಕಿಗೆ ಕಳೆದುಹೋಗಿದ್ದೇನೆ ಗೆಳೆಯಾ...
ಕಳೆದುಹೋಗಿದ್ದೇನೆ.'

* * *

ಅಕ್ಕಿ ಅವರ ಪ್ರಾರಂಭದ ಕವನಗಳಲ್ಲಿ ಬಿಗಿಬಂಧವಿಲ್ಲ. ನವ್ಯಕಾವ್ಯದ ಅನುಕರಣೆಯಲ್ಲಿ ಉಚಿತವಾಗಿ ಪದಗಳನ್ನು ಬಳಸದಿರುವುದು, ವಾಕ್ಯಗಳನ್ನು ರಚಿಸದಿರುವುದು ಕಾಣುತ್ತದೆ. ಪದ ಮತ್ತು ವಾಕ್ಯಗಳನ್ನು ಅರ್ಥರಹಿತವಾಗಿ ಒಡೆದು ಬಂಧುರವಲ್ಲದ ಭಾವ, ಶಿಥಿಲವಾದ ವಿಚಾರಗಳಿವೆ. ಅವುಗಳನ್ನು ನಡೆಕಲಿಯುವಾಗ ಮುಗ್ಗರಿಸಿದ ತಪ್ಪು ಹೆಜ್ಜೆ ಎಂದು ಹೇಳಬಹುದು.

ಬಾ-
ನಾಡಿ
ಬಂಧನ...ದ
ಬದುಕಿಗೆ
ಬೇ-
ಸತ್ತಿರುವೆಯಾ? *(ಪಂಜರದ ಪಕ್ಷಿ)*

ವಂಚನೆಯ ಸಂಚಿ-
ಗೆ....
ಬಲಿಯಾಗಿ; ಆ
ಮರನಾದೆ...? *(ಅಭಿಮನ್ಯು)*

* * *

ಹೆಣ-
ಗಿ
ನಿನ್ನ ಜೀವಂತ *(ಉತ್ತರಕುಮಾರ)*

* * *

ಹಿಮಗಿರಿಯ ಚಲುವೆ
ಆದಾವ ಇಂದ್ರನ
ಕಾಮಕೇಳಿ-
ಗೆ
ಬಲಿಯಾಗಿ; ಶಿಲೆಯಾಗಿ
ನಿಂತೆ! *(ಕಾಶ್ಮೀರಿ ಶಿಲಾಬಾಲಿಕೆ ಮತ್ತು ನಾಗರಿಕಹೆಣ್ಣು)*

ಹೊಸತು ಕಟ್ಟುವೆವು ಎಂದು ನವ್ಯರೀತಿಯಲ್ಲಿ ತಳಹದಿ ಅಲುಗಾಡಿಸುವ ಬಗೆ ಈ ಮೇಲಿನ ಕವನ ಬರಹದಲ್ಲಿದೆ. ಅದು ತಪ್ಪು ಎಂದು ಎಚ್ಚರ ತಂದುಕೊಂಡ ನಂತರದ ಕವಿ ಅಕ್ಕಿ-ಈ ಲೇಖನದ ಪ್ರಾರಂಭದಲ್ಲಿ ವಿಮರ್ಶಿಸಿರುವ ಉತ್ತಮ ಕವನಗಳನ್ನು-ನೀಡಲು ಕಾರಣರಾಗಿದ್ದಾರೆ ಎಂಬುದು ಹೆಮ್ಮೆಯ ವಿಷಯವಾಗಿದೆ.

* * *

ನಮ್ಮ ಯುವ ವಿಜ್ಞಾನಿ, ಇಂಜನಿಯರ್, ಡಾಕ್ಟರ್‌ಗಳು ಹೆಚ್ಚು ಹಣ, ಸವಲತ್ತಿನ ಆಸೆಯಿಂದ ವಿದೇಶಕ್ಕೆ ನಿರ್ಯಾತವಾಗುತ್ತಿರುವುದು ತಿಳಿದ ವಿಚಾರ. ಅದು ಪ್ರತಿಭಾಪಲಾಯನ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಂತಹ ಪ್ರತಿಭಾವಂತರನ್ನು ಇಲ್ಲೆ ಉಳಿಯಿರಿ, ಇಲ್ಲಿನ ನೆಲಕ್ಕೆ, ಜನಕ್ಕೆ ನೀವು ಜೀವಜಲ ಎಂಬ ಭಾವದಲ್ಲಿ ಅಕ್ಕಿ ಅವರು 'ಆಷಾಡದ ಮೋಡಗಳೆ' ಕವನ ರಚಿಸಿದ್ದಾರೆ. ಕವಿ ಪ್ರತಿಭಾವಂತರನ್ನು ಪ್ರಾರ್ಥಿಸಿರುವ ರೀತಿ ಚೆನ್ನಾಗಿದೆ.

'ಕೊರೆಕೊರೆದು ಗೀರಿ ಗೀರಿ
ಹೀರುವ ಹನಿ ಹನಿಗೆ
ಹನಿಗೂಡಿಸಿ ದನಿಯಾಗಬಾರದೆ...?'

'ಜಾತಿನಾಯಿ' ಶೋಷಿತರನ್ನು ಎಚ್ಚರಿಸುವ ಗುಲ್ಬರ್ಗ ಪರಿಸರದ ಆ ನೆಲದ ಭಾಷೆಯ, ಭಾವದ, ಬದುಕಿನ ಚಿತ್ರವತ್ತಾದ ದೇಸಿಕವನ. ಮುನಗ್ಯಾದ್ರಿ, ಹಂಡ ಜಾತಿನಾಯಿ, 'ಕಾಲ್ಮರಿ ಮಾಡಿ ಉಳ್ದ ತೊಗಲಬಾರ್‌ನಿಂದ ಸೆಳಿರಿ' ಓದಿಯೇ ಎಚ್ಚರಗೊಳ್ಳಬೇಕು.

'ಮಹಾವೀರ', 'ಬೆಳಗೊಳದ ಬೆಳಕು' ಕವನಗಳು ಶಾಂತಿ, ಅಹಿಂಸೆ, ತ್ಯಾಗವನ್ನು ಸಾರುತ್ತಿವೆ. ಅವರು ಮಹಾವೀರನನ್ನು ಸರಳ ನುಡಿಯಲ್ಲಿ ಅನಾವರಣಗೊಳಿಸುವ ರೀತಿ ದಿಗಂಬರ ಶೈಲಿಯಲ್ಲಿದೆ.

'ಬರಿಮೈ, ಬರಿಗೈಯಿಂದ
ರಣಮುಖಿಯಾದ ವೀರ
ಈತ ಮಹಾವೀರ.'

ಗೊಮ್ಮಟನನ್ನು ಚೆನ್ನಾಗಿ ಅರ್ಥಮಾಡಿಕೊಂಡ ಅಕ್ಕಿ ಅವರು ಅವನನ್ನು ನುಡಿಯಲ್ಲಿ ಕಡೆದು ಇಟ್ಟಿರುವ ರೀತಿ ಅಪೂರ್ವವಾಗಿದೆ.

'ಎಲ್ಲ ಇದ್ದು ಒಲ್ಲದಾಯ್ತು
ಪಟ್ಟ ಮುಕುಟ ಸತ್ತಿಗೆ
ಮಾನವತೆಯ ಹೀರಿಬಿಡುವ
ಛೀಃ ಈ ಅರಸೊತ್ತಿಗೆ.'

ಅಕ್ಕಿಯವರು ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯದ ರೀತಿಯಲ್ಲಿ ದಾಂಪತ್ಯದ ಮಧುರಭಾವವನ್ನು ನೀಡಿದ್ದಾರೆ. 'ಅಡುಗೆಯ ಭಟ್ಟನಾಗಲೆ' ಕವನ ಮದುವೆಯಾದ ಹೊಸತರಲ್ಲಿ ಗಂಡ ಹೆಂಡತಿ ಇಬ್ಬರೆ ಇರುವ ಸಂಸಾರದ ಚಿತ್ರಣ. ಹೆಣ್ಣು ಮುಟ್ಟಾದ ದಿನದ ಭಾವಲಹರಿಯು ಕವನದ ನುಡಿ ಹಾಗೂ ನಡೆಯಲ್ಲಿ ಕೆ.ಎಸ್.ಎನ್ ಅವರನ್ನು ಅನುಸರಿಸಿದರೂ ಸ್ವತಂತ್ರ ಉಸಿರನ್ನು ಹೊಂದಿದೆ. ಕೆ.ಎಸ್.ನ ಪ್ರಭಾವ ಹೊಂದಿರುವ ಇನ್ನೆರಡು ಕವನಗಳು: 'ಎನ್ನ ಬಾಳ ಜ್ಯೋತಿ', 'ಬೇಡ ಮುನಿಸು'.

ಅಕ್ಕಿಯವರು ಪ್ರಕೃತಿಗೀತೆಗಳನ್ನು ರಚಿಸಿದ್ದಾರೆ. ಆದರೆ ಅವು ಹೊಸ ಭಾವವನ್ನು ಹೊಮ್ಮಿಸುವುದರಲ್ಲಿ ಸಫಲವಾಗಿಲ್ಲ. ಪಾಲಿಶ್ ಮಾಡಿದ ಅಕ್ಕಿಯ ರೀತಿ ಬೆಳ್ಳಗಿದೆ, ಸತ್ವ ಕಡಿಮೆ. ಜೋಳದಸತ್ವ, ಪೋಷಕದ್ರವ್ಯದ ಸಜ್ಜೆಯ ಖಡಕ್ ರೀತಿ ಅವರ ಸಾಮಾಜಿ ಚಿಂತನಾಕವನಗಳಾಗಿವೆ. ಅದು ಅವರಲ್ಲಿರುವ ಸಾಮಾಜಿಕ ಕಾಳಜಿಯನ್ನು, ಪ್ರಜಾಪ್ರಭುತ್ವದಲ್ಲಿ ಪ್ರಜೆ ನಗಣ್ಯನಾಗುತ್ತಿರುವುದನ್ನು, ಸ್ವಾತಂತ್ರ್ಯಾನಂತರ ಸಿರಿತನ ಬಡತನ ಹೆಚ್ಚಾಗುತ್ತಿರುವುದನ್ನು ಪ್ರತಿಬಿಂಬಿಸುತ್ತಿದೆ. ಅಕ್ಕಿಯವರು ಕಾವ್ಯದ ಭಾವಸಿರಿಯಲ್ಲಿದ್ದರೂ ಸತ್ಯಮಾರ್ಗಿಯಾಗಿ ಆರ್ಥಿಕವಾಗಿ ಬಡವರೇ ಆಗಿದ್ದಾರೆ. ಅದು ಕಾರಣ ಅವರ ಸಾಮಾಜಿಕ ಚಿಂತನೆಯಲ್ಲಿ ಕಸುವಿದೆ.

ಅಕ್ಕಿಯವರು ತಮ್ಮ ಆತ್ಮೀಯ ಗೆಳೆಯ ಶ್ರೀ ಯಂಕಯ್ಯ ಚಿ. ಕಸ್ತೂರಿ ಅವರನ್ನು ಮತ್ತು ಕಲಬುರ್ಗಿಯ ಘನವಿದ್ವಾಂಸ ಶ್ರೀ ವಿದ್ಯಾಚಂದ್ರಕಠಾರಿಯವರನ್ನು ನೆನೆದು ಎರಡು ಚರಮಗೀತೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ವಿದ್ಯಾಚರಣರ ನೆನಪಿನಲ್ಲಿ' ಕವನ ಹೆಚ್ಚು ಕಾವ್ಯಲಕ್ಷಣದಿಂದ ಕೂಡಿದೆ. 'ಶಾರದಾಸ್ತುತಿ', 'ಗುರುಮಹತಿ', 'ಗುರುವಂದನೆ' ಉತ್ತಮ ಪದ ಜೋಡಣೆಯಾಗಿದೆ.

ಡಿ.ಎನ್. ಅಕ್ಕಿ ಸತತ ಕಾವ್ಯಪ್ರಯೋಗಶೀಲರಾಗಿ ಉತ್ತಮ ಕವನ ರಚನಾಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಅವರಿಂದ ಇನ್ನೂ ಹೆಚ್ಚು ಹೈದರಾಬಾದ್ ಕನ್ನಡದ, ಆ ಗಟ್ಟಿ ಜನರ ದೇಸಿನುಡಿಯೊಂದಿಗೆ ತಾಜಾ ಚಿಂತನೆಯ ಅಸಲಿ ಕವನಗಳು ಹೊರಹೊಮ್ಮಲಿ. ಅವು ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಲಿ.

(೨೦೧೦)

ಸಿ.ಪಿ. ನಾಗರಾಜ: ಮೌನಸಾಧಕ ಡಾ. ಸಿ. ಬಂದೀಗೌಡ

ಈ ನಾಡಿನ ಜನರ ಬದುಕನ್ನು ಉತ್ತಮಗೊಳಿಸಿ ಅವರ ಬಾಳು ಹಸನಾಗಲು ಆದರ್ಶದ ಬೆನ್ನು ಹತ್ತಿ ದುಡಿದ ಮಹನೀಯರು ಡಾ. ಸಿ. ಬಂದೀಗೌಡರು. ತಂದೆ ಬಾಲ್ಯದಲ್ಲಿ ಕೈಹಿಡಿದು ಕರೆದುಕೊಂಡು ಹೋಗಿ ಗಾಂಧೀಜಿಯನ್ನು ಕಣ್ ತುಂಬಿಸಿದ್ದು; ಅವರ ಜೀವನದ ಮೈದುಂಬಿ, ಮನದುಂಬಿ ಗಾಂಧೀತತ್ವದ ಅನುಯಾಯಿಯಾಗಿಸಿತು. ಮಹಾರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ವಿದ್ಯಾರ್ಥಿಯಾಗಿದ್ದಾಗ ಕನ್ನಡ ಅಧ್ಯಾಪಕರಾಗಿದ್ದ ಕುವೆಂಪು ಅವರಿಂದ ನೇರ ನಡೆನುಡಿ, ದೇಶಪ್ರೇಮ, ಎಲ್ಲ ವ್ಯಕ್ತಿಗಳೂ ಸರ್ವಸಮಾನರೆಂಬ ತತ್ವ ರೂಢಿಸಿತು. ಬಂದೀಗೌಡರು ಗಾಂಧಿ ಮತ್ತು ಕುವೆಂಪು ಅವರ ತತ್ವ ಆದರ್ಶಗಳ ಸಾಕಾರ ಮೂರ್ತಿಯಾದರು.

ಸ್ವಾತಂತ್ರ್ಯದ ಫಲವಾಗಿ ದೊರೆತ ಅಧಿಕಾರ, ಅಂತಸ್ತುಗಳ ಲಾಭದಲ್ಲಿ ಬಂಡವಾಳಶಾಹಿಗಳಾಗಿ ಬೂಟಾಟಿಕೆ ಗಾಂಧೀವಾದಿಗಳಾಗಿ ಮೆರೆಯುವವರನ್ನು; ಸ್ವಂತಲಾಭಕ್ಕಾಗಿ ಗಾಂಧಿ ಟೋಪಿ ಧರಿಸಿ ಅಧಿಕಾರಿಗಳ ದಾಸರಂತೆ ವರ್ತಿಸುತ್ತಾ ಜನಪರ ಹೋರಾಟಕ್ಕೆ ತಿಲಾಂಜಲಿ ಅರ್ಪಿಸಿ ಗಾಂಧೀ ತತ್ವದ ಡೋಂಗಿ ಪಾತ್ರಗಳಾಗಿ ಶೋಭಿಸುವರನ್ನು ಕಂಡಾಗ–ಡಾ. ಸಿ. ಬಂದೀಗೌಡ ಶಾಂತ ನಂದಾದೀಪದಂತೆ ಗಾಂಧಿತತ್ವದ ಬೆಳಕಾಗಿರುವುದು ಈ ನಾಡಿನ ಪುಣ್ಯ. ಅಂತಹ ಮಹನೀಯರ ಮೌನ ಸಾಧನೆಯನ್ನು ಸಿ.ಪಿ. ನಾಗರಾಜ ಅವರು ಸರಳ ಸಶಕ್ತ ನುಡಿಗಳಲ್ಲಿ ಚಿತ್ರಿಸಿ ಒಂದು ಮನನೀಯ ಕೃತಿಯನ್ನು ನೀಡಿದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀನಿವಾಸ ಅಗ್ರಹಾರದಲ್ಲಿ ಚಿಕ್ಕಣ್ಣ ಮತ್ತು ದೇವಮ್ಮನವರ ಮಗನಾಗಿ ೧೨.೩.೧೯೧೭ರಂದು ಜನಿಸಿದ ಬಂದೀಗೌಡರು ಹಳ್ಳಿಯ ಮಾರಿಗುಡಿಯ ಹಡಸಾಲೆಯಲ್ಲಿ ನಡೆಯುತ್ತಿದ್ದ 'ಕೂಲಿಮಠ'ದಲ್ಲಿ ಅಕ್ಷರಾಭ್ಯಾಸ ಕಲಿತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಮತ್ತೆ ವಿದ್ಯಾಭ್ಯಾಸ ಮುಂದುವರಿಸಿ ವೈದ್ಯರಾದ ವಿವರಗಳು ಬರಿ ದಾಖಲೆಯಾಗದೆ ಬಂದೀಗೌಡರ ಜೀವನಪಥ ಸಾಗಿದ ಸಹಜ ನಡೆಯನ್ನು ನೀಡಿದೆ.

ಶ್ರೀರಂಗಪಟ್ಟಣದಲ್ಲಿ ತನ್ನ ತಂದೆಯವರ ತಾಯಿ ಕಲ್ಯಾಣಮ್ಮನವರ ಹೆಸರಿನಲ್ಲಿ 'ಕಲ್ಯಾಣ ಚಿಕಿತ್ಸಾಲಯ'ವನ್ನು ೧೯೪೪ರಲ್ಲಿ ತೆರೆದು-ಪ್ರತಿಯೊಬ್ಬ ರೋಗಿಗೆ ತಾವು ನೀಡುತ್ತಿದ್ದ ಔಷಧಕ್ಕೆ ತಗಲುತ್ತಿದ್ದ ಖರ್ಚಿನ ಮೇಲೆ ಒಂದಾಣೆಯನ್ನು ವೈದ್ಯರ ಶುಲ್ಕವಾಗಿ

ತೆಗೆದುಕೊಳ್ಳುತ್ತಿದ್ದು ತಮ್ಮ ವೃತ್ತಿಜೀವನದಲ್ಲಿ ರೋಗಿಗಳನ್ನು ಶೋಷಣೆ ಮಾಡದ ಜನಪ್ರಿಯ ಸದ್ವೈದ್ಯರಾಗಿದ್ದು-ಅವರ ಇಳಿವಯಸ್ಸಿನಲ್ಲಿ ಅವರ ಮಗ ಡಾ. ಬಿ. ಸಂಜಯಕುಮಾರ್ ಅದೇ ರೀತಿ ಜನರ ಸೇವೆಗೈಯುತ್ತಿರುವದು ಈ ನೆಲದ ಭಾಗ್ಯವಾಗಿದೆ.

ಬಂದೀಗೌಡರು ೧೯೪೬ರಲ್ಲಿ ರುಕ್ಮಿಣಿಯವರನ್ನು ವಿವಾಹವಾದಾಗ ಹಸೆಮಣೆಗೆ ಏರುವ ಹುಡುಗಿ ಖಾದಿ ಸೀರೆ ತೊಡಬೇಕೆಂದು ಪಟ್ಟು ಹಿಡಿದು ಅದರಂತೆ ಆಕೆಯ ತಂದೆ ಒಪ್ಪಿ ನಡೆದಾಗ ವಿವಾಹದ ಸಂಭ್ರಮವನ್ನು ಆನಂದಿಸಿದವರು. ಇಂದಿಗೂ ಖಾದಿಧಾರಿಯಾಗಿರುವ ಸ್ವದೇಶಾಭಿಮಾನಿಗಳು. ಮೇಲ್ಜಾತಿಯ ಶ್ರೀಮಂತ ಜಮೀನ್ದಾರ-ಜ್ವರದಿಂದ ನರಳುತ್ತಿರುವ ಜೀತದಾಳನ್ನು ಹೊರಗೆ ಕುಳ್ಳಿರಿಸಿ ತಾನು ಮಾತ್ರ ಒಳಗೆ ಬಂದು ಕುಳಿತಾಗ ಬಂದೀಗೌಡರು ಜೀತದಾಳಿಗೆ 'ನೀನು ಒಳಕ್ಕೆ ಬಂದು ಕುಳಿತುಕೊಂಡರೆ, ನಾನು ನಿನ್ನನ್ನು ನೋಡುವುದು' ಎಂದು ಒಳಕ್ಕೆ ಕರೆದಾಗ; ತನಗೆ ಸರಿಸಮವಾಗಿ ತನ್ನ ಪಕ್ಕದಲ್ಲಿಯೇ ಜೀತದಾಳು ಕುಳಿತುಕೊಳ್ಳುವುದನ್ನು ಸಹಿಸದ ಜಮೀನ್ದಾರ ಯಾವುದೋ ನೆಪ ಹೇಳಿ ಹೊರನಡೆದ ಘಟನೆ ಓದಿದಾಗ ಬಂದೀಗೌಡರ ವೈದ್ಯ ವೃತ್ತಿಯ ಶಿಸ್ತು, ಸಮಾನತಾ ತತ್ವ ಅರಿವಾಗುತ್ತದೆ.

ದೇಶದ ಸ್ವಾತಂತ್ರ್ಯದಷ್ಟೆ ಜನಸಮುದಾಯವನ್ನು ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗಳಿಂದ ಮುಕ್ತಗೊಳಿಸುವುದೇ ಗಾಂಧೀಜಿ ಆಶಯವಾಗಿತ್ತು ಎಂದು ಬಂದೀಗೌಡರು ತಿಳಿದಿದ್ದರು. ೧೯೫೨ರಲ್ಲಿ 'ಗೇಣಿದಾರನ ಶಾಸನ' ಜಾರಿಗೆ ಬಂದಾಗ ಅದನ್ನು ತಡೆಯಲು ಜಮೀನ್ದಾರರು ಪ್ರಯತ್ನಿಸಿದರು. ಆಗ ಬಂದೀಗೌಡರು ಗೇಣಿದಾರರನ್ನು ಒಗ್ಗೂಡಿಸಿ ಅಂದಿನ ಕಂದಾಯ ಸಚಿವರಾಗಿದ್ದ ಕಡಿದಾಳ್ ಮಂಜಪ್ಪ ಅವರನ್ನು ಶ್ರೀರಂಗಪಟ್ಟಣಕ್ಕೆ ಆಹ್ವಾನಿಸಿ ಗೇಣಿದಾರರ ಶಾಸನ ಜಾರಿಗೆ ಬರುವಂತೆ ಮಾಡಿದರು. ನೂರಾರು ವರ್ಷದಿಂದ ಅತಂತ್ರ ಬದುಕು ಸಾಗಿಸುತ್ತಿದ್ದ ಎಲ್ಲಾ ಜಾತಿ ಮತಗಳ ಸಹಸ್ರಾರು ಗೇಣಿದಾರರ ಹೆಸರಿಗೆ ಪಹಣಿ ಬರೆಯುವಂತೆ ಮಾಡಿ ಆರ್ಥಿಕ ನೆಲೆ ಒದಗಿಸಿದರು.

ಡಾ. ಬಂದೀಗೌಡರು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಶ್ರೀರಂಗಪಟ್ಟಣದ ಮೊದಲ ಪುರಸಭಾಧ್ಯಕ್ಷರಾಗಿ, ವಿಧಾನಪರಿಷತ್ತಿನ ಸದಸ್ಯರಾಗಿ, ಎ.ಐ.ಸಿ.ಸಿ. ಸದಸ್ಯರಾಗಿ ಕಾಂಗ್ರೆಸ್‌ನಲ್ಲಿದ್ದರು. ಅವರು ೧೯೭೫ರಲ್ಲಿ ಇಂದಿರಾಗಾಂಧಿಯವರು ತುರ್ತುಪರಿಸ್ಥಿತಿ ಘೋಷಣೆ ಮಾಡಿದಾಗ ನಿರಂಕುಶ ಆಡಳಿತ ವಿರೋಧಿಸಿ ಜಯಪ್ರಕಾಶ ನಾರಾಯಣರ ಆಂದೋಲನದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ ಪ್ರಜಾಪ್ರಭುತ್ವವಾದಿತ್ವವನ್ನು ಮೆರೆದರು.

ಗಾಂಧಿ ಮತ್ತು ಅಂಬೇಡ್ಕರ್‌ರನ್ನು ಕುರಿತು ಅವರ ಅಭಿಪ್ರಾಯ ಹೀಗಿದೆ: 'ಇಬ್ಬರಿಂದಮೂ ಹರಿಜನರಿಗೆ ಒಳ್ಳೆಯದಾಗಿದೆ... ಒಬ್ಬರು ಮೇಲ್ಗಡೆ ಮಹಡಿಯಲ್ಲಿ ನಿಂತ್ಕೊಂಡು ಕೆಳಕ್ಕೆ ಹಗ್ಗಬಿಟ್ಟು 'ಮೇಲಕ್ಕೆ ಹತ್ತಿ ಬನ್ನಿ' ಎಂದು ಕೈಬೀಸಿ ಕರೆದರು. ಇನ್ನೊಬ್ಬರು ನೆಲದ ಮೇಲೆ ಏಣಿ ಇಟ್ಟು 'ಮೇಲಕ್ಕೆ ಹತ್ತಿ ಹೋಗಿ' ಎಂದು ಉತ್ತೇಜಿಸಿದರು.

ಇಳಿವಯಸ್ಸಿನಲ್ಲಿ ಇಂದಿಗೂ ಜನಸಾಮಾನ್ಯರ ರೈತರ ಪರವಾದ ಕಾಳಜಿಯನ್ನು

ಹೊಂದಿರುವ ಬಂದೀಗೌಡರು ಮೈಸೂರು ಕಾರಿಡಾರ್ ಹೆದ್ದಾರಿ ಯೋಜನೆಯನ್ನು ಕುರಿತು- ಬೇಸಾಯವನ್ನೇ ನಂಬಿ ಬದುಕಿ ಈ ನಾಡಿನ ಸಾಮಾಜಿಕ, ಸಾಂಸ್ಕೃತಿಕ ಚೇತನವಾದ ರೈತರು ಭೂಮಿ ಕಳೆದುಕೊಂಡು ನಿರ್ಗತಿಕರಾಗುವರು. ಅಧಿಕಾರಸ್ಥ ರಾಜಕಾರಣಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ದೊಡ್ಡ ಕಂಟ್ರಾಕ್ಟರರು ಹೂಡಿರುವ ಶೋಷಣೆಯ ಜಾಲ ಇದು. ರಾಮನಗರ, ಮದ್ದೂರು, ಶ್ರೀರಂಗಪಟ್ಟಣದಲ್ಲಿ ಸೃಷ್ಟಿಯಾಗುವ 'ಟೌನ್‌ಷಿಪ್'ಗಳು ದೇಶ-ವಿದೇಶಗಳ ಹಣವಂತರ ಮೋಜಿನ ತಾಣಗಳಾಗುತ್ತವೆ. ಅವು ಜನಸಾಮಾನ್ಯರಿಗೆ ಈ ನೆಲನಂಬಿದ ದುಡಿವ ಜನಕ್ಕಲ್ಲ. ಈ ಯೋಜನೆ ಜನಪರವಾದುದಲ್ಲ ಎಂದು ಜನಜಾಗೃತಿಯ ಹೋರಾಟದಲ್ಲಿ ಭಾಗವಹಿಸುತ್ತಿದ್ದಾರೆ.

ಕುವೆಂಪು ಅವರ ಶಿಷ್ಯರಾಗಿ ಅವರು ಪಾಲಿಸುತ್ತ ಬಂದ ಕುವೆಂಪು ಚಿಂತನೆಯ ಮೂರು ಮುಖ್ಯ ಅಂಶಗಳು:

೧. ಶ್ರೀಸಾಮಾನ್ಯ ಪರವಾದ ಅವರ ದೃಷ್ಟಿಕೋನ.

೨. ಜಾತಿ, ಮತ, ಪ್ರಾಂತ್ಯ ಮತ್ತು ಭಾಷೆಗಳ ಎಲ್ಲೆಗಳನ್ನು ಮೀರಿದ ವಿಶ್ವಮಾನವ ಪ್ರಜ್ಞೆ.

೩. ಶಕ್ತಿರಾಜಕಾರಣದ ಮುಂದೆ ಕೈಯೊಡ್ಡದ ಅಥವಾ ತಲೆಭಾಗದ ಮನೋಸ್ಥೈರ್ಯ.

ಇಂತಹ ಉತ್ತಮ ವ್ಯಕ್ತಿಯ ಜೀವನಗಾಥೆಯನ್ನು ಸಿ.ಪಿ. ನಾಗರಾಜ ಅವರು ಜನಸಾಮಾನ್ಯರಿಗೆ ತಿಳಿಯುವ ಹಾಗೆ ಚೆನ್ನಾಗಿ ರಚಿಸಿದ್ದಾರೆ. ಈ ಕೃತಿಗೆ ಮುನ್ನುಡಿ ಬರೆಯುತ್ತ ಪ್ರೊ. ಎಚ್.ಎಲ್. ಕೇಶವಮೂರ್ತಿಯವರು–೧೯೪೮ರಲ್ಲಿ ಶ್ರೀರಂಗಪಟ್ಟಣದಲ್ಲಿ ಗಾಂಧಿ ಚಿತಾಭಸ್ಮವನ್ನು ವಿಸರ್ಜಿಸಿದ ದಿನ ಬಂದೀಗೌಡರಿಗೆ ಪವಿತ್ರ ದಿನ. ಹುತಾತ್ಮದಿನವನ್ನು ಅವರು ಸರ್ವೋದಯ ಸಮಾವೇಶವಾಗಿ ಪ್ರತಿವರ್ಷ ಆಚರಿಸುತ್ತಿರುವರು. ಮೇ ೫, ೧೭೯೯ರ ಟಿಪ್ಪುಸುಲ್ತಾನ್ ವೀರಮರಣ ಹೊಂದಿದ ದಿನ. ಆ ದಿನ ಟಿಪ್ಪು ಮರಣ ಹೊಂದಿದ ಸ್ಥಳಕ್ಕೆ ಹೋಗಿ ಗೌರವವನ್ನು ಅರ್ಪಿಸಿ, ಸರಳ ಸಮಾರಂಭವನ್ನು ನಡೆಸುತ್ತಿದ್ದಾರೆ–ಎಂದು ತಿಳಿಸಿದ್ದಾರೆ. 'ಜಾತಿ ಧರ್ಮಗಳಿಂದ ದೂರ ನಿಂತವರು ಬಂದೀಗೌಡರು... ಬದುಕಿರುವಾಗಲೇ ಅವರ ಚಿಂತನೆಗಳನ್ನು ಸೆರೆ ಹಿಡಿಯದಿದ್ದಲ್ಲಿ ಅಮೂಲ್ಯವಾದ ಬೌದ್ಧಿಕ ಆಸ್ತಿಯನ್ನು ಕಳೆದುಕೊಳ್ಳುವಂತಾದೀತು ಎಂಬ ಆತಂಕ ನನ್ನದು' ಎಂದಿದ್ದಾರೆ. ಆ ಬೌದ್ಧಿಕ ಆಸ್ತಿಯನ್ನು ಪರಿಚಯಿಸಿದ ಪ್ರಕಾಶಕರಿಗೆ ಮತ್ತು ಸಹೃದಯ ಲೇಖಕರಿಗೆ ಕನ್ನಡಿಗರು ಅಭಿನಂದಿಸಬೇಕಾಗಿದೆ. ಇಂತಹ ಪುಟ್ಟ ಕೃತಿಯನ್ನು ಕೊಂಡು ಓದಿ ಸಹೃದಯರು ಆದರ್ಶದ ಬೀಜವನ್ನು ತಮ್ಮ ಮಕ್ಕಳಲ್ಲಿ ಬಿತ್ತಬೇಕಾಗಿದೆ. ಆ ಕೆಲಸ ಸಾಧ್ಯವಾಗಲಿ.

(೨೦೦೬)

ಸುಗತ ಶ್ರೀನಿವಾಸರಾಜು:
'ಮಾತೃಭಾಷೆ ಮತ್ತು ಸ್ಥಳೀಯ ಸಂಸ್ಕೃತಿ'

ವ್ಯಕ್ತಿಯು ಸಂಸ್ಕೃತಿ ಸಂಪನ್ನನಾಗುವುದು ಅವನು ಬಾಳಿ ಬದುಕುವ ಸಮಾಜವನ್ನು ಅವಲಂಬಿಸಿದೆ. ಒಂದು ನಾಡಿನ ನೆಲ, ಜನ, ಭಾಷೆ ಆ ಜನರ identity ಆಗಿದೆ. ಆ ಜನರನ್ನು ನೆಲದಿಂದ ಒಕ್ಕಲೆಬ್ಬಿಸಿದಾಗ ಆ ಅತಂತ್ರತೆ ಅವರ ಸಂಸ್ಕೃತಿ, ಆಚಾರ, ವಿಚಾರಗಳ ನಾಶಕ್ಕೆ ಕಾರಣವಾಗುತ್ತದೆ. ಅವರ ಮಾತೃಭಾಷೆಯನ್ನು ಅವರ ನಾಡಿನಲ್ಲಿಯೇ ಅಪ್ರಯೋಜಕವಾಗಿಸಿದರೆ; ಅವರ ರಾಗ ಭಾವಗಳು, ಹೃದಯಾನುಭವದ ಕಲಾಸೆಲೆಗಳು ಬತ್ತಿಹೋಗಿ ಅವರ ಸಂಸ್ಕೃತಿ ಉಸಿರುಗಟ್ಟಿ ಸಾಯುತ್ತದೆ. ಸಮಾಜ ಮತ್ತು ವ್ಯಕ್ತಿಯ ಸಂಬಂಧದ ಮೂಲಧಾತುವಾದ ಮಾತೃಭಾಷೆಯನ್ನು ಕಡೆಗಣಿಸಿದಾಗ ಆ ಜನಾಂಗ ಇನ್ನಿಲ್ಲದಂತೆ ಕಮರಿಹೋಗುತ್ತದೆ. ಅದು ಸಂಚಿತವಾಗಿರಿಸಿಕೊಂಡ ಸಾಹಿತ್ಯ, ನೃತ್ಯ, ಸಂಗೀತ, ಕಲೆಗಳ ಬೇರು ಸಡಿಲಗೊಂಡು ಅದು ಜೀವರಹಿತ ಕೊರಡಾಗುತ್ತದೆ. ಅದು ಹೊಸತನ್ನು ದಕ್ಕಿಸಿಕೊಳ್ಳಲಾಗದೆ, ಹಳೆಯದನ್ನು ಮತ್ತೆ ಪಡೆಯಲಾಗದೆ ತನ್ನ ಅನನ್ಯತೆಯನ್ನು ಕಳೆದುಕೊಳ್ಳುತ್ತದೆ. ಕರ್ನಾಟಕ ಹಾಗೂ ಕನ್ನಡ ಭಾಷೆ ಈ ಬಗೆಯ ಆತಂಕಕ್ಕೆ ಒಳಗಾಗಿರುವ ಸ್ಥಿತಿಯನ್ನು ಸುಗತ ಶ್ರೀನಿವಾಸರಾಜು ಅವರು ಇಂಗ್ಲಿಷ್ ಭಾಷೆಯಲ್ಲಿ keeping faith with the mother tongue- The anxieties of a local culture ಎಂಬ ಕೃತಿಯಾಗಿ ನೀಡಿದ್ದಾರೆ.

ಕರ್ನಾಟಕ ಯುವ ಪ್ರತಿಭೆಗಳು ನಮ್ಮ ನಾಡು, ನಮ್ಮ ಭಾಷೆ ಎಂಬ ಅಭಿಮಾನ ಸಂಜೀವಿನಿಗೆ ಒಳಗಾಗುವಂತೆ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘದಿಂದ ಕಾವ್ಯರಚನಾ ಸ್ಪರ್ಧೆ ನಡೆಸುತ್ತಿದ್ದವರು ಪ್ರೊ. ಜಿ. ಶ್ರೀನಿವಾಸರಾಜು. ಅವರ ಕನ್ನಡ ಪರ ಚಿಂತನೆಯು ಮಗ ಸುಗತ ಅವರ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿದೆ. ಯುವ ಚಿಂತನಶೀಲ ಉತ್ಸಾಹಿ ಸುಗತ ಅವರು ಕನ್ನಡ ಮತ್ತು ಕರ್ನಾಟಕ ನೆಲೆಯಿಂದ ಆಲೋಚನೆ ಮಾಡುತ್ತ, ಅದು ಆತಂಕಕ್ಕೊಳಗಾಗುತ್ತಿರುವ ಭಾರತದ ಇತರ ಮಾತೃಭಾಷೆಗಳು ಹಾಗೂ ವಿಶ್ವದ ಎಲ್ಲ ಮಾತೃಭಾಷೆಗಳಿಗೂ ಸಂಬಂಧಿಸಿದ್ದು ಎಂದು ವಿಚಾರ ಮಂಡಿಸಿದ್ದಾರೆ. ಕನ್ನಡ ಭಾಷಾ ಚಿಂತನೆಯ ಈ ಕೃತಿಯು ವಿಶ್ವದ ಎಲ್ಲ ಮಾತೃಭಾಷಾ ಪ್ರೇಮಿಗಳು ತಮ್ಮ ಮಾತೃಭಾಷೆಯೂ

ಇದೇ ರೀತಿ ಆತಂಕಕ್ಕೆ ಒಳಗಾಗಿದೆ ಎಂದು ಕುತೂಹಲದಿಂದ ಓದಿ ಎಚ್ಚರಗೊಳ್ಳುವಂತೆ ಮಾಡುವುದಾಗಿದೆ.

ಕನ್ನಡಪರ ಕಾಳಜಿಯನ್ನು ಇಂಗ್ಲಿಷ್‌ನಲ್ಲಿ ಚೆನ್ನಾಗಿ ಬಿಂಬಿಸಿರುವ ಸುಗತ ಅವರ ಈ ಕೃತಿಯು ಆಗಸ್ಟ್ ೧೯೯೬ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮಾಸ್ತಿಯಲ್ಲಿರುವ ಸ್ಮಾರಕದ ಹೀನಸ್ಥಿತಿಯನ್ನು ಚಿತ್ರಿಸುವ ಲೇಖನದಿಂದ ಫೆಬ್ರವರಿ ೨೦೦೮ರಲ್ಲಿ Out Lookನಲ್ಲಿ ಬರೆದ ಅಂಕಣ ಲೇಖನ Chauvinists Versus Cosmopolitans-Who'll bridge the gap ಎಂಬ ಒಟ್ಟು ೪೩ ಬಿಡಿ ಲೇಖನಗಳನ್ನು ಹೊಂದಿದೆ. ಕನ್ನಡತನವನ್ನು ಮೈಗೂಡಿಸಿಕೊಂಡ ಒಬ್ಬ ಯುವ ಪತ್ರಿಕಾಕರ್ತ ಕನ್ನಡನಾಡು ಮತ್ತು ನುಡಿಯ ಬಗ್ಗೆ ಯಾವುದೇ ಪೂರ್ವಾಗ್ರಹಗಳಿಲ್ಲದೆ, ಮುಲಾಜುಗಳಿಗೆ ಒಳಗಾಗದೆ, ಆಮಿಷಗಳಿಗೆ ಮನ ಕೊಡದೆ ವೈಚಾರಿಕ ಎಚ್ಚರದಲ್ಲಿ ಬರೆದ ಲೇಖನಗಳ ಸಂಗ್ರಹ ಇದಾಗಿದೆ. ಈ ಕೃತಿಗೆ ಮುನ್ನುಡಿ ಬರೆದಿರುವ ಇಂಗ್ಲೆಂಡ್‌ನ ಅಂಕಣಕಾರ ಜೆರೆಮಿ ಸಿಬ್ರೂಕ್ ಅವರು 'The surest guarantor of retention of the mother tongue is-as every where else in the world-illiteracy and its concomitant poverty' ಎಂದು ಹೇಳಿರುವ ನುಡಿಯಲ್ಲಿ ಕಟುಸತ್ಯವಿದೆ.

ಜಾಗತೀಕರಣದಿಂದ ಇಂಗ್ಲಿಷ್ ತನ್ನ ಕಬಂಧಬಾಹುವನ್ನು ವಿಶ್ವದಾದ್ಯಂತ ಚಾಚಿ ತಬ್ಬಿಕೊಳ್ಳುತ್ತಿದೆ. ಇಂಗ್ಲಿಷ್ ಗೊತ್ತಿಲ್ಲದೆ ಉತ್ತಮ ಕೆಲಸ ಸಿಗುವುದು ಸಾಧ್ಯವಿಲ್ಲವಾಗಿದೆ. ವಿಶ್ವಗ್ರಾಮ ಕಲ್ಪನೆಯಲ್ಲಿ ಇಂಗ್ಲಿಷ್ ಭಾಷೆಯೇ ಸಾರ್ವಭೌಮವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಭಾಷೆಗೆ ಉಂಟಾಗಿರುವ ತವಕ ತಲ್ಲಣಗಳು ಮತ್ತು ಕನ್ನಡಿಗರ ಅಸ್ತಿತ್ವಕ್ಕೆ ಉಂಟಾಗಿರುವ ಧಕ್ಕೆಯನ್ನು ಸುಗತ ಅವರು Language and Literature, Land and water ಎಂಬ ವಿಭಾಗಗಳಲ್ಲಿ ಸೂಕ್ಷ್ಮವಾಗಿ ಚರ್ಚಿಸಿದ್ದಾರೆ.

ಈ ಕೃತಿಯನ್ನು ಕುರಿತ ಪರಿಚಯಾತ್ಮಕ ಲೇಖನದಲ್ಲಿ ಸುಗತ ಅವರು ಪಂಪ, ಕುವೆಂಪು ಮತ್ತು ಬೇಂದ್ರೆಯವರ ವಿಶ್ವಪ್ರಜ್ಞೆಯ ಸಾಹಿತ್ಯ ಸೃಷ್ಟಿಯಿಂದ ಕನ್ನಡ ಸಂಸ್ಕೃತಿಯನ್ನು ಅವಲೋಕಿಸಬೇಕಾದುದನ್ನು ಒತ್ತಿಹೇಳಿದ್ದಾರೆ. ಈ ವಿಶ್ವದಲ್ಲಿ ವ್ಯಕ್ತಿಯಾಗಿ ಅವನ ಅಸ್ಮಿತೆಗೆ ಮೂಲಾಧಾರವಾದ ನೆಲ, ನದಿ ಮತ್ತು ಭಾಷೆಯ ಬಾಂಧವ್ಯವನ್ನು ಹಲವು ಆಧಾರಗಳಿಂದ ಹಾಗೂ ಆ ವಿಷಯಪರಿಣತರ ನುಡಿಯಿಂದ ಸ್ಪಷ್ಟಪಡಿಸಿದ್ದಾರೆ. ವಿಶಾಲ ಮನೋಭಾವನೆಯ ವಿಶ್ವಪ್ರಜೆ ಎಂಬ ಭಾವದ cosmopolitan ಲಕ್ಷಣಗಳ ಕುರಿತು ಮಾತನಾಡುವ ಇನ್‌ಫೋಸಿಸ್ ಚೇರ್ಮನ್ ಎನ್.ಆರ್. ನಾರಾಯಣಮೂರ್ತಿ ಅವರಿಗೆ ಕನ್ನಡದ Identity ಹೇಗೆ ಲಾಭದಾಯಕವಲ್ಲ ಮತ್ತು ಕರ್ನಾಟಕ ರಾಜ್ಯ ಅವರಿಗೆ ಒಂದು ರಿಯಲ್ ಎಸ್ಟೇಟ್ ತುಂಡು ಎಂಬುದನ್ನು ತಿಳಿಸಿ, ವಿಶ್ವಉದ್ಯಮದ ಹುನ್ನಾರದಲ್ಲಿರುವವರ ತಾಂತ್ರಿಕ ಜಮೀನ್ದಾರಿಯ ಪಾಳೇಗಾರಿಕೆ (Techno-Feudal imagination) ಮನೋಭಾವದ ಲಕ್ಷಣವನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಕರ್ನಾಟಕದ, ಕನ್ನಡತನದ ಬೇರುಗಳನ್ನು ಬಿಟ್ಟು

ಲಾಭದ ರಂಬೆಯ ಹಣ್ಣುಗಳನ್ನು ಆಶಿಸುವ ಇಂದಿನ ದಿನಗಳಲ್ಲಿ ಕನ್ನಡದ ಬೇರುಗಳ ಬಗ್ಗೆ ಚಿಂತಿಸುವ ಈ ಆಂಗ್ಲ ಕೃತಿ–ಆತಂಕದಲ್ಲಿರುವ ಕನ್ನಡದ ಸಂದರ್ಭದಲ್ಲಿ ಪ್ರಮುಖಪಾತ್ರ ವಹಿಸುತ್ತದೆ. ಐ.ಟಿ.ಗಳ ಸಾಮ್ರಾಜ್ಯಷಾಹಿ ಧೋರಣೆಯ ಒಳಸುಳಿಗಳ ಬಗ್ಗೆ ಆಧಾರಸಹಿತವಾಗಿ ಸಮರ್ಥ ಲೇಖನವನ್ನು ಪ್ರಪ್ರಥಮವಾಗಿ ಬರೆದಿರುವ ಸುಗತ ಅವರು ಅಭಿನಂದನೀಯ ರಾಗಿದ್ದಾರೆ.

ಜನ ನೆಲವನ್ನು ಕಳೆದುಕೊಂಡಾಗಲೆ ಆ ನೆಲದ ಬದುಕಿನೊಂದಿಗೆ ಮೂಡಿಬಂದ ವೈಶಿಷ್ಟ್ಯಪೂರ್ಣ ಮಾತೃಭಾಷೆಯಿಂದ ಅವರು ದೂರ ಸರಿಯುತ್ತಾರೆ. ರೈತ ಹಾಗೂ ನೇಕಾರ, ಕುಂಬಾರ, ಬಡಗಿ ಮುಂತಾದ ಕುಶಲಕರ್ಮಿಗಳ ಬದುಕಿನೊಡನೆ ಒಂದಾಗಿ ರೂಪುಗೊಂಡ ಭಾಷೆ ತನ್ನ ಭಾವ ಸೃಷ್ಟಿಯ ರಚನಾ ಸೊಬಗನ್ನು ಬಳಸದೆ ಕಳೆದುಕೊಳ್ಳುತ್ತಾ ನಿಧಾನವಾಗಿ ಅವಸಾನ ಸ್ಥಿತಿಯತ್ತ ಸಾಗುತ್ತದೆ. ಅದು ಭಾಷೆ ಮತ್ತು ಸಂಸ್ಕೃತಿಯಿಂದ ಜನಾಂಗ ವಂಚಿತವಾಗುವ ದುರಂತ. ಡೇವಿಡ್ ಕ್ರಿಸ್ಟಲ್‌ನ Language death ಎಂಬ ಪುಸ್ತಕದ ಆಧಾರದಿಂದ ಸುಗತ ಅವರು ತಮ್ಮ ವಾದವನ್ನು ಗಟ್ಟಿಗೊಳಿಸಿಕೊಳ್ಳುತ್ತ ಕನ್ನಡ ನಾಡು ನುಡಿಯನ್ನು ಉಳಿಸಿಕೊಳ್ಳಬೇಕಾದ ಪ್ರಾಮುಖ್ಯತೆಯನ್ನು ತಮ್ಮ ಲೇಖನಗಳಲ್ಲಿ ಬಿಂಬಿಸಿದ್ದಾರೆ. **ಜೊತೆಗೆ ಸಹಸ್ರಾರು ವರ್ಷದಿಂದ ಈ ಮಣ್ಣಿನ ಕುಡಿಗಳಾದ ಕನ್ನಡಿಗರ ಬದುಕುವ ಹಕ್ಕನ್ನು ಕಿತ್ತುಕೊಳ್ಳುವ ಕ್ರೂರವ್ಯವಸ್ಥೆ–ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಚುಕ್ಕಾಣಿ ಹಿಡಿದವರ ಮತ್ತು ಕಾರ್ಪೋರೇಟ್ ಸಂಸ್ಥೆಗಳ ಒಳ ಬಾಂಧವ್ಯದಿಂದ ನಡೆಯುತ್ತಿರುವುದನ್ನು ಸುಗತ ಅವರು ಬಹಿರಂಗಗೊಳಿಸಿದ್ದಾರೆ.** ಹೀಗಾಗಿ ಕರ್ನಾಟಕದ ವಿವಿಧ ಸಮಸ್ಯೆಗಳ ಮೇಲೆ ಕ್ಷ ಕಿರಣ ಬೀರಿದ ಮೊದಲ ಇಂಗ್ಲಿಷ್ ಪುಸ್ತಕ ಇದು ಎಂದು ಹೇಳಬಹುದು.

* * *

'Kannada Pride and Prejudice' ಎಂಬ ಲೇಖನದಲ್ಲಿ ಕೆ.ವಿ. ನಾರಾಯಣ ಅವರ 'ಕನ್ನಡದ ಆತಂಕಗಳು', ಡಿ.ಎನ್. ಶಂಕರಭಟ್ಟರ 'ಭಾಷೆಯ ಬಗ್ಗೆ ನೀವೇನು ಬಲ್ಲಿರಿ', ಡಿ. ಆರ್. ನಾಗರಾಜ್ ಅವರ 'ಕನ್ನಡ ರಾಷ್ಟ್ರೀಯತೆಯ ಸ್ವರೂಪ' ಬರಹಗಳನ್ನು ಕುರಿತು ಈ ಲೇಖನಗಳ ಪ್ರಸ್ತುತತೆ ಮತ್ತು ಅರ್ಥಪೂರ್ಣ ಚಿಂತನೆಗಳ ಬಗ್ಗೆ ಮೆಚ್ಚಿ ವಿಶ್ಲೇಷಿಸಿದ್ದಾರೆ. ಭಾವನಾತ್ಮಕವಾಗಿ ಕನ್ನಡವನ್ನು ವೈಭವೀಕರಿಸಿ ತನ್ನ ಅಸಹಾಯಕತೆಯಲ್ಲಿ ಸಿಲುಕಿಕೊಂಡ ಚಿದಾನಂದಮೂರ್ತಿ ಅವರ ಮಿತಿಗಳನ್ನು ಪರಿಚಯಿಸಿದ್ದಾರೆ. ಕನ್ನಡವನ್ನು ಕುರಿತ ನೇರ ಸ್ಪಷ್ಟ ಆಲೋಚನೆಯಲ್ಲಿ ಕನ್ನಡಿಗರು ಅನುಸರಿಸಬೇಕಾದ ಮಾರ್ಗ ಬಿ.ಎಂ.ಶ್ರೀ, ಅ.ನ.ಕೃ., ಕುವೆಂಪು, ಕಾರಂತ, ಪಿ. ಲಂಕೇಶ್‌ರ ವೈಚಾರಿಕ ಹಿನ್ನೆಲೆಯ ಗಟ್ಟಿ ನೆಲಗಟ್ಟಿನದಾಗಬೇಕೆಂದು ಸುಗತ ಅವರು ಪ್ರತಿಪಾದಿಸಿದ್ದಾರೆ. ಕನ್ನಡವು ಕರ್ನಾಟಕದಲ್ಲಿ ತನ್ನ ಯಜಮಾನಿಕೆಯನ್ನು ಪ್ರತಿಷ್ಠಾಪಿಸುತ್ತಲೇ ತನ್ನ ಭಾಗವಾದ ತುಳು, ಕೊಡವ, ಕೊಂಕಣಿಯನ್ನು ಉಳಿಸುವ

ಮನೋಭಾವ ಬೆಳೆಸಿಕೊಳ್ಳಬೇಕು. ಆಗ ಕನ್ನಡ ತಾನು ತನ್ನ ಉಪಭಾಷೆಯೊಡನೆ ಉಳಿಯಲು ಸಾಧ್ಯ ಎಂಬ ಮೌಲಿಕ ಅಭಿಪ್ರಾಯ ನೀಡಿದ್ದಾರೆ.

ಬಾಂಗ್ಲಾ ಭಾಷೆಯನ್ನು ಉರ್ದುವಿನ ಜೊತೆಗೆ ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ಪೂರ್ವಪಾಕಿಸ್ತಾನದಲ್ಲಿ ನಡೆದ ಚಳುವಳಿ ಪ್ರತ್ಯೇಕ ಬಾಂಗ್ಲಾದೇಶ ಉಂಟಾಗಲು ಕಾರಣವಾಯಿತು. ಭಾಷೆಯದು ಸೂಕ್ಷ್ಮವಿಚಾರ. ಮಾತೃಭಾಷೆಯ ಉಳಿವು ತುಂಬಾ ಅಗತ್ಯ ಎಂದು ಅರಿತ UNESCO ಎಕುಷೆ ಫೆಬ್ರವರಿ (೨೧ ಫೆಬ್ರವರಿ)ಯನ್ನು ಮಾತೃಭಾಷಾ ದಿನಾಚರಣೆಯನ್ನಾಗಿ ಆಚರಿಸುತ್ತಿದೆ. ಆ ಹಿನ್ನೆಲೆಯಲ್ಲಿ ಕನ್ನಡದ ಸ್ಥಿತಿಯನ್ನು ಕುರಿತು ಸುಗತ ಅವರು ವಿಶ್ಲೇಷಣೆ ನಡೆಸಿದ್ದಾರೆ. ಅವರು ಎರಡು ರೀತಿಯ ವಿದ್ವಾಂಸರು ಕನ್ನಡದಲ್ಲಿದ್ದು ಒಂದು ಗುಂಪಿನ ವಿದ್ವಾಂಸರು ಬಾವಿಯ ಕಪ್ಪೆಯಂತೆ ಸಾವಿರ ವರ್ಷದ ಇತಿಹಾಸವನ್ನು ವೈಭವೀಕರಿಸುತ್ತ ಹಿಂದಿನದಕ್ಕೆ ಹೆಮ್ಮೆ ಪಡುತ್ತಿದ್ದರೆ, ಇನ್ನೊಂದು ಗುಂಪಿನ ಯು.ಆರ್. ಅನಂತಮೂರ್ತಿಯಂಥವರು ಕನ್ನಡದ ವಾಸ್ತವ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸದೆ ಪ್ರಾದೇಶಿಕಭಾಷಾ ಕೋಟಾದಡಿ ರಾಷ್ಟ್ರೀಯ ಅಂತಾರಾಷ್ಟ್ರೀಯ ಸಭೆ ಸಮಾರಂಭಗಳಲ್ಲಿ ಮಿಂಚುವವರು ಎಂದು ನೋವಿನಿಂದ ನುಡಿದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡದ ಉಳಿವಿನ ಬಗ್ಗೆ ಚಿಂತನೆ ನಡೆಸುತ್ತ ಶೈಕ್ಷಣಿಕವಾಗಿ ಭಾಷೆಯನ್ನು ಸದೃಢಗೊಳಿಸುವುದು ಮತ್ತು ತನ್ನಲ್ಲಿರುವ ಆಂತರಿಕ ಸಾಂಸ್ಕೃತಿಕ ಸತ್ವವನ್ನು ಕಾಪಾಡಿಕೊಳ್ಳುತ್ತ ಆಂಗ್ಲಭಾಷೆಗೆ ಸರಿಮಿಗಿಲಾಗಿ ಬಹುಭಾಷಾ ಸಾಮರಸ್ಯದತ್ತ ಸಾಗುವುದೇ ಸರಿಯಾದ ಮಾರ್ಗ ಎಂದಿದ್ದಾರೆ. ತಮಿಳಿನಂತೆ ಶಾಸ್ತ್ರೀಯ ಭಾಷಾಸ್ಥಾನಕ್ಕೆ ಪ್ರಯತ್ನಿಸುತ್ತಿರುವ ಕನ್ನಡ ಭಾಷೆಯು ಎಷ್ಟು ಪುರಾತನವಾದುದು ಎಂಬ ಚರ್ಚೆಯನ್ನು ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಆಧರಿಸಿ ಮಂಡಿಸಿದ್ದಾರೆ. ಸಾಂಸ್ಕೃತಿಕವಾಗಿ ತಮಿಳು ಮತ್ತು ಕನ್ನಡವನ್ನು ಬೆಸೆಯುವ ಎ.ಕೆ. ರಾಮಾನುಜನ್ ತರಹದವರು ಇಂದು ಬೇಕಾಗಿದೆ; ಒಡೆದು ಬೇರ್ಪಡಿಸುವ ರಾಜಕಾರಣಿಗಳಲ್ಲ ಎಂಬ ಅವರ ಅಭಿಪ್ರಾಯದಲ್ಲಿ ಅರ್ಥವಿದೆ.

ಸಾಹಿತ್ಯ ಮತ್ತು ಸಂಸ್ಕೃತಿಯ ದೀಪಧಾರಿಗಳಾದ ಚಿಕ್ಕ ಸಾಹಿತ್ಯ ಪತ್ರಿಕೆಗಳನ್ನು ಕುರಿತು Death of little Magazines ಲೇಖನದಲ್ಲಿ ಪ್ರಬುದ್ಧ ಕರ್ನಾಟಕ, ಪ್ರೇಮ, ಸುಬೋಧ ಚಂದ್ರಿಕೆ, ಅಂಕಣ, ಶೂದ್ರ, ಸಂಕ್ರಮಣಗಳ ಹೆಜ್ಜೆ ಗುರುತುಗಳನ್ನು ಪರಿಚಯಿಸಿದ್ದಾರೆ. 'Autobiographies: Memorybends' ಲೇಖನದಲ್ಲಿ ರೂಸೊ, ನಿಷೆ, ಸಾರ್ತೆಯವರ ಆತ್ಮಚರಿತ್ರೆಗಳ ಮೌಲಿಕ ಚರ್ಚೆಯ ಹಿನ್ನೆಲೆಯಲ್ಲಿ ಶಿವರಾಮಕಾರಂತ, ಕುವೆಂಪು, ಮಾಸ್ತಿ, ಬೇಂದ್ರೆ, ಪಿ. ಲಂಕೇಶ್, ಅರವಿಂದ ಮಾಲಗತ್ತಿ ಅವರ ಆತ್ಮಕತೆ ಕುರಿತು ಒಂದು ಉತ್ತಮ ನೋಟ ನೀಡಿದ್ದಾರೆ. 'Creating Cult Value-Row over the Manuscript of Kuvempu's epic poem'ನಲ್ಲಿ ತೇಜಸ್ವಿಯವರು ತೋರಿದ ಅತಿ ಉತ್ಸಾಹದ ನಡವಳಿಕೆ ಎಡವಿದ್ದನ್ನು ದಾಖಲಿಸಿದ್ದಾರೆ.

'The Tripod-Connecting land, water and language' ಎಂಬ ಲೇಖನದಲ್ಲಿ ಸುಗತ ಅವರು ನೆಲ, ನೀರು ಮತ್ತು ಭಾಷೆ ವ್ಯಕ್ತಿಗೆ ಅನನ್ಯತೆಯನ್ನು ನೀಡುವಂಥಹದು

ಆ ಅನನ್ಯತೆಯ ಭಾವವೇ ರಾಜಕೀಯ ವಲಯಕ್ಕೆ ಮತ್ತು ಕಾರ್ಪೊರೇಟ್ ಸಂಸ್ಥೆಗಳಿಗೆ ತಮ್ಮ ಆರ್ಥಿಕ ಪ್ರಗತಿಯ ತಡೆಗೋಡೆ ಎನಿಸಿದೆ ಎಂಬುದನ್ನು ಸೂಕ್ಷ್ಮವಾಗಿ, ಎಳೆಎಳೆಯಾಗಿ ಚರ್ಚಿಸಿದ್ದಾರೆ. ಅದು ಬೆಂಗಳೂರು ನಗರದ ಸುತ್ತಮುತ್ತಲ ಗ್ರಾಮಗಳ ಮುಗ್ಧ ಜನರ ಗೋಳಿಗೆ ಕನ್ನಡಿ ಹಿಡಿದ ಗಾಥೆಯಂತಿದೆ. SEZನಂತಹ ಕರಾಳ ಶಾಸನಗಳು ನೆಲದೊಂದಿಗೆ ಬದುಕಿ ಉಸಿರಾಡುತ್ತಿರುವ ಜನಗಳಲ್ಲಿ ಆತಂಕವನ್ನುಂಟುಮಾಡಿ; ತಮ್ಮ ಬದುಕಿಗೆ ಬೆಲೆ ಇಲ್ಲವೆ? ತಾವು ಈ ನಾಡಿನ ಜನರಲ್ಲವೆ? ಪ್ರಜಾಪ್ರಭುತ್ವದ ಸಮಾಜವಾದಿ ವ್ಯವಸ್ಥೆಯಲ್ಲಿ ಈ ಬಂಡವಾಳಶಾಹಿ ಏಕೆ ಹೀಗೆ ವ್ಯಾಪಿಸುತ್ತಿದೆ? ತಮ್ಮ ಅತಂತ್ರತೆಗೆ ಕಾರಣವೇನು? ತಾವು ಮಾಡಿರುವ ತಪ್ಪು ಏನು? ಎಂದು ಪ್ರಶ್ನಿಸಿಕೊಳ್ಳುತ್ತ ಪ್ರತಿಭಟನೆಗೆ ತೊಡಗುತ್ತಿದೆ ಎಂದು ದೇಶದ ಜ್ವಲಂತ ಸಮಸ್ಯೆಯನ್ನು ಚಿತ್ರಿಸಿದ್ದಾರೆ. ಈ ಬಗೆಯ ಸಾಮಾಜಿಕ, ರಾಜಕೀಯ, ಆರ್ಥಿಕ ನೆಲೆಗಳ ಸಂಶೋಧನಾ ಲೇಖನಗಳು ರಚನಾತ್ಮಕ ಹೋರಾಟಕ್ಕೆ ಇಂಬಾಗುತ್ತವೆ.

'Microsoft Monopoly-Some questions about I T Education' ಲೇಖನದಲ್ಲಿ ಸುಗತ ಅವರು Microsoft ಕಂಪನಿಯು ಕರ್ನಾಟಕ ಪ್ರೈಮರಿ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಕೊಡಲು ಕರ್ನಾಟಕ ಸರ್ಕಾರದೊಂದಿಗೆ ೨೦೦೪ರಲ್ಲಿ ಮಾಡಿಕೊಂಡ ಒಪ್ಪಂದ ಎಷ್ಟು ಅಪಾಯಕಾರಿಯಾಗಿತ್ತು ಎಂದು ಹೇಳಿರುವುದನ್ನು ಓದಿಯೇ ತಿಳಿಯಬೇಕು. ಅದರ ವಿರುದ್ಧ ದನಿ ಎತ್ತಿ ತೇಜಸ್ವಿ ಅವರು ಬರೆದ ಪತ್ರವನ್ನು ಓದಿ ಅಡಿಷನಲ್ ಚೀಫ್ ಸೆಕ್ರೆಟರಿ ಮತ್ತು ಡೆವಲಪ್‌ಮೆಂಟ್ ಕಮಿಷನರ್ ಆಗಿದ್ದ ಚಿರಂಜೀವಿಸಿಂಗ್ ಅವರು ಆ ಪತ್ರ ನನ್ನ ಕಣ್ಣು ತೆರೆಸಿತು ಎಂದು ಹೇಳಿದ್ದಾರೆ. ಇಂತಹ ಖಾಸಗಿ I T ಕಂಪನಿಗಳ ಲಾಭದಾಯಕ ಹುನ್ನಾರಗಳ ಹಲವಾರು ಲೇಖನಗಳು ಮೊಟ್ಟಮೊದಲಿಗೆ ಸುಗತ ಅವರ ಲೇಖನಿಯಿಂದ ಹೊರಬಿದ್ದು, ಈಗ ಪುಸ್ತಕರೂಪದಲ್ಲಿ ಪ್ರಕಟವಾಗಿರುವುದು ಕನ್ನಡದ ವಿಷಯದಲ್ಲಿ ಆಶಾದಾಯಕ ಸೂಚನೆಯನ್ನು ನೀಡುತ್ತದೆ.

ವಲಸೆ ಮತ್ತು ಇಂಗ್ಲಿಷ್ ಹತ್ತಿಕ್ಕಲು ಸಾಧ್ಯವಾಗದಷ್ಟು ವ್ಯಾಪಕವಾಗಿ ಇಂದು ದೇಶವನ್ನು ಆವರಿಸಿಕೊಂಡಿದೆ. ಅದರಲ್ಲೂ ಕರ್ನಾಟಕದಲ್ಲಿ ಅದೊಂದು ಪಿಡುಗಾಗಿ ಕನ್ನಡಿಗರಲ್ಲಿ ತಲ್ಲಣವನ್ನುಂಟುಮಾಡುತ್ತಿದೆ. ಅದು ಇರುವುದು ಮತ್ತು ಇನ್ನೂ ಹೆಚ್ಚಾಗುವುದು ಸತ್ಯ. ಅಂತಹ ವಾಸ್ತವ ಸ್ಥಿತಿಯಲ್ಲಿ ಕನ್ನಡದ ಬೇರುಗಳನ್ನು ಭದ್ರಗೊಳಿಸಿ ಕನ್ನಡಿಗರು ಉಳಿಯುವ ಬಗ್ಗೆ ತೀವ್ರವಾಗಿ ವಿಚಾರ ಮಾಡಿದ ಇಂಗ್ಲಿಷ್‌ನಲ್ಲಿ ಬಂದ ಮೊದಲ ಕೃತಿ ಇದಾಗಿದೆ.

ಐರಿಷ್ ಮಾತೃಭಾಷೆಯಾಗಿ ನೊಬೆಲ್ ಬಹುಮಾನ ಪಡೆದ ಪ್ರಖ್ಯಾತ ಲೇಖಕರು ಬರೆದಿರುವುದು ಇಂಗ್ಲಿಷ್‌ನಲ್ಲಿ. ಈ ಹಿನ್ನೆಲೆಯಲ್ಲಿ ಸುಗತ ಅವರ 'Searching for Irish Literature in Irish' ಎಂಬುದು ಐರಿಷ್ ಮಾತೃಭಾಷೆಯ ಸ್ಥಾನಮಾನದ ಬಗೆಗಿನ ಚರ್ಚೆಯಾಗಿ, ಒಂದು ಕುತೂಹಲದ ಚಿಂತನಶೀಲ ಬರಹವಾಗಿದೆ.

* * *

ಉತ್ತರ ಕನ್ನಡ ಜಿಲ್ಲೆಯ ಜೀವನದಿಯಾಗಿದ್ದ ಕಾಳಿ, ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್‌ಮಿಲ್ ಹಾಗೂ ಫೆರೊ ಆಲಾಯ್ಸ್ ಫ್ಯಾಕ್ಟರಿಗಳಿಂದ ಹೊರಹಾಕಲ್ಪಟ್ಟ ಹೈಡ್ರೋಜನ್ ಸಲ್ಫೈಡ್ ಹಾಗೂ ಇನ್ನಿತರ ವಿಷಾನಿಲಗಳಿಂದ ವಿಷದ ನದಿಯಾಗಿದೆ. ಕರಿಯಂಪಲ್ಲಿಯ ರೈತ ಅನಂತಕಬೀರಕರ–'ರೈತ ಬೆಳೆಗೆ ನೀರು ಹಾಕದಿದ್ದರೂ ಬೆಳೆ ಸಾಯುತ್ತದೆ. ಕಾಳಿ ನೀರು ಹಾಯಿಸಿದರೂ ಬೆಳೆ ಸಾಯುತ್ತದೆ; ಈ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು' ಎಂದು ಕೇಳಿದ ಪ್ರಶ್ನೆಯಲ್ಲಿ ೧೮೪ ಕಿ.ಮೀ. ಹರಿಯುವ ವಿಷಯುಕ್ತ ನದಿಯ ಆ ಭಾಗದ ಕನ್ನಡಿಗರ ಸಾವು ಬದುಕಿನ ಘೋರ ಸಂಕಟವಿದೆ. ಅದರ ವ್ಯಥೆಯನ್ನು 'Kali's Fate-A journey down a dying river'ನಲ್ಲಿ ಯಥಾವತ್ತಾಗಿ ಸುಗತ ನೀಡಿದ್ದಾರೆ. 'The lakes are no more stoic' 'How Green was My city?' ಎಂಬುದು ಬೆಂಗಳೂರಿನ ಪರಿಸರನಾಶ ಕುರಿತ ಲೇಖನಗಳಾಗಿವೆ.

'Unquiet Flows the Cauvery-The pulses of the tribunal award' ಲೇಖನದಲ್ಲಿ ಸುಗತ ಅವರು ಕಾವೇರಿ ನದಿಯ ವಿವಾದ ಕುರಿತ ನ್ಯಾಯಮಂಡಲಿ ತೀರ್ಪಿನ ಬಗ್ಗೆ ಹಲವು ಸತ್ಯಗಳನ್ನು ಹೊರಹಾಕಿದ್ದಾರೆ. ಡಿ.ಎಂ.ಕೆ. ಬೆಂಬಲದಿಂದ ೨೦೦೪ರಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದಾಗ ಕಾವೇರಿ ವ್ಯಾಜ್ಯ ಕುರಿತ ವಿಷಯ Common Minimum Programme ನಲ್ಲಿದ್ದು ಅದನ್ನು ಡಿ.ಎಂ.ಕೆ. ಕಾರ್ಯಗತಗೊಳಿಸಿಕೊಂಡಿದೆ. ಅಂತರ ರಾಜ್ಯ ಜಲವಿವಾದ ಕಾನೂನು ೧೯೫೬ರ ಪ್ರಕಾರ ನ್ಯಾಯಮಂಡಲಿಯ ತೀರ್ಪು ಸರ್ವೋಚ್ಚ ನ್ಯಾಯಾಲಯದ ಆಜ್ಞೆ ಅಥವಾ ಡಿಕ್ರಿಗೆ ಸಮ. ಕರ್ನಾಟಕದವರು **ಈಗ ಕಾವೇರಿ ನೀರನ್ನು ೧೧.೨೦ ಲಕ್ಷ ಎಕರೆ ನೀರಾವರಿಗೆ ಉಪಯೋಗಿಸುತ್ತಿದ್ದು, ನ್ಯಾಯಮಂಡಲಿ ೧೮.೮೫ ಲಕ್ಷ ಎಕರೆಗಳಷ್ಟು ಜಮೀನಿಗೆ ನೀರು ಬಳಸಲು ಅನುಮತಿಸಿದೆ.** ಈ ಎಲ್ಲಾ ಹಿನ್ನೆಲೆಯಲ್ಲಿ ವಿವಾದ ಮುಂದುವರಿಸುವುದಕ್ಕಿಂತ ನ್ಯಾಯಯುತ ಹಂಚಿಕೆಗೆ ಪ್ರಯತ್ನಿಸುವುದು ಉತ್ತಮ ಎಂಬ ಅಭಿಪ್ರಾಯಗಳಲ್ಲಿ ಅರ್ಥವಿದೆ ಎಂದಿದ್ದಾರೆ.

ಈ ರಾಷ್ಟ್ರದ ಸಂವಿಧಾನಬದ್ಧ ನ್ಯಾಯಮಂಡಲಿ ತೀರ್ಪು ದೇಶವನ್ನು ಆಳುವ ವ್ಯವಸ್ಥೆಯ ಚೌಕಟ್ಟಿನ ಒಳಗಿನದು. ಅದನ್ನು ಸಾಧಿಸಿಕೊಳ್ಳುವಲ್ಲಿ ವಿಫಲವಾದ ಕರ್ನಾಟಕದವರಾದ ನಾವು ಭಾವಪ್ರಚೋದನೆಗೆ ಒಳಗಾಗಿ ವರ್ತಿಸುವುದು ಎಷ್ಟು ಸರಿ ಎಂಬ ಸಕಾರಾತ್ಮಕ ವಿಚಾರಗಳಿಂದ ಈ ಲೇಖನ ಕೂಡಿದೆ.

* * *

ಕನ್ನಡ ಜನವನ್ನು ಕುರಿತ ವಿಭಾಗದಲ್ಲಿ ಕನ್ನಡ ಜನರ ಸಂಸ್ಕೃತಿಯ ಪ್ರತೀಕದಂತಿದ್ದ ರಾಜ್‌ಕುಮಾರ್, ಬಂಗಾಳಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಅಹೋಬಲ ಶಂಕರ, ಕನ್ನಡ ಪತ್ರಿಕಾರಂಗಕ್ಕೆ ಮಿಂಚಿನ ಸ್ಪರ್ಶ ನೀಡಿದ ಪಿ. ಲಂಕೇಶ್, ಎ.ಎನ್. ಮೂರ್ತಿರಾವ್, ಶಿವರಾಮ ಕಾರಂತ, ಮಾಸ್ತಿ, ದೇವನೂರು ಮಹಾದೇವ, ಸಿನಿಮಾರಂಗದ ಎಂ.ವಿ.

ಕೃಷ್ಣಸ್ವಾಮಿ ಮುಂತಾದವರ ಬಗ್ಗೆ ವ್ಯಕ್ತಿಚಿತ್ರಗಳಿವೆ. ಅದರಲ್ಲಿ ರಾಜ್ಯಸಭೆಗೆ ಸ್ಪರ್ಧಿಸಲು ಬಯಸಿದ ಯು.ಆರ್. ಅನಂತಮೂರ್ತಿಯವರನ್ನು ಕುರಿತು ಬರೆಯುವಾಗ Fighting Nobody's Cause ಎಂದು ಹೇಳಿರುವುದು ಅನಂತಮೂರ್ತಿಯವರ ವಿಭಿನ್ನ ಮುಖವನ್ನು ಪರಿಚಯಿಸುತ್ತದೆ.

ಇಂಗ್ಲಿಷ್ ಬಲ್ಲ ಅನುಕೂಲಸ್ಥ ಕನ್ನಡಿಗರು ಕನ್ನಡವನ್ನು ಕಡೆಗಣಿಸುವುದು ಎ.ಎನ್. ಮೂರ್ತಿರಾಯರ ಈ ನುಡಿಯಲ್ಲಿದೆ: 'Even at home we spoke more English than Kannada. I was all the while concerned with English. Kannada entered into the educated people, society very late.' ಇದು ಒಂದು ಶತಮಾನ ಜೀವಿಸಿದ ಮೂರ್ತಿರಾಯರ ಮಾತು. ಇಂದು ಹೊಸದಾಗಿ ವಿದ್ಯಾವಂತರೂ ಸಿರಿವಂತರೂ ಆದ ಐ.ಟಿ., ಬಿ.ಟಿ.ಯ ಜನ ಕನ್ನಡವನ್ನು ಕಡೆಗಣ್ಣಿನಿಂದಲೂ ನೋಡದ ಸ್ಥಿತಿ ಇದೆ. ಅವರಿಗೆ ಕನ್ನಡದ identity ಬೇಕಾಗಿಲ್ಲ.

ಕನ್ನಡದ identityಯಿಂದಲೇ ತಮ್ಮ ನಾಡಿನಲ್ಲಿ ಅನನ್ಯತೆ ಪಡೆಯುವವರು ಶ್ರೀಸಾಮಾನ್ಯ ಅಸಹಾಯಕ ರೈತ, ದೀನದಲಿತ ಕನ್ನಡಿಗರು. ಅವರು ವಾಸಿಸುವ ನೆಲವನ್ನು ಕಿತ್ತುಕೊಳ್ಳುವ ಹುನ್ನಾರ ಆಳುವವರದು. ಇಂತಹ ಸ್ಥಿತಿಯಲ್ಲಿ ಕನ್ನಡದ ಉಳಿವು, ಕನ್ನಡ ಸಂಸ್ಕೃತಿಯ ರಕ್ಷಣೆ ಹೇಗೆ ಎಂಬ ಪ್ರಶ್ನೆಗಳಿಗೆ ಶಾಂತಮನಸ್ಸಿನ ಚಿಂತನೆ ನಡೆಸಿದ ಕೃತಿ ಇದಾಗಿದೆ. ಈ ಕೃತಿಯನ್ನು ಬರೆದ ಸುಗತ ಶ್ರೀನಿವಾಸರಾಜು ಮತ್ತು ಪ್ರಕಟಿಸಿದ ನವಕರ್ನಾಟಕ ಪ್ರಕಾಶನಾಲಯದವರು ಅಭಿನಂದನೀಯರಾಗಿದ್ದಾರೆ.

(೨೦೦೮)

○

ಬೊಳುವಾರು ಮಹಮದ್ ಕುಂಞ: ಕಥೆಗಳು

ಬೊಳುವಾರು ಮಹಮದ್ ಕುಂಞ ಕನ್ನಡದ ಪ್ರಮುಖ ಕಥೆಗಾರರು. ಅವರು ಮುಸಲ್ಮಾನರ ನೋವಿನ ಬದುಕು ಬವಣೆಯನ್ನು ಅರಿತು ಮುಸ್ಲಿಂ ಸಂವೇದನೆಯೆಂಬ ಚರ್ಚೆಗೆ ನಾಂದಿ ಹಾಡಿದವರು. ಅವರು ಇಸ್ಲಾಂ ಧರ್ಮದ ಸೂಕ್ಷ್ಮಗಳನ್ನು ತಿಳಿದು, ಉತ್ತಮಿಕೆಗಾಗಿ ಅದರಲ್ಲಿ ಬಯಸಬಹುದಾದ ಪ್ರಗತಿ ಪಥವನ್ನು ಕಥೆಯಾಗಿ ಹೆಣೆದಿದ್ದಾರೆ. ಅವರ ಕಥೆಯಲ್ಲಿ ಘಟನೆಗಳು ಒಂದಾದ ಮೇಲೊಂದು ರೂಪುಗೊಳ್ಳುತ್ತ ಅವುಗಳ ಓಟ ತಿಳಿಯಿತು ಎನ್ನುವಷ್ಟರಲ್ಲಿ ಮತ್ತೊಂದು ಘಟನೆಯಿಂದ ಕಥೆ ಅಂತ್ಯದಲ್ಲಿ ಅನಿರೀಕ್ಷಿತ ತಿರುವನ್ನು ಪಡೆಯುವ ರೀತಿ ಅವರ ಕಥಾತಂತ್ರವಾಗಿದೆ. ಪಾತ್ರಗಳು ಘಟನೆಗಳೊಂದಿಗೆ ಸಾಗುತ್ತ ತಮ್ಮ ಆಗುವಿಕೆಗೆ ಕಾರಣವಾದ ಸನ್ನಿವೇಶ ವ್ಯವಸ್ಥೆ, ವೈಯಕ್ತಿಕ ಸೋಲು ಗೆಲುವನ್ನು ಅತಿಸಹಜವೆಂಬಂತೆ ಅಭಿವ್ಯಕ್ತಿಸಿ ಆಪ್ತವಾಗುತ್ತವೆ. ಅವರ ಕಥೆಗಳಲ್ಲಿ ದುಡಿಯುವ ಬಡವರು, ಬೀಡಿಕಟ್ಟಿ ಜೀವ ಸವೆಸುವ ಹೆಣ್ಣುಮಕ್ಕಳು ವಿಧವೆಯರು ಅಂದಂದಿನ ಹೊಟ್ಟೆಬಟ್ಟೆಗೆ ಚಿಂತಿಸುತ್ತಾ ಜೀವನ ಪ್ರೀತಿಗೆ ಆಶಿಸಿದರೆ; ಬಂಡವಾಳಶಾಹಿಗಳು ಧರ್ಮಲಂಪಟರಾಗಿ ತಮ್ಮ ಪ್ರತಿಷ್ಠೆಗೆ ಮತಧರ್ಮವನ್ನು ಅವಲಂಬಿಸಿ ಜೀವ ವಿರೋಧಿಗಳಾಗಿರುವುದು ಚಿತ್ರಿತವಾಗಿದೆ. ಬೊಳುವಾರು ತಮ್ಮ ಕಥೆಯ ಕೇಂದ್ರವಾಗಿ 'ಮುತ್ತುಪ್ಪಾಡಿ' ಎಂಬ ಒಂದು ಕಲ್ಪನೆಯ ಊರನ್ನು ಸೃಷ್ಟಿಸಿಕೊಂಡಿದ್ದಾರೆ. ಅದು ಆರ್.ಕೆ. ನಾರಾಯಣ್ ಅವರ 'ಮಾಲ್ಗುಡಿ'ಯಂತಹ ಕಲ್ಪನೆ.

ಬೊಳುವಾರು ಅವರು ರಚಿಸಿದ ಮಕ್ಕಳ ಕಥೆ 'ಪಾಪುಗಾಂಧಿ, ಗಾಂಧಿ ಬಾಪು ಆದ ಕತೆ'ಯು ಕನ್ನಡಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟಿದೆ. ಗಾಂಧಿಯನ್ನು ಒಂದು ಕಥೆಯಾಗಿ ಹೆಣೆದು ಯಶಸ್ವಿಯಾಗಿರುವ ಬೊಳುವಾರರು ಕನ್ನಡಿಗರಿಗೊಂದು ಹೆಮ್ಮೆ. ಈ ಕಥೆಯಲ್ಲಿ ಗಾಂಧಿಯ ಹುಟ್ಟು, ಸಾವಿನ, ಹೋರಾಟದ ಮಜಲುಗಳ ಇಸವಿ ತಾರೀಖುಗಳ ಗೊಂದಲವಿಲ್ಲ. ಅದು ಮುಗ್ಧ ಮೋಹನದಾಸ–ಮೋನು ಪಾಪು–ಪ್ರಕೃತಿಯ ಕುತೂಹಲದ ಕನಿಯಾದ ಮಳೆಗೆ ಕೈಒಡ್ಡಿ ಆನಂದಪಟ್ಟಂತೆ ಸಹಜ ಬದುಕಿನಾಟದಲ್ಲಿ ನಡೆ ನಡೆದು ಹೋಗುವ ಕಥೆಯಾಗಿದೆ. ಈ ನಾಡಿನ ಮಕ್ಕಳು ಭಾವನಾತ್ಮಕವಾಗಿ ಗಾಂಧಿತಾತನನ್ನು ಚೆನ್ನಾಗಿ ತಿಳಿದುಕೊಳ್ಳಲು ಸಹಾಯಕವಾಗಿದೆ. ಅವರ ತಾಯಿ ಪುತಲಿಬಾಯಿಯ ದೇವರ ಮೇಲಿನ ಭಕ್ತಿ, ಉಪವಾಸ, ವ್ರತ; ದಿವಾನರಾಗಿದ್ದ ತಂದೆ ಕರಮಚಂದರ ವ್ಯವಹಾರದಲ್ಲಿನ

ಶಿಸ್ತು, ಸತ್ಯ ಮತ್ತು ನ್ಯಾಯದಿಂದ ತಮ್ಮ ಕಾರ್ಯನಿರ್ವಹಿಸುತ್ತಿದ್ದ ರೀತಿ ಕಥೆಯಾಗಿ ಮಕ್ಕಳಿಗೆ ನೀರು ಕುಡಿದಂತೆ ಪ್ರಿಯವಾಗುತ್ತದೆ.

ಈ ಕತೆಯಲ್ಲಿ ಮೂರು ಭಾಗವಿದೆ. ಮೊದಲಭಾಗ 'ಪಾಪು' ಹೆಚ್ಚು ಒತ್ತಕ್ಷರಗಳಿರದ ಸರಳ ಕನ್ನಡ ನುಡಿಗಳಿಂದ ಕೂಡಿದ್ದು, ಪ್ರೈಮರಿಶಾಲಾ ಮಕ್ಕಳಿಗೆ ರಚಿತವಾದಂತಿದೆ. ಎರಡನೆ ಭಾಗ 'ಗಾಂಧಿ' ಒತ್ತಕ್ಷರ ದೀರ್ಘಾಕ್ಷರದ ಹೆಚ್ಚು ಬಳಕೆಯಿಂದ ಕೂಡಿ ಮಿಡ್ಲ್‌ಸ್ಕೂಲ್ ಮಕ್ಕಳಿಗೆ ರಚಿತವಾದಂತಿದೆ. ಮೂರನೆ ಭಾಗ 'ಬಾಪು', ಭಾಷೆ ವಿಚಾರಗಳಿಂದ ಗಟ್ಟಿಗೊಂಡು ಪ್ರೌಢ ಬರವಣಿಗೆಯತ್ತ ಸಾಗಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ರಚಿಸಿದಂತಿದೆ. 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಅಧಿಕೃತ ಮಕ್ಕಳ ಕವನ ಸಂಕಲನ ಸಂಪಾದಿಸಿ, ಮಕ್ಕಳ ಬೆಳವಣಿಗೆಯ ಹಂತಕ್ಕೆ ತಕ್ಕ ಕವನಗಳ ಆಯ್ಕೆ ಮಾಡಿ; ಅದಕ್ಕೆ ಉತ್ತಮ ಮುನ್ನುಡಿ ಬರೆದ ಬೋಳುವಾರರು ಮಕ್ಕಳ ಮನೋಲೋಕದ ಭಾಷಾ ಬೆಳವಣಿಗೆ ಅರಿತವರು. ಅವರ ಆ ಅನುಭವ ಇಲ್ಲಿ ಮೂರುಹಂತದ ಭಾಷಾ ಪ್ರಯೋಗವಾಗಿ ಕುತೂಹಲವನ್ನುಂಟುಮಾಡಿದೆ.

ಪ್ರೌಢಶಾಲೆಯಲ್ಲಿ ಗಾಂಧಿಯವರು ಷೇಖ್ ಮೆಹತಾಬ್‌ನ ಕಡೆಗೆ ಆಕರ್ಷಿತರಾಗಿ, ಸುಧಾರಕರ ಸಭೆಗೆ ಹೋಗಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯಲು ಮಾಂಸ ತಿಂದು ಗಟ್ಟಿಯಾಗಬೇಕೆಂಬ ವಿಚಾರಕ್ಕೆ ಒಳಗಾಗುತ್ತಾರೆ. ಮನೆಯವರ ವಿರೋಧವಿದ್ದರೂ ಒಮ್ಮೆ ಒಂದು ತೀರ್ಮಾನಕ್ಕೆ ಬಂದ ನಂತರ ಅದರಂತೆ ನಡೆದುಕೊಳ್ಳುತ್ತಾರೆ. ಅದು ಗಾಂಧಿಯವರ ಯಶಸ್ಸಿನ ಗುಣ ಎಂದು ಕಥೆಗಾರರು ಅಲ್ಲಲ್ಲಿ ಒತ್ತಿ ಹೇಳಿದ್ದಾರೆ. ಆ ಗುಣವನ್ನು ತಾನು ರೂಢಿಸಿಕೊಳ್ಳಬೇಕೆಂಬ ಭಾವ ಓದುವ ಮಕ್ಕಳಲ್ಲಿ ಉಂಟಾಗುವುದು ಈ ಕಥೆಯ ಲಕ್ಷಣ.

ಮುಸಲ್ಮಾನ್ ಧರ್ಮಿಯರೊಡನೆ ಬೆರೆತುಬಾಳುವ, ಅವರ ಧೈರ್ಯ ಸಾಹಸದ ಗುಣವನ್ನು ತನ್ನದಾಗಿಸಿಕೊಳ್ಳುವ ಗಾಂಧಿಯನ್ನು ಮೆಹತಾಬ್‌ನ ಸ್ನೇಹದಲ್ಲಿ ಕಾಣುತ್ತೇವೆ. ಗಾಂಧಿಗೆ ಮಾಂಸ ತಿನ್ನಲು ಪ್ರೇರೇಪಿಸಿದ ಮೆಹತಾಬ್‌ನನ್ನು ಇದುವರೆಗೆ ಗಾಂಧಿಕತೆ ಬರೆದ ಬಹುಪಾಲು ಭಾರತೀಯ ಲೇಖಕರು ದುಷ್ಟ ಪಾತ್ರವಾಗಿ ಬಿಂಬಿಸಿದ್ದಾರೆ. ಮಾಂಸ ತಿನ್ನುವುದು ದುಷ್ಟತನವಲ್ಲ. ಮೆಹತಾಬ್ ಉತ್ತಮ. ನಮ್ಮ ದೇಶದಲ್ಲಿ ವಿವಿಧ ಆಹಾರ ಪದ್ಧತಿ ಉಂಟು. ಜಾತ್ಯಾತೀತ ಭಾವ ಈ ನೆಲದ ಗುಣ. ಮುಸಲ್ಮಾನರ ಸ್ನೇಹ ಗಾಂಧಿಯನ್ನು ಗಟ್ಟಿಗೊಳಿಸಿದ ಎಂದು ಭಾರತಧರ್ಮ ಪ್ರತಿಪಾದಕರಾದ ಬೊಳುವಾರು ಆ ಪಾತ್ರವನ್ನು ಹೊಸ ಬಗೆಯಲ್ಲಿ ನಡೆಸಿ, ಗಾಂಧಿ ಕಡೆಗೆ ಹೊಸ ದೃಷ್ಟಿ ನೀಡಿದ್ದಾರೆ.

ಗಾಂಧಿಯ ಪುಕ್ಕಲುತನ, ಜನರೊಡನೆ ಬೆರಯಲಾಗದ ಭಾವ, ಧೈರ್ಯವಾಗಿ ಕೋರ್ಟ್‌ನಲ್ಲಿ ಮಾತನಾಡಲಾಗದ ಕೀಳರಿಮೆಗೆ; ಅವರ ಒಳಗಿದ್ದು, ಎಚ್ಚರಿಕೆಯ ದನಿಯಾಗಿ ಮೆಹತಾಬ್ ಇರುವುದು ಈ ಕಥೆಯ ವೈಶಿಷ್ಟ್ಯವಾಗಿದೆ. ಒಂದು ಬಗೆಯಲ್ಲಿ ಯೋಚಿಸಿದರೆ ಗಾಂಧಿಯ ಆಂತರಿಕ ಶಕ್ತಿಯ ಮೀಟುಗೋಲು ಮೆಹತಾಬ್ ಆಗಿದ್ದಾನೆ. ಹಾಗಾಗಿ ಪ್ರೌಢಶಾಲೆಯಲ್ಲಿ ಗಾಂಧಿ ರೂಢಿಸಿಕೊಂಡ ಕೋಮು ಸೌಹಾರ್ದ, ಜಾತ್ಯಾತೀತ ಮನೋಭಾವ

ಅನಂತರ ಅವರು ಈ ನಾಡಿನ ಮಾನಸಿಕ ಸ್ವಾಸ್ಥ್ಯಕ್ಕೆ ಬೇಕಾದ ಸದೃಢ ಚಿಂತನೆ, ಸ್ಪಷ್ಟ ನಿಲುವುಗಳನ್ನು ರೂಪಿಸಲು ಕಾರಣವಾಯಿತು ಎಂದು ಹೇಳಬಹುದು.

* * *

ಇಂಗ್ಲೆಂಡಿಗೆ ಹೋಗಿ 'ಬ್ಯಾರಿಸ್ಟರ್' ಕಾನೂನು ಪದವಿ ಪಡೆದಿದ್ದ ಮೋಹನದಾಸ ಗಾಂಧಿಯವರಿಗೆ ರಾಜಕೋಟೆಯಲ್ಲಿ, ಅನಂತರದ ಬೊಂಬಾಯಿಯ ಕೋರ್ಟ್‌ನಲ್ಲಿ ತಾನು ತನ್ನ ವೃತ್ತಿಯಲ್ಲಿ ಅಪ್ರಯೋಜಕ ಎಂಬ ಅರಿವುಂಟಾಗಿದ್ದನ್ನು ಬೊಳುವಾರರು ಇದ್ದದ್ದು ಇದ್ದಂತೆ ಕಥೆಯಾಗಿ ಬರೆದಿದ್ದಾರೆ. ಗಾಂಧಿ ದಲ್ಲಾಳಿಗಳ ಮೂಲಕ ಮೊಕದ್ದಮೆ ಪಡೆಯಲು ಇಚ್ಚಿಸದ, ಕೇವಲ ಅರ್ಜಿ ಬರೆದುಕೊಡುವುದರಲ್ಲಿ ಬಿಡಿಗಾಸು ಸಂಪಾದಿಸುತ್ತಿದ್ದ, ಮೊದಲ ಕೇಸಿನಲ್ಲಿ ಮೈನಡುಗಿ ನಿಂತಲ್ಲಿಯೇ ಕುಸಿದ ಪುಕ್ಕಲುತನ ಇಲ್ಲಿದೆ. ಹಾಗಾಗಿ ಇದು ಗಾಂಧಿಯ ಸತ್ಯಕಥೆಯಾಗಿದೆ.

ಪೋರ್ಬಂದರಿನ ಅಬ್ದುಲ್ಲಾ ಸೇಠರ ಪ್ರತಿಷ್ಠಿತ 'ಮೆಮನ್' ಸಂಸ್ಥೆಯ ಪರವಾಗಿ ಕೆಲಸ ಮಾಡುತ್ತಿರುವ ಹಿರಿಯ ವಕೀಲರಿಗೆ ಸಹಾಯ ಮಾಡಲು ಯುವ ವಕೀಲರಾಗಿದ್ದ ಗಾಂಧಿ ದಕ್ಷಿಣ ಆಫ್ರಿಕಾಗೆ ಹೋಗುತ್ತಾರೆ. ವಾದಿ ಅಬ್ದುಲ್ಲಾ ಸೇಠರಿಗೂ ಪ್ರತಿವಾದಿ ತಯ್ಯಬ್‌ಸೇಠರಿಗೂ ತಗಾದೆ ಇದ್ದದ್ದು ಹಣದ ಬಗ್ಗೆ. ಆದರೆ ಅದರಿಂದ ಲಾಭ ಆಗುತ್ತಿದ್ದದ್ದು ಎರಡೂ ಕಡೆಯ ವಕೀಲರಿಗೆ. ಆ ಪ್ರಕರಣವನ್ನು ಚೆನ್ನಾಗಿ ಅಧ್ಯಯನ ಮಾಡಿದ ಗಾಂಧಿ ನ್ಯಾಯಾಲಯದ ಹೊರಗೆ ಪಂಚಾಯತಿ ನಡೆಸಿ-ವ್ಯಾಜ್ಯ ಕೊನೆಗೊಳಿಸಿ ಯಶಸ್ವಿಯಾಗುತ್ತಾರೆ. ಎರಡೂ ಬಣ ಒಗ್ಗೂಡುತ್ತದೆ. ಇದರಿಂದ ವಕೀಲರಾಗಿ ವೈಯಕ್ತಿಕ ಲಾಭದ ಕಡೆ ಮುಖಮಾಡದೆ ವ್ಯಕ್ತಿ ವ್ಯಕ್ತಿಗಳ ಮನಸ್ಸನ್ನು ಒಗ್ಗೂಡಿಸಿ ಸಮಸ್ಯೆ ಬಗೆಹರಿಸುವ ಗಾಂಧಿಯ ನ್ಯಾಯಮಾರ್ಗ ಗೊತ್ತಾಗುತ್ತದೆ.

ಗಾಂಧಿಯವರು ಆ ಯಶಸ್ಸಿನಿಂದ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದ ಭಾರತೀಯರಲ್ಲಿ ಐಕ್ಯತೆ ಸಾಧಿಸಲು ಕಾರಣವಾಗಿ, ಜನರನ್ನು ಸಂಘಟಿಸಲು ಹಣ ಮತ್ತು ಜನ ಸಂಪಾದಿಸುತ್ತಾರೆ. ಭಾರತೀಯರ ಹಕ್ಕಿಗಾಗಿ ನೇಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪಿಸಿ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಹೀಗೆ ಅವರು ತಮ್ಮ ವ್ಯಕ್ತಿತ್ವ ರೂಪಿಸಿಕೊಂಡು ಸತ್ಯಮಾರ್ಗದಲ್ಲಿ ಹೋರಾಟ ನಡೆಸಿ ದಕ್ಷಿಣ ಆಫ್ರಿಕಾದ ಮುವತ್ತು ಸಾವಿರ ಜನರ ನಾಯಕರಾದ ಅಹಿಂಸಾವಾದಿಯ ಕಥೆ ಇಲ್ಲಿ ದಾಖಲಾಗಿರುವ ಬಗೆ ಅನನ್ಯವಾಗಿದೆ.

ದಕ್ಷಿಣಾ ಆಫ್ರಿಕಾದಲ್ಲಿ ಭಾರತೀಯರ ದೈನ್ಯಾವಸ್ಥೆಯನ್ನು ತನ್ನ ಆತ್ಮಾಭಿಮಾನದ ಎಚ್ಚರದಿಂದ ತುಳಿದವರು ಗಾಂಧಿ. ವರ್ಣ ಮತ್ತು ಜನಾಂಗೀಯ ದ್ವೇಷಕ್ಕೆ ಒಳಗಾದ ಭಾರತೀಯ ವೇದನೆಗೆ ಪ್ರತಿನಿಧಿಯಾಗಿ ನಿಂತ ಮೊದಲ ವ್ಯಕ್ತಿ ಗಾಂಧಿ. ಗಾಂಧಿ ಪುಕ್ಕಲು ಸ್ವಭಾವದ ವ್ಯಕ್ತಿಯಂತೆ ಕಂಡರೂ, ಅವರು ವಿಷಮ ವರ್ಗ ವರ್ಣ ಹೋರಾಟದಲ್ಲಿ ತೋರಿಸಿದ ಕೆಚ್ಚನ್ನು ಕಂಡಾಗ; ಅವರು ಯಾವುದೇ ಜಗಳಗಳಿಗೆ ಆಸ್ಪದ ಕೊಡದೆ ತಾತ್ವಿಕ

ಹೋರಾಟ ನಡೆಸಿದ್ದು ಕಂಡಾಗ-ಅವರ ಆಂತರಿಕ ಧೈರ್ಯದ ಆತ್ಮಸ್ಥೈರ್ಯ ಅಚ್ಚರಿಯನ್ನುಂಟು ಮಾಡುತ್ತದೆ.

* * *

ಗಾಂಧಿಯವರು ತಮ್ಮಲ್ಲಿರುವ 'ಅಹಂ' ಅನ್ನು ನಾಶ ಮಾಡಲಾಗದು ಎಂದು ತಿಳಿದಿದ್ದರು. ಆದರೆ ಬಾಲ್ಯದಿಂದ ಸತ್ಯಮಾರ್ಗವನ್ನು ಹಿಡಿದು, ಕಾನೂನಿನ ಸ್ಪಷ್ಟ ಅರಿವನ್ನು ಹೊಂದಿ; ಸತತವಾಗಿ ಮತ್ತು ಸಂಪೂರ್ಣವಾಗಿ ತಮ್ಮ 'ಅಹಂ'ನಿಂದ ಪ್ರತ್ಯೇಕಗೊಳ್ಳುವ ಸಾಧನೆಯಲ್ಲಿ ತೊಡಗಿದ್ದರು. ಗಾಂಧಿ ತನ್ನನ್ನು, ತನ್ನ ಕುಟುಂಬವನ್ನು ಸಮುದಾಯದ ಒಂದು ಭಾಗವಾಗಿಸಿಕೊಂಡರು. ಉತ್ತಮಿಕೆಗಾಗಿ ಬದಲಾಗುತ್ತ–ತನ್ನ ಸುತ್ತಮುತ್ತಲ ಜನರ ಮನಸ್ಸನ್ನು, ಆಳುವ ಬ್ರಿಟಿಷರ ಧೋರಣೆಯನ್ನು ಬದಲಾಯಿಸಿದರು. ಆ ಬದಲಾವಣೆಯ ಪ್ರಕ್ರಿಯೆಯ ಹೆಜ್ಜೆ ಗುರುತುಗಳು ಈ ಕೃತಿಯಲ್ಲಿವೆ.

ಹರಿಜನೋದ್ಧಾರ ಕಾರ್ಯಕ್ಕಾಗಿ ಮೈಸೂರು ರಾಜ್ಯಕ್ಕೆ ಬಂದಿದ್ದ ಗಾಂಧಿ ಪುತ್ತೂರು, ಬೊಳುವಾರು, ಬೊಟ್ಟು ತಾರುಗಳಿಗೆ ಭೇಟಿ ನೀಡಿದ ಕಥೆ ಇಲ್ಲಿದೆ. ಶಿವರಾಮಕಾರಂತ, ನಾರಾಯಣ ಕಿಲ್ಲೆ, ಸದಾಶಿವರಾಯ, ಕೊಡಗಿನ ಗೌರಮ್ಮ, ಚೀಂಕ್ರಮೇರ ಪರಿಜನ, ಸುಂದರರಾಯ ಈ ಕಥೆಯ ಭಾಗವಾಗಿದ್ದಾರೆ. ಪುತ್ತೂರಿನಲ್ಲಿ ಹದಿನೈದು ವರ್ಷದ ಮುಸಲ್ಮಾನ್ ಹುಡುಗ ನಾಲ್ಕಾಣೆಯನ್ನು ಗಾಂಧಿಗೆ ನೀಡುತ್ತಾನೆ. ಆ ಹುಡುಗನ ಅಪರೂಪ ವರ್ತನೆ ಕಂಡ ಗಾಂಧಿ ತಮ್ಮ ಧೋತರದ ಸೊಂಟದಲ್ಲಿ ಅದನ್ನು ಇರುಕಿಕೊಳ್ಳುತ್ತಾರೆ. ಆ ನಾಲ್ಕಾಣೆ ನೀಡಿದವರು ಬೊಳುವಾರು ಮಹಮದ್ ಕುಂಞ ಅವರ ತಂದೆ. ಬೊಳುವಾರರು ಆ ನಾಲ್ಕಾಣೆ ನೀಡಿದ ತನ್ನ ತಂದೆಯ ದೇಶ ಪ್ರೀತಿಯನ್ನು ಈ ಕಥೆಯಲ್ಲಿ ಬರೆದು ಗಾಂಧಿ ಬಾಂಧವ್ಯದ ಮುಂದಿನ ಕೊಂಡಿಯಾಗಿದ್ದಾರೆ.

ಗಾಂಧಿಯ ಸತ್ಯ ಅಹಿಂಸೆ ಉಪವಾಸಗಳು ಮತ್ತು ಕೋಮು ಸೌಹಾರ್ದತೆ ಈ ನಾಡಿನ ಅಂತಃಸ್ವಾಸ್ಥ್ಯಕ್ಕೆ ಬೇಕಾದ ಸದೃಢ ಚಿಂತನೆಯಾಗಿದೆ. ಕಾರಣವಿಲ್ಲದೆ ಹೊಮ್ಮುವ ಕ್ಷುಲ್ಲಕ ಆವೇಶ, ಆಕ್ರೋಶ, ದ್ವೇಷ ಅಸೂಯೆಗಳು ಅಮಾಯಕರ ಸಾವು ನೋವಿನಲ್ಲಿ ದುಃಖ ಅಶಾಂತಿಯನ್ನು ತರುತ್ತಿವೆ. ಅವು ಮಾನವೀಯ ಮೌಲ್ಯಗಳ ನಾಶಕ್ಕೆ ಕಾರಣವಾಗಿವೆ ಎಂದು ಭಾರತ ಚರಿತ್ರೆ ಹೇಳುತ್ತ ಸಾಗಿದೆ. ಪ್ರೀತಿ, ಸತ್ಯ, ಶಾಂತಿ, ಅಹಿಂಸೆಯ ಸಂಕೇತಗಾಂಧಿ. ಆ ಮಹಾತ್ಮರ ಕಥೆಯನ್ನು ಸುಲಲಿತ ಶೈಲಿಯಲ್ಲಿ, ಹೊಸ ಭಾವದಲ್ಲಿ ಹೆಣೆದು ಬೊಳುವಾರರು ಕನ್ನಡದ ಮಕ್ಕಳಿಗೆ ನೀಡಿದ್ದಾರೆ. ಗಾಂಧಿ ಮಹಾತ್ಮರನ್ನು ಕುರಿತು ಸಾವಿರಾರು ಕೃತಿಗಳು ವಿಶ್ವದಲ್ಲಿ ರಚನೆಯಾಗುತ್ತಿವೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಗೊಳ್ಳುವ ಕೃತಿಗಳೇ ಹೆಚ್ಚು. ಆದರೆ ತಾಜಾ ಹೊಸ ಚಿಂತನೆಯಿಂದ ಕೂಡಿದ ಈ ಮಕ್ಕಳ ಕೃತಿ ಇಂಗ್ಲೆಂಡ್‌ನಲ್ಲಿ ಇಂಗ್ಲಿಷ್‌ಗೆ ತರ್ಜುಮೆಯಾಗುತ್ತಿರುವುದು ಕನ್ನಡ ಸಾಹಿತ್ಯದ ಹೆಮ್ಮೆ. ಬೊಳುವಾರರ ಕನ್ನಡ ಕಥನಕ್ಕೆ ಸಂದ ಮಾನ್ಯತೆ.

ಈ ಜಗದ ಸೃಷ್ಟಿಯಲ್ಲಿ ಮೂಡಿಬಂದ ಗಂಡುಹೆಣ್ಣು ಜೀವ ವಿಕಾಸದ ಒಂದು ತಂತ್ರ. ಯೋಚಿಸಬಲ್ಲ ಮಾತು ಕಲಿತ ಮಾನವ ಅದರ ಸುತ್ತಲೇ ಪ್ರಚೋದಕವಾಗಿ ರಂಜಕಗೊಳ್ಳಲು ಕಲೆ ಸಾಹಿತ್ಯ ಸೃಷ್ಟಿಸ ತೊಡಗಿದ್ದಾನೆ. ಸಾಮಾಜಿಕ ಬಂಧನಕ್ಕೆ ಒಳಗಾದ ಮಾನವ ಅದನ್ನು ಹೆಣ್ಣಿನ ಅಂತರಂಗದ, ಮನುಜ ಕುಲದ ಬಾಳುವಿಕೆಯ ಪೂರಕವಾಗಿ ಚಿತ್ರಿಸಿದರೆ–ಮಾನವ ಪ್ರಾಣಿ ಮನುಜನಾಗುತ್ತಾನೆ. ಇದರತ್ತ ತಮ್ಮ ಮನಸ್ಸನ್ನು ಕೇಂದ್ರೀಕರಿಸಿ ಪ್ರೇಮದ ಹುಡುಕಾಟದಲ್ಲಿ ಬೆಳಕು ಕಾಣುತ್ತ, ಕಾಮದ ಅತಿಯನ್ನು ನಿಯಂತ್ರಿಸಿದ ಯಶಸ್ವಿ ಕತೆಗಾರ ಬೊಳುವಾರು. ಹೆಣ್ಣಿನ ಸೌಂದರ್ಯ, ನಾರಿಭಾವ ಇಲ್ಲಿ ತನ್ನ ತನ್ನದಲ್ಲಿ ವಿಕಾಸಗೊಂಡಿದೆ. ಅದರ ಕಂಪು ಆಹ್ಲಾದಮಯವಾಗಿ ಅದರ ಸವಿಯತ್ತ ಓದುಗನನ್ನು ಪ್ರೀತಿಯ ನಡಿಗೆಯಲ್ಲಿ ಕೊಂಡೊಯ್ಯುತ್ತಿದೆ. ಅದು ಮಾಸ್ತಿಯವರ ಹದ ಅರಿತ ಪ್ರೇಮ ಚಿತ್ರಣದ ಬಗೆಯಲ್ಲಿದೆ. ಕಾಮದ ಘಾಟಿಲ್ಲದ ಸಂಯಮದ ಬರವಣಿಗೆಗೆ ಬೊಳುವಾರರ ಕಥೆಗಳು ಮಾದರಿಯಾಗಿವೆ.

'ಆಖಿರತ್', 'ಇಮಾರತ್', 'ಇದ್ದತ್', 'ಜನ್ನತ್', 'ಇಬಾದತ್', ರುಖಿಯಾ' ಕಥೆಗಳು ಆರೋಗ್ಯಕಾರೀ ಜೀವನ ಚಿಂತನೆಗಳು. ಅವು ಇಸ್ಲಾಂ ಧರ್ಮದ ಸೂಕ್ಷ್ಮ ವಿಶ್ಲೇಷಣೆಯನ್ನು ಕುರಾನ್‌ನ ಕಟ್ಟಳೆಯಲ್ಲಿ ಚಿತ್ರಿಸುತ್ತ ಅದರ ನೆರಳು ಬೆಳಕನ್ನು ಕಾಣಿಸಿದ ರೀತಿ ಬೊಳುವಾರರ ಎಚ್ಚರದ, ಜಾಣ ಬರಹಕ್ಕೆ ಸಾಕ್ಷಿಯಾಗಿದೆ.

ಕುರಾನ್‌ನ ಕಟ್ಟು ಕಟ್ಟಳೆಯಲ್ಲಿ ಉಸಿರು ಬಿಗಿಹಿಡಿದ ವಿಧವೆಯ ಕಥೆಯನ್ನು ಬೊಳುವಾರರು ಕುರಾನನ್ನು ಅಲ್ಲಲ್ಲಿ ಉದ್ಧರಿಸುತ್ತಲೇ ಅವಳ ಅಸಹಾಯಕ ಬದುಕನ್ನು ಚಿತ್ರಿಸಿರುವ ಕಥೆ 'ಇದ್ದತ್'. ಚಿಮುಟಿದರೆ ರಕ್ತ ಚಿಮ್ಮುವ ಯೌವ್ವನದ ಮೆಹರುನ್ನೀಸಾಳನ್ನು ಅವಳ ಬಡ ವಿಧವೆ ಚಿಕ್ಕಮ್ಮ ನಿಕಾಹ್ ಮಾಡಿಕೊಟ್ಟದ್ದು ದಿನಸಿ ಅಂಗಡಿ ಸಾಹುಕಾರ ಪುತ್ತಬ್ಬನಿಗೆ. ಮೆಹರುನ್ನೀಸಾಳ ಸತ್ತುಹೋದ ಅಪ್ಪನಿಗಿಂತ ಹತ್ತು ವರ್ಷ ಹೆಚ್ಚಾಗಿರುವ ಪುತ್ತಬ್ಬ ಒಬ್ಬ ನಪುಂಸಕ.

ಕುರಾನ್‌ನ ಅಡಿಯಲ್ಲಿ ಹೆಣ್ಣನ್ನು ಶೋಷಿಸುವ ಸಿರಿವಂತ ವೃದ್ಧರ ಹೇಯ ವರ್ತನೆಯ ಬಗ್ಗೆ ಕುರಾನ್‌ನ ನುಡಿಯನ್ನೇ ಉದ್ಧರಿಸಿ ಮುಸಲ್ಮಾನರ ಆಲೋಚನೆಯಲ್ಲಿ ಬದಲಾವಣೆ ತರಲು ಆಶಿಸುವ ಬೊಳುವಾರರು ಕುರಾನನ್ನು ಚೆನ್ನಾಗಿ ತಿಳಿದವರಾಗಿದ್ದಾರೆ. ಅವರ ನೇರ ನಡೆಯ ಕೆಚ್ಚು ಅನುಕರಣೀಯ.

ವಯಸ್ಸಾದ ಪುತ್ತಬ್ಬ ಚಿಕ್ಕ ವಯಸ್ಸಿನ ಮೆಹರುನ್ನೀಸಾಳನ್ನು ನಿಕಾಹ್ ಮಾಡಿಕೊಂಡದ್ದನ್ನು ಕಥೆಗಾರರು ಚಿತ್ರಿಸುವಾಗ ಕುರಾನ್‌ನ ಈ ನುಡಿಯನ್ನು ಉದ್ಧರಿಸಿದ್ದಾರೆ.

'ನಿಮ್ಮ ಸ್ತ್ರೀಯರು ನಿಮಗೆ ಹೊಲವಾಗಿರುತ್ತಾರೆ. ಅಂತಲೇ ನಿಮ್ಮ ಹೊಲದಲ್ಲಿ ನಿಮಗಿಷ್ಟ ಬಂದಂತೆ ಪ್ರವೇಶಿಸಿರಿ.'

ಮುಸಲ್ಮಾನ್ ಬಡ ಹೆಣ್ಣುಮಕ್ಕಳ ನೋವು, ಅಸಹಾಯಕತೆ, ಧರ್ಮದ ಕಟ್ಟಳೆಯ ವಿಕಟ ನಗುವನ್ನು ಇದಕ್ಕಿಂತ ಚೆನ್ನಾಗಿ ಬಣ್ಣಿಸಲು ಸಾಧ್ಯವೆ?

ಹೆಣ್ಣನ್ನು ಅನುಭವಿಸಲಾಗದ ವೃದ್ಧ ಸಿರಿವಂತನಿಗೆ ಧರ್ಮದ ಆಸರೆಯ ನುಡಿ ಎಷ್ಟು ವ್ಯಂಗ್ಯ!

ಹತ್ತಾರು ಚಿಂತನೆಯ ಕಾವನ್ನು ಯಶಸ್ವಿಯಾಗಿ ಸಾಧಿಸಿ ಈ ರೀತಿ ಶಾಂತವಾಗಿ ಬರೆಯುವ ಲೇಖಕರು ಕನ್ನಡದಲ್ಲಿ ಅಪರೂಪ. ಬಡ ಮುಸಲ್ಮಾನರ ದಾರುಣ ಜೀವನದ ಮುಸ್ಲಿ ಸಂವೇದನೆಯನ್ನು ಕಟ್ಟಿಕೊಟ್ಟ ಬೊಳುವಾರರು ತುಂಬಾ ಎಚ್ಚರದ ಜವಾಬ್ದಾರಿ ಕಥೆಗಾರರಾಗಿದ್ದಾರೆ. ಕಥೆಗಾರರು ಮೆಹರುನ್ನೀಸಾಳ ಪಾತ್ರ ಪೋಷಣೆಗೆ ವಹಿಸಿರುವ ಶಾಂತ ಸಂವೇದನಾಶೀಲತೆ ಈ ನಾಡಿನ ಸಂಸ್ಕೃತಿಯ ಪೋಷಕ ನಡೆಯಾಗಿದೆ.

ಪುತ್ತಬ್ಬನ ಮೊದಲ ಹೆಂಡತಿ ಸಕೀನ ಮದುವೆಯಾದ ಮೂರು ತಿಂಗಳಲ್ಲಿ ಮಧ್ಯರಾತ್ರಿ ಬಾವಿಗೆ ಹಾರಿ ಸತ್ತಿದ್ದಳು. ಆ ಮನೆಯಲ್ಲಿ ಪುತ್ತಬ್ಬನ ಅಕ್ಕ ಕೈಜಮ್ಮ, ಆಳು ಸಮದ್ ಮಾತ್ರವಿದ್ದುದು. ಸಮದ್‌ನ ಆಕರ್ಷಣೆಗೆ ಮೆಹರುನ್ನೀಸಾ ಒಳಗಾದರೂ ಕುರಾನ್ ಮಂತ್ರ ಪಠನದ ಅರಿವಿನಲ್ಲಿ ತನ್ನ ಹಿಡಿತ ಕಾಯ್ದುಕೊಂಡಿದ್ದಳು. ಮದುವೆಯಾದ ಎರಡೇ ವರ್ಷದಲ್ಲಿ ಪುತ್ತಬ್ಬ ಸಾಹುಕಾರ ತೀರಿಹೋದಾಗ ವಿಧವೆಯಾದ ಮೆಹರುನ್ನೀಸಾ 'ಇದ್ದತ್'ನ ಕಾಲಾವಧಿಗೆ ಒಳಗಾಗಿ ತನ್ನ ಒಳಕೋಣೆ ಸೇರುತ್ತಾಳೆ.

ಇದ್ದತ್ ಅವಧಿಯ ನಾಲ್ಕು ತಿಂಗಳು ಹತ್ತು ದಿನಗಳ ಏಕತಾನತೆ ಕೊನೆಗೊಳ್ಳುವ ದಿನದಂದು ಅವಳ ಮನಸ್ಸು ಸಮದ್‌ನತ್ತ ವಾಲಿರುತ್ತದೆ. ಅವಳ ಮನಸ್ಸು ಹುಚ್ಚು ಕುದುರೆಯಂತಾಗಿರುತ್ತದೆ. ಆ ಅವಧಿಯ ನಂತರ ವಿವಾಹ ಮಾಡಿಕೊಂಡರೆ ಯಾವುದೂ ಆಕ್ಷೇಪವಿಲ್ಲ ಎಂಬ ಕುರಾನ್ ನುಡಿಯಿಂದ ಅವಳ ಆಸೆ ಚಿಗುರಿರುತ್ತದೆ. ಆದರೆ ಆಳು ಸಮದ್ ಯಜಮಾನಿ ಮೆಹರುನ್ನೀಸಾಳಿಗೆ ಸೊಸೆಯನ್ನು ತರಲು ಕಾಸರಗೋಡಿಗೆ ಅದೇ ದಿನ ಹೋಗಿರುತ್ತಾನೆ. ಆಗ ಅವಳ ಮನಕ್ಕೆ ಸಿಡಿಲು ಬಡಿದ ಸ್ಥಿತಿಯನ್ನು ಕುರಾನ್ ನುಡಿಯಲ್ಲಿಯೇ ಅವಳ ಪ್ರಾರ್ಥನೆಯಾಗಿ ಬೊಳುವಾರರು ಅಂತ್ಯಗೊಳಿಸಿದ್ದಾರೆ.

ಓಹ್ ಅಲ್ಲಾಹುವೇ!
ಕಾದು ಕೆಂಪು ಚರ್ಮದಂತಾದ ಆಗಸವನ್ನು
ಪಾಪಿಯಾದ ನನ್ನ ಮೇಲೆ ಬೀಳಿಸು
ಕುದಿಯುವ ನೀರಿನಲ್ಲಿ ನನ್ನನ್ನು ನಡೆಸು
ಸುಡುವ ಕರಗಿದ ತಾಮ್ರವನ್ನು ನನ್ನ ಮೇಲೆ
ಸುರಿದು ಬಿಡು.....

ಸಂಪ್ರದಾಯಬದ್ಧ ಮುಸಲ್ಮಾನ್ ಹೆಣ್ಣು ಬದುಕನ್ನು ತನ್ನದಾಗಿಸಿಕೊಳ್ಳಲಾಗದ ಸ್ಥಿತಿಯನ್ನು ಇದಕ್ಕಿಂತ ಚೆನ್ನಾಗಿ ಚಿತ್ರಿಸಲು ಸಾಧ್ಯವೆ?

* * *

ಹರೆಯದಲ್ಲಿ ವಿಧವೆಯಾದ ರುಖಿಯಾ ಸ್ವತಂತ್ರವಾಗಿ ಬದುಕಿ ಹೊಟ್ಟೆ ಹೊರೆಯುತ್ತಿರುತ್ತಾಳೆ. ಅವಳನ್ನು ಸಹಿಸದ ಸಾಮಾಜಿಕರು ಕ್ರೂರ ನುಡಿಯಿಂದ ಅವಳನ್ನು ಘಾಸಿ ಪಡಿಸುತ್ತಿರುತ್ತಾರೆ.

ಅವಳು ಹಾದಿಗೆಟ್ಟವಳಲ್ಲ. ಯೌವ್ವನ ಸಹಜ ಉಲ್ಲಾಸದವಳು. ಅವಳು ತೋಟದ ಮನೆಯ ಯಜಮಾನ ಫಕೀರ್ ಸಾಹೇಬರ ಮನೆಯ ಆಳು. ಮಿಂಚಿನ ಬಳ್ಳಿಯಾಗಿದ್ದ ರುಖಿಯಾ ಬೆಳದಿಂಗಳ ಗೊಂಚಲಿನಂತಿದ್ದ ಫಕೀರ್ ಸಾಹೇಬರ ಮಗಳು ಹಲೀಮಳನ್ನು ಹಿರಿಯ ಪ್ರಾಥಮಿಕ ಶಾಲೆಗೆ ಮಾಸ್ತರ್‌ಾಗಿ ಬಂದಿದ್ದ ಖಾದರ್‌ಗೆ ಪರಿಚಯಿಸುತ್ತಾಳೆ.

ರುಖಿಯಾಳು ಮಾಸ್ತರ್ ಖಾದರ್‌ನನ್ನು ಫಕೀರ್‌ಸಾಹೇಬರ ಮಗಳು ಹಲೀಮಳಿಗೆ ನಿಕಾಹ್ ಮಾಡಿಸಲು, ಆ ಹುಡುಗಿಯ ತಾಯಿ ಪಾತುಮ್ಮಳಿಗೆ ಹೇಳಿ ಆ ಪ್ರಯತ್ನದಲ್ಲಿರುತ್ತಾಳೆ. ಆದರೆ ಘಟನೆಗಳು ಬೇರೊಂದು ಮುಖವಾಗಿ ನಡೆದು ಹೋಗುತ್ತವೆ. ಹಲೀಮಳ ತಾಯಿ ಪಾತುಮ್ಮ ತನ್ನ ಮಗಳಿಗೆ ಖಾದರ್‌ನ ಸಂಬಂಧ ಕುದುರಿಸಲು ಗಂಡನಿಗೆ ತಿಳಿಯದಂತೆ ರುಖಿಯಾಳ ಮನೆಗೆ ಬರುವಳು. ಅದೇ ಸಮಯಕ್ಕೆ ರುಖಿಯಾಳ ಬಗೆಗಿನ ಆರೋಪಕ್ಕೆ ಕಿವಿಯಾದ ಫಕೀರ ಸಾಹೇಬರು ಅವಳ ಮನೆಗ ಬಂದಾಗ ಭಯದಿಂದ ನಡುಗಿದ ಪಾತುಮ್ಮ ಹಿತ್ತಲ ಬಾಗಿಲಿಂದ ಓಡಿಹೋಗಿ, ಖಾದರ್ ಸಿಕ್ಕಿ ಬೀಳುತ್ತಾನೆ. ‘ಎಲ್ಲವೂ ಸುಖಾಂತ್ಯ ವಾಗಲಿದೆಯೆಂದುಕೊಳ್ಳುವಾಗಲೇ, ಎಂತಹ ತಿರುವು ಪಾತುಮ್ಮನವರ ಮಾತಿನಂತೆ ಎಲ್ಲವೂ ನಡೆದುಹೋಗಿದ್ದರೆ!’ ಎಂದು ಕಥೆಗಾರ ತನ್ನ ಕಥೆಯ ತಿರುವಿಗೆ ತಾನೆ ಪಶ್ಚಾತ್ತಾಪ ಪಡುತ್ತಾನೆ. ಆದರೆ ಅದು ಇನ್ನೊಂದು ತಿರುವನ್ನು ಪಡೆದು ಸುಖಾಂತವಾಗುವುದು ಸಕಾರಾತ್ಮಕ ಚಿಂತನೆಯ ಕಥೆಗಾರನಿಗೆ ಬೇಕಾಗಿದೆ.

ಖಾದರ್ ಕತೆಯ ಕೊನೆಯ ನುಡಿಯಲ್ಲಿ ‘ಬಾ ರುಖಿಯಾ ಹೋಗುವಾ’ ಎಂದು ನುಡಿದು ಅವಳನ್ನು ಹೊಸ ಬಾಳಿನೆಡೆಗೆ ಕೊಂಡೊಯ್ಯುತ್ತಾನೆ. ಹೀಗೆ ಶುಭ ಆಲೋಚನೆಯಲ್ಲಿ ವಿಧವೆಗೆ ಬಾಳನ್ನು ಕಥೆಗಾರರು ನೀಡಿ ತಮ್ಮ ಧನಾತ್ಮಕ ಭಾವದತ್ತ ಸಾಗುತ್ತಾರೆ. ಇದು ವಿಧವೆಯ ಸಂಕೀರ್ಣ ಜೀವನದ ಎಳೆ ಎಳೆಯನ್ನು ಸೂಕ್ಷ್ಮವಾಗಿ ಬಿಡಿಸಿಟ್ಟ ಕಥೆ. ಪ್ರಣಯಾಸಕ್ತಿ ಮತ್ತು ಕಾಮಾಸಕ್ತಿ ಇಲ್ಲದ ರುಖಿಯಾ ಮತ್ತು ಖಾದರ್ ಪರಿಸ್ಥಿತಿಯ ಕಾರಣದಿಂದ ಆತ್ಮೀಯ ಭಾವದಲ್ಲಿ ಅನ್ಯೋನ್ಯ ಪ್ರೇಮಾವರಣಕ್ಕೆ ಒಳಗಾಗುವ ವಿಶೇಷ ಕಥೆ ಇದಾಗಿದೆ. ಇಂತಹ ಕಥೆಯೇ ನಾಡಿನ ಸಂಸ್ಕೃತಿಯನ್ನು ಪೋಷಿಸುವುದು.

* * *

‘ಆಕಾಶಕ್ಕೆ ನೀಲಿ ಪರದೆ’ ಕಥೆಯ ಮುಕುಂದಣ್ಣನು ಕರುಣೆ, ಮಾನವೀಯ ಅನುಕಂಪ ಹಾಗೂ ಮಾತಿನಿಂದ ವರ್ಣಿಸಲಾಗದ ಆತ್ಮೀಯ ಭಾವಕ್ಕೆ ಒಳಗಾದ ವ್ಯಕ್ತಿ. ಆತ ಮಹಡಿ ಮನೆಯ ಪುಸ್ತಕದಂಗಡಿಯ ಮಾಲಿಕ. ಅವನಿಗೆ ರಸ್ತೆಯ ಎದುರು ಗುಡಿಸಿಲಿನ ಪುಟ್ಟ ಹುಡುಗಿ ಮುಬೀನಾಳನ್ನು ಕಂಡರೆ ಮುದ್ದು. ಅವಳನ್ನು ತನ್ನ ಗುಜ್ಜಾನೆಮರಿ ಹೊಟ್ಟೆಯ ಮೇಲೆ ಕುಳ್ಳಿರಿಸಿಕೊಂಡು ಆಡಿಸುತ್ತಾನೆ. ಆ ಮಗುವಿನ ತಾಯಿ ವಿಧವೆ ಕುಂಞ ಪಾತುಮ್ಮಳಿಗೆ ಮನುಷ್ಯ ಪ್ರೀತಿಯ ಒಂದೇ ಕಾರಣದಿಂದ ಸಹಾಯವಾಗುತ್ತಾನೆ. ಈ ಕಥೆಯಲ್ಲಿ ಮನುಷ್ಯ ಮನುಷ್ಯರ ಹೃದಯ ಸ್ಪಂದನವಿದೆ. ಧರ್ಮದ ಕೃತಕ ಹೃದಯವಿಲ್ಲ.

ಮುಕುಂದಣ್ಣ ತಾನು ಪೋಷಿಸಿದ ಮುಬೀನಾಳನ್ನು 'ಬೇಬಿ' ಎಂದು ಹೆಸರಿಸಿ ಶಾಲೆಗೆ ಸೇರಿಸುತ್ತಾನೆ. ಆಕೆಯನ್ನು ಪಿ.ಯು.ಸಿ.ವರೆಗೆ ಓದಿಸುತ್ತಾನೆ. ಮದುವೆ ವಯಸ್ಸಿನ ಆ ಹುಡುಗಿಗೆ ಮುಸಲ್ಮಾನ್ ಹುಡುಗನನ್ನು ಹುಡುಕಿ ಮದುವೆ ಮಾಡಲು ಸೋಲುತ್ತಾನೆ. ಬೇಬಿಯ ಕೋರಿಕೆಯಂತೆ ಕೊನೆಗೆ ತಾನೇ ಮದುವೆಯಾಗುತ್ತಾನೆ. ಅಲ್ಲಿಯವರೆಗೆ ಅವನು ಆಕೆಯನ್ನು ನೋಡುತ್ತಿದ್ದ ದೃಷ್ಟಿ ಬದಲಾಗುತ್ತದೆ. ಆಕೆ ಕಿಟಕಿಯಿಂದ ಮೋಡವನ್ನು ಮುಕ್ತವಾಗಿ ನೋಡಲು ಬಿಡದೆ ಅದಕ್ಕೆ ನೀಲಿ ಪರದೆ ಹಾಕುತ್ತಾನೆ. ವಿವಾಹ ಉಂಟುಮಾಡುವ ಬಂಧನವನ್ನು, ತನ್ನವಳು ಮಾತ್ರ ಎಂಬ ಪುರುಷ ಕ್ರೌರ್ಯವನ್ನು, ಕಥೆಗಾರರು ತುಂಬಾ ಸೂಕ್ಷ್ಮವಾಗಿ ಆಕಾಶಕ್ಕೆ ನೀಲಿ ಪರದೆ ಎಳೆದು ನೂರುವಾಕ್ಯ ಹೇಳುವುದನ್ನು ಒಂದು ನುಡಿಯಲ್ಲಿ ಸಾಧಿಸಿ ಬಿಡುತ್ತಾರೆ. ಇದು ಸಂಗ್ರಹ ನುಡಿಯ ಕುಶಲ ಕಥಾಶೈಲಿ.

ಮುಕುಂದಣ್ಣ ತನ್ನ ಬೇಬಿಯನ್ನು ಮದುವೆಯಾದರೂ ಆಕೆಯನ್ನು ಹೆಂಡತಿಯಂತೆ ಕಾಣುವುದಿಲ್ಲ. ಆಗ 'ಮುತ್ತುಪ್ಪಾಡಿಯ ವೈಜಯಂತಿಮಾಲಾ' ಅಂದರೆ ಯೌವ್ವನ ಭರಿತ ಸುಂದರ ಬೇಬಿಗೆ ಅಣ್ಣ ಅಪ್ಪನಂತಿದ್ದ ಮುಕುಂದಣ್ಣ ರಾಕ್ಷಸನ ಹಾಗೆ ಕಾಣುತ್ತಾನೆ. ಪಿ.ಯುಸಿ. ಓದಿದ ಬೇಬಿ ಆ ಪರಿಸ್ಥಿತಿಯ ಒತ್ತಡದಿಂದ ಬಿಡುಗಡೆ ಹೊಂದಲು ಅವಳ ಆಂತರ್ಯದ ಗೆಳತಿ ಸುಮತಿಗೆ ಪತ್ರ ಬರೆದು ಮಂಗಳೂರಿನ ಹಾಸ್ಪಲ್‌ಗೆ ಹೋಗಿ ನರ್ಸ್ ಆಗುತ್ತಾಳೆ. ಕಥೆಗಾರರು ಮುಕುಂದಣ್ಣ, ಬೇಬಿ, ಸುಮತಿ ಹೆಸರುಗಳನ್ನು ಪ್ರತಿಮಾತ್ಮಕವಾಗಿ ಬಳಸಿದ್ದಾರೆ.

ಇದಿಷ್ಟು ಬೊಳುವಾರು ಕಥೆಗಾರರಾಗಿ ಕೇಳಿ ಬರೆದದ್ದು. ಅನಂತರದ್ದು ಶರೀರ ಸಂಬಂಧವನ್ನು ಮೀರಿದ ಒಂದು ಮಾನವೀಯ ಅನುಬಂಧ. ಕಥೆ ಘಟನೆಗಳ ಜೊತೆ ತನ್ನ ಪಾಡಿಗೆ ತಾನು ಸಾಗುತ್ತಾ ನಡೆದಂತೆ ಪಡೆದುಕೊಳ್ಳುವ–ಓದುಗ ಕಲ್ಪಿಸಿಕೊಳ್ಳಲಾಗದ ತಿರುವು ಬೊಳುವಾರ ಅವರ ವಿಶಿಷ್ಟ ಕಥಾತಂತ್ರ, ಅವರದೇ ಪ್ರತ್ಯೇಕ ಕಥಾ ಸಂವಿಧಾನ. ಸಂಕೀರ್ಣ ಮಾನವ ಸಂಬಂಧಗಳ, ಬದುಕಿನ ಬಹುರೂಪದ ವಿನ್ಯಾಸಗಳ ವರ್ಣನಾತೀತ ಬಾಂಧವ್ಯ ಇಲ್ಲಿ ಕುಸುರಿಗೊಂಡಿದೆ. ಆ ಕಥಾ ಕುಸುಮದ ಕಂಪು ವಿವರಿಸಿದರೆ ಓದುಗರ ಸವಿಗೆ ತಡೆಯಾದೀತು.

ಇಂತಹ ವರ್ಗ, ಧರ್ಮ, ಭಾಷೆಯ ತಾರತಮ್ಯವನ್ನು ಹೊಡೆದುಹಾಕಿ ಅನುಪಮ ಜೀವಿಗಳ ಬಂಧದ ಕಥೆ ರಚಿಸಲು ಬೊಳುವಾರರಿಗೆ ಹೇಗೆ ಸಾಧ್ಯವಾಯಿತು ಎಂದು ಅಚ್ಚರಿಯಾಗುತ್ತದೆ. ಈ ಬಗೆಯ ಧರ್ಮ ಮತ್ತು ವರ್ಗ ಸಂಘರ್ಷವನ್ನು ಒಡೆದು ಮಾನವೀಯ ಪ್ರೀತಿಯನ್ನು ಸಾಧಿಸುವ ಕಥೆ ಜಗತ್ತಿನ ಕಥಾಮಾಲಿಕೆಗೆ ಸೇರುವುದಾಗಿದೆ.

ಸಹೃದಯ ಓದುಗರ ಸಹನೆ ಪರೀಕ್ಷಿಸುವುದು ಬೇಡ. ಘಟನೆ ನಡೆದು ೩೦ ವರ್ಷದ ನಂತರ ೭೦ ವರ್ಷದ ಅಜ್ಜ ಮುಕುಂದಣ್ಣನಿಗೆ ಬೇಬಿ ಆಸರೆಯಾಗಿರುತ್ತಾಳೆ ತಾಯಿಯಂತೆ. ಇದು platonic love. ದಿವ್ಯಪ್ರೇಮ.

* * *

ಬೊಳುವಾರು ಅವರ 'ದೃಷ್ಟಿ' ಕಥೆ ಒಂದು ರೂಪಕ ಕಾವ್ಯದಂತಿದೆ. ಅಲ್ಲಿಯ ಪಾತ್ರಗಳಾದ ಅಂದು ಕಾಕ, ಪೊಡಿಯಜ್ಜ, ಫಕೀರ ಸಾಹೇಬರು, ಉಮ್ಮಾ ತುಮ್ಮಾ ಕಾಣುವ ಬೆಳಕಿನಲ್ಲಿ ಏನನ್ನೊ ಮುಚ್ಚಿಡುತ್ತಿರುತ್ತಾರೆ. ಕಣ್ಣು ಕಾಣದಂತಾಗಿಸಿದ ಪ್ರಕೃತಿಯ ಮುಸ್ಸಂಜೆ ಅನಂತರದ ರಾತ್ರಿಯ ದಾರಿಯ ನಡೆ ಕಥಾಭಾಗವಾಗಿ ಕತ್ತಲು ಸಹಜ ಎಂದು ಹೇಳುತ್ತಿರುತ್ತದೆ. ಚಂದ್ರನನ್ನು ಇಡಿಯಾಗಿ ಮುಚ್ಚಿದ ಹಲಸಿನ ಮರದ ದಟ್ಟ ಎಲೆ-ಚಂದ್ರನಲ್ಲಿ ಕಲೆ ಇಲ್ಲ ಎಂದು ಸಾರುತ್ತ–ಸುಲೇಮಾನನಿಗೆ ಸಂಕೇತವಾಗಿದೆ. ಇಡೀ ಸಂಜೆ ಮತ್ತು ರಾತ್ರಿಯ ವಾತಾವರಣವನ್ನು ಕಥೆಯ ಒಂದು ಭಾಗವಾಗಿ ಅದನ್ನು ಒಂದು ಪಾತ್ರವಾಗಿ ಕಥೆಗಾರರು ದುಡಿಸಿಕೊಂಡಿದ್ದಾರೆ. ಇಲ್ಲಿಯ ಪ್ರಕೃತಿ ಚಿತ್ರಣವೇ ಕಥೆಯ ಅರ್ಥವನ್ನು ಧ್ವನಿಸುತ್ತದೆ.

ಕತ್ತಲೆ ಬೆಳಕುಗಳೆರಡೂ ಜೀವನದ ಅವಿಭಾಜ್ಯ ಅಂಗ ಎಂಬುದನ್ನು ಸುಲೇಮಾನನು ಸ್ಪಷ್ಟವಾಗಿ ಗ್ರಹಿಸಿಕೊಂಡಿದ್ದಾನೆ. ಕತ್ತಲನ್ನು ಸಹಜವಾಗಿ ಮೆಚ್ಚುವ ಸುಲೇಮಾನನ ಪಾತ್ರಸೃಷ್ಟಿ ಈ ಕಥೆಯಲ್ಲಿ ಉತ್ತಮವಾಗಿದೆ. ತನ್ನ ಮಗುವನ್ನು ನೋಡುವ ಕಾತುರದಿಂದ ಆಗತಾನೆ ಮಸ್ಕತ್‌ನಿಂದ ಬಂದಿದ್ದ ಆತ–ಸರದೋಷದಿಂದ ಕುರಾಡಾದ ತನ್ನ ಮಗು ಮತ್ತು ಹೆಂಡತಿ ಜುಲೇಖಾಳನ್ನು ಸ್ವೀಕರಿಸುವ ಕಥಾ ತಿರುವು ಸೃಜನಾತ್ಮಕ ಕಥಾಶೈಲಿಯ, ಉತ್ತಮ ಸಂಸ್ಕಾರ ರೂಪಿಸುವ, ಸಕಾರಾತ್ಮಕ ಭಾವವಾಗಿದೆ. ದಾಂಪತ್ಯದ ಅರಿವು ವಿಸ್ತರಿಸುವ ಕನ್ನಡದ ಶ್ರೇಷ್ಠ ಕಥೆ ಇದಾಗಿದೆ. ಈ ಕಥೆ ಓದಿದಾಗ ಕಾವ್ಯ ಗಾರುಡಿಗ ದ.ರಾ. ಬೇಂದ್ರೆಯವರ ಈ ನುಡಿ ನೆನಪಾಗುತ್ತದೆ.

'ಪ್ರೇಮಾನs ಪಲ್ಲವಿಸsದ ಕಾಮದ ಕಾವಿಸ್ನಾಗ
ದೇವ-ದಾನವ-ಮಾನವರೆಲ್ಲಾ ಬೂದಿ.
ಎಷ್ಟು ಓದಿ, ಏನು ಓದಿ, ಊದುಗೊಳವೀ ಗಾಳೀಬಾಳು
ಕೊಳಲೀನ ದನಿ ಬರಲಿ ಸನಿ.'

ಬೊಳುವಾರರ ಕಥೆಯ ಸುಲೇಮಾನನ ಪಾತ್ರ ಬರಿ ಬಿದಿರಿನ ಗಾಳಿ ಬಾಳಿನದಲ್ಲ, ಕೊಳಲಿನ ಮುರಳಿಯ ಪ್ರೇಮದ ಇಂಪಾದ ದನಿ.

೩

ಈ ದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಯ ವ್ಯಕ್ತಿಗಳು, ಬಂಡವಾಳಶಾಹಿಗಳು ಸದಾ ತಮ್ಮಲ್ಲಿ ಕೈ ಬಾಂಬುಗಳನ್ನು, ಹಣದ ಥೈಲಿಯನ್ನು ಇಟ್ಟುಕೊಂಡಿರುತ್ತಾರೆ. ಅವರು ತಮ್ಮ ಹಿತ ಕಾಪಾಡಿಕೊಳ್ಳಲು–ಈ ದೇಶದಲ್ಲಿ ಒಂದೊಂದು ತುತ್ತು ಅನ್ನಕ್ಕಾಗಿ ಜೀವನವಿಡೀ ಜೀವ ಸವೆಸುವ ಜನಸಾಮಾನ್ಯರನ್ನು ದಾಳವಾಗಿಸಿಕೊಳ್ಳಲು ಹೊಂಚು ಹಾಕುತ್ತಿರುತ್ತಾರೆ. ಆದರೆ ತಾವು ಮಾತ್ರ ಸದಾ ಸುಖದಿಂದ ಸುರಕ್ಷಿತವಾಗಿರಲು ಹುನ್ನಾರಗಳನ್ನು ಹೂಡುತ್ತಿರುತ್ತಾರೆ. ಅವರು ಎಷ್ಟು ಅಮಾನವೀಯ ಅಪಾಯಕಾರಿಗಳು ಎಂಬುದನ್ನು ಬೊಳುವಾರರ 'ಅಂಕ' ಕಥೆ ಸಾರುತ್ತದೆ.

ವಿಧವೆ ಉಮ್ಮಾಬಿ ಮತಾಂತರಗೊಂಡ ತನ್ನ ಮಗ ರಹಮಾನ್‌ನನ್ನು ಮಂಗಳೂರಿನ ದೊಡ್ಡಾಸ್ಪತ್ರೆಗೆ ಸೇರಿಸಿದ್ದಾರೆಂದು ಅವನನ್ನು ಹುಡುಕುತ್ತಾ ಹೋಗುತ್ತಾಳೆ. ಅವಳ ವಾತ್ಸಲ್ಯದ ಮಾತೃಹೃದಯ ಮೌನದಿಂದ ಅವನ ಉಳಿವಿಗಾಗಿ ಪರಿತಪಿಸುತ್ತದೆ. ಮತಾಂತರಗೊಂಡು ರಮೇಶನಾಗಿದ್ದವನ ಹೆಣದ ಹಕ್ಕಿಗಾಗಿ ಕೃಷ್ಣಸರಳಾಯ, ವ್ಯಾಪಾರಿ ಗುಂಡಣ್ಣ ಶೆಟ್ಟರು, ಕಾಮತರು ಒಂದು ಯೋಜನೆ ಹಾಕಿದರೆ, ಮತ್ತೊಂದು ಕಡೆ ಕಂಟ್ರಾಕ್ಟರ್ ಆದಂ ಸಾಹುಕಾರರು, ಹಸನಬ್ಬ, ಕ್ಯಾಪ್ಟನ್ ಖಾದರ್ ಇನ್ನೊಂದು ಯೋಜನೆ ಹಾಕುತ್ತಾರೆ. ಹೆಣಕ್ಕಾಗಿ ಆಶಿಸುವ ಧರ್ಮಾಂಧರು. ಅವರ ಹುಳುಕುತನ ಇಲ್ಲಿ ಬಯಲಾಗಿದೆ.

ಮತಾಂತರದ ಲಾಭ ಪಡೆಯಲು ತರ್ಕಿಸಿ ಲಾಯರ್ ಕೃಷ್ಣಭಟ್ಟರನ್ನು ಕಂಡು ಗೊಂದಲಕ್ಕೀಡಾದ ಕೃಷ್ಣ ಸರಳಾಯರು ನಮ್ಮ ದೇಶದ ಕಾನೂನನ್ನು ಕುರಿತು ಹೇಳುವ ಮಾತು ಗಮನಿಸತಕ್ಕುದ್ದಾಗಿದೆ. 'ಒಟ್ಟಿನಲ್ಲಿ ನಮ್ಮ ದೇಶದ ಕಾನೂನೇ ಹೀಗೆ; ಒಂದು ರೀತಿಯಲ್ಲಿ ಉಪನಿಷತ್ತು ಇದ್ದಹಾಗೆ, ಅರ್ಥವಾದ ಹಾಗೂ ಅನಿಸ್ತದೆ ಅನಿಸಿದ್ದು ಏನು ಎಂಬುದು ಮಾತ್ರ ಅರ್ಥವಾಗುವುದಿಲ್ಲ.'

ಮತಾಂತರಗೊಂಡವನ ಹೆಣಕ್ಕೆ ಆಶಿಸುವ ಎರಡು ಧರ್ಮದ ವರ್ತನೆಗೆ 'ಹೆಣ' ಸಂಕೇತವಾದರೆ, ಮಗನು ಉಳಿಯುವುದಕ್ಕೆ ಆಶಿಸುವ ತಾಯಿಯ ಪ್ರೀತಿ 'ಜೀವ' ಸಂಕೇತವಾಗಿದೆ. ಇಲ್ಲಿ ವ್ಯವಹಾರ ಕೇಂದ್ರಿತ ಧರ್ಮ ಮತ್ತು ಮನುಷ್ಯ ಸಂಬಂಧಗಳ ಸಂಘರ್ಷ ಕತೆಯಾಗಿ ರೂಪುಗೊಂಡಿದೆ.

ಬೊಳುವಾರರು ತಮ್ಮ ಕಥೆಯಲ್ಲಿ ಹಿಂದೂಧರ್ಮ ಕ್ರಿಶ್ಚಿಯನ್ ಧರ್ಮ ಮತ್ತು ಇಸ್ಲಾಂ ಧರ್ಮವನ್ನು ಅದರ ಕರಾಳ ಕತ್ತಲೆಯಲ್ಲಿಯೆ ಬಡಿದು, ಅಲ್ಲಿ ಇರುವ ಒಂದು ದೇಹದಲ್ಲಿರಬೇಕಾದ ಮನುಷ್ಯ ಮನುಷ್ಯರ ಬಾಂದವ್ಯದ ಭಾರತ ಧರ್ಮವನ್ನು ಜಾಗೃತ ಗೊಳಿಸಿದ್ದಾರೆ. ಈ ಬಗೆಯ ದೇಶ ಬಾಂಧವರ ಸಾಮರಸ್ಯ ಬದುಕಿನ ಭಾರತ ಧರ್ಮ ಪ್ರತಿ ಪಾದಕರಾದ ಬೊಳುವಾರರಂತಹ ಸಾಹಿತಿಗಳೆ ಈ ನಾಡು ಸರ್ವ ಜನಾಂಗದ ಶಾಂತಿಯ ತೋಟವಾಗಲು ಕಾರಣರಾಗಿರುವುದು. ಇವರೆ ಭಾರತಧರ್ಮದ ಸಂಸ್ಕೃತಿಯನ್ನು ಪೋಷಿಸುವ ಹರಿಕಾರರು.

* * *

ಮತೀಯ ಪ್ರಜ್ಞೆಯನ್ನು ಒಡೆದುಹಾಕುತ್ತ ಮಾನವೀಯ ಪ್ರಜ್ಞೆಯ ಹಸಿವಿಗೆ ಆಶಿಸಿದ ಬೊಳುವಾರರನ್ನು 'ದೇವರುಗಳ ರಾಜ್ಯ' ಕಥೆಯಲ್ಲಿ ಕಾಣುತ್ತೇವೆ. ಜೊಸೆಫ್ ಡಿ ಕಾಸ್ಟ ಹಸಿವಿನ ಅನ್ನಕ್ಕಾಗಿ, ಪ್ರೀತಿಗಾಗಿ ರಹಮತ್ ಆಗುತ್ತಾನೆ. ವ್ಯವಸ್ಥೆಯ ಸೂತ್ರಧಾರಿಗಳಾಗಿ ಧರ್ಮದ ಹೆಸರಿನಲ್ಲಿ ಬದುಕುವ ಫಾದರ್ ಮತ್ತು ಮುಸ್ಲಿಂ ವ್ಯಾಪಾರಿ ಅವನಿಗೆ ಅನ್ನ ಮತ್ತು ಪ್ರೀತಿಯನ್ನು ನೀಡುವುದಿಲ್ಲ. ಧರ್ಮ ಈ ನಾಡಿನ ಹುಸಿಮುಖ, ಉಳ್ಳವರ ಬೆಡಗಿನ ನಾಟಕ ಎಂಬುದನ್ನು ಓದುಗರ ಅರಿವಿಗೆ ಈ ಕಥೆ ತರುತ್ತದೆ. ಇದು ಮತಾಂತರದ ವಿಕಟ ಪರಿಚಯ ನೀಡುವ ಉತ್ತಮ ಕಥೆ.

* * *

'ಒಂದು ತುಂಡು ಗೋಡೆ' ಕಥೆಯ ರೊಟ್ಟಿತಟ್ಟಿ, ರೊಟ್ಟಿ ಮಾರಿ ಬದುಕುವ ರೊಟ್ಟಿ ಪಾತುಮ್ಮ ದೇವರಾಜ ಅರಸರಿಂದ ಪಡೆದ ಚಿಕ್ಕ ಸೈಟ್‌ನಲ್ಲಿ ಒಂದು ಪುಟ್ಟ ಮನೆ ಕಟ್ಟಿಸಲು ಪಟ್ಟ ಪಡಿಪಾಟಲು ಮತ್ತು ಅವಳ ನಿಷ್ಕಲ್ಮಷ ಕುರಾನ್‌ನ ಧ್ಯಾನ–ಈ ದೇಶದ ಎಲ್ಲ ಬಡವರ ಬದುಕಿನ ರೀತಿಯಾಗಿದೆ. ಅವಳು ವಾರಕ್ಕೆ ಉಳಿಸುವ ಹತ್ತು ಹನ್ನೆರಡು ರೂಪಾಯಿ ಕೂಡುಸುವುದು ಚಿನ್ನದ ವ್ಯಾಪಾರಿ ಶ್ರೀನಿವಾಸ ಆಚಾರ್ಯರಲ್ಲಿ. ಅವರಿಬ್ಬರ ನಂಬಿಕೆ ಹಿಂದೂ ಮತ್ತು ಇಸ್ಲಾಂ ಮತಗಳನ್ನು ಮೀರಿದ್ದು. ಅದು ಮಾನವ ಧರ್ಮಕ್ಕೆ ಸಂಬಂಧಿಸಿದ್ದು.

ಧರ್ಮದ ಹೆಸರಿನ ಸ್ವಾರ್ಥ ಕೇಂದ್ರಿತ ವ್ಯಕ್ತಿ ರಾಮದಾಸ ಕಿಣಿಯವರ ಕುತಂತ್ರಕ್ಕೆ ಒಳಗಾಗಿ ಅಯೋಧ್ಯೆಗೆ ಕರಸೇವೆಗೆ ಹೋಗುವ ಶ್ರೀನಿವಾಸ ಆಚಾರ್ಯರ ಕಿರಿಮಗ ಚಂದ್ರಣ್ಣ, ವ್ಯವಸ್ಥೆಯ ದಾಳವಾಗುವ ಯುವಕರಿಗೆ ಸಂಕೇತವಾಗಿದ್ದಾನೆ. ಅವನು ಒಡೆಯದ ಮಸೀದಿಯ ಗೋಡೆಯ ತುಂಡೊಂದನ್ನು ವಿಜಯದ ಸಂಕೇತವಾಗಿ ಕರವ್ಯವಸ್ಥೆಯ ಮುಖ್ಯಸ್ಥನಿಂದ ಪಡೆದಿರುತ್ತಾನೆ. ಧರ್ಮದ ಕತ್ತಲೆಯ ಒಳ ಹೊಕ್ಕು ಬಂದ ಅವನಿಗೆ ಆ ಒಂದು ಗೋಡೆಯ ತುಂಡು ಸಮಸ್ಯೆಯ ನೆಲೆಯಾಗುತ್ತದೆ. ಅವನ ಮನಸ್ಸು ಮುಸಲ್ಮಾನರನ್ನು ಕಂಡು ಮಾತಿಗೆ ಸಿಗಲಾರದ ಅಳುಕಿಗೆ ಒಳಗಾಗುತ್ತದೆ. ಅದನ್ನು ಬಾವಿಗೆ ಎಸೆದು ನಿರಾಳನಾದರೂ - ಅವರ ಚಿನ್ನದ ಅಂಗಡಿಯಲ್ಲಿ ಹಣ ಸಂಗ್ರಹಿಸಿಟ್ಟಿದ್ದ ರೊಟ್ಟಿ ಪಾತುಮ್ಮ ಚಂದ್ರಣ್ಣನಿಂದ ಆ ತುಂಡು ಪಡೆದು ತಾನು ಕಟ್ಟಿಸುವ ಗೋಡೆಗೆ ಸೇರಿಸಬೇಕೆಂದು ಆಶಿಸುತ್ತಾಳೆ.

ಇಲ್ಲಿ ಚಂದ್ರಣ್ಣ ಮತ್ತು ರೊಟ್ಟಿ ಪಾತುಮ್ಮಳಂತಹವರಲ್ಲಿ ಕೋಮು ವೈಷಮ್ಯವಿಲ್ಲ. ಈ ಕಥೆ ನಮ್ಮ ದೇಶದ ಜ್ವಲಂತ ಹಿಂದೂ ಮುಸ್ಲಿಂ ಧಾರ್ಮಿಕ ಸಂಘರ್ಷದ ಹಿನ್ನೆಲೆಯಲ್ಲಿ ವಸ್ತು ಮತ್ತು ಕಥಾ ಸಂವಿಧಾನದ ದೃಷ್ಟಿಯಿಂದ ಕನ್ನಡದ ಅಷ್ಟೆ ಅಲ್ಲ ಭಾರತದ ಶ್ರೇಷ್ಠ ಕತೆಯಾಗಿದೆ. ನಿರ್ಗತಿಕರು ಗೂಡು ಕಟ್ಟಿಕೊಳ್ಳಲು ಹೆಣಗಾಡುತ್ತಿರುವಾಗ ಧರ್ಮದ ಹೆಸರಿನಲ್ಲಿ ಕೆಡಹುವ ವಕ್ರ ನಡೆಗಳು ಈ ದೇಶದ ಆಂತರಿಕ ಸತ್ವವನ್ನು ಕೆಡಹುವ ಹುನ್ನಾರದಲ್ಲಿರುವುದು ಓದುಗರ ಅರಿವಿಗೆ ಬರುತ್ತದೆ.

ಬೊಳುವಾರು ಅರಿತು ಕಥೆಯಲ್ಲಿ ಹೇಳುತ್ತಿರುವ ಧರ್ಮ, ದಾರ್ಶನಿಕ ಕವಿ ಡಿ.ವಿ.ಜಿ. ತಿಳಿಸಿದ ಧರ್ಮವಾಗಿದೆ. "ಧರ್ಮ ಎಂದರೆ ಒಳ್ಳೆಯ ನಡವಳಿಕೆ-ಆತ್ಮದ ಮೊಗ್ಗಿನ ಅರಳಿಕೆ. ನಾವು ಹೇಗೆ ನಡೆದುಕೊಂಡರೆ ನಮ್ಮ ಸುತ್ತ ಮುತ್ತಣ ಯಾರ ಬಾಳಿಗೂ ಕೇಡಾಗದೆ, ಎಲ್ಲರ ಬಾಳೂ ಸೊಗಸುಗೊಂಡು, ನಮ್ಮ ಬಾಳೂ ಸೊಗಸಾಗುತ್ತದೆಯೋ ಅಂಥ ನಡವಳಿಕೆ ಧರ್ಮ."

ಈ ದೇಶದಲ್ಲಿ ಹಿಂದೂ ಧರ್ಮ, ಕ್ರಿಶ್ಚಿಯನ್ ಧರ್ಮ, ಇಸ್ಲಾಂಧರ್ಮ ಮುಖ್ಯವಲ್ಲ, ಭಾರತ ಧರ್ಮ ಮುಖ್ಯ ಎಂದು ಸಾರಿದ ಬೊಳುವಾರರು ಭಾರತದ ಉತ್ತಮ ಕಥೆಗಾರರಾಗಿದ್ದಾರೆ. ಇವರ ಭಾರತಧರ್ಮ ಸಾಧಿಸುವುದು ಸಾಧಾರಣ ಜನರ ಬದುಕಿನ ಪ್ರೀತಿ, ಜೀವ ಸಂಕಲ್ಪ ಮತ್ತು ಭಾರತದ ಐಕ್ಯತೆ.

ಬಿಳುಮಲೆರಾಮದಾಸ : 'ಅನಾವರಣ'

ಮಲೆನಾಡಿನ ಕಾಡು, ಬೇಟೆ, ಬದುಕನ್ನು ತಮ್ಮ ಕಥೆ, ಕಾದಂಬರಿ, ಪ್ರಬಂಧಗಳಲ್ಲಿ ಸಮರ್ಥವಾಗಿ ಚಿತ್ರಿಸಿದ ರಾಮದಾಸ್ ಅವರು ಆ ನೆಲದ ಕುಡಿ. ಆ ಜೀವಸೆಲೆ ಬದುಕಿಗಾಗಿ ಕಸಿಗೊಂಡದ್ದು ಬೆಂಗಳೂರಿನ ಕಾಂಕ್ರೀಟ್ ಕಾಡಿನಲ್ಲಿ. ಅವರು ಜೀವನ ನಿರ್ವಹಣೆಗೆ ಆಯ್ಕೆ ಮಾಡಿಕೊಂಡದ್ದು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸರ್ಕಾರಿ ನೌಕರಿ. ಗುಮಾಸ್ತನಾಗಿ ಸೇರಿ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಕೆಲಸ ನಿರ್ವಹಿಸಿ ನಿವೃತ್ತರಾಗಿರುವ ಅವರು ಆ ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿ ಇರುವ ಕಾನೂನನ್ನು ಆಚರಣೆಗೆ ತರುವ ವ್ಯಕ್ತಿಗಳು, ಅವನ್ನು ಅರ್ಥವಿವರಣೆಗೆ (Interpret) ಒಳಪಡಿಸಿ ಸ್ವಾರ್ಥ ಸಾಧಿಸಿಕೊಳ್ಳುವ ರೀತಿಯನ್ನು ಒಂದು ಕಥೆಯಾಗಿ ಹೆಣೆದಿದ್ದಾರೆ.

ಜೀವನ ಪ್ರೀತಿ, ಸಮಾಧಾನ ಬದುಕು, ಸಹೋದ್ಯೋಗಿಗಳಲ್ಲಿ ಇರಬೇಕಾದ ನಿಜಸ್ನೇಹಗಳಿಗೆ ಹೊರತಾದ ಬರಡು ಠೇಂಕಾರದ ಅಧಿಕಾರಿಗಳನ್ನು ರಾಮದಾಸರು 'ಅನಾವರಣ' ಕಾದಂಬರಿಯಲ್ಲಿ ನಗ್ನಗೊಳಿಸಿದ್ದಾರೆ. ಇಲ್ಲಿಯ ಪ್ರತಿಪಾತ್ರವು, ಪ್ರತಿಘಟನೆಯ ಸನ್ನಿವೇಶದ ಲಾಭ ಪಡೆದುಕೊಳ್ಳುವುದರಲ್ಲಿ ಸ್ವಾರ್ಥ ಕೇಂದ್ರಿತವಾಗಿದೆ. ಪ್ರತಿಪಾತ್ರದ ಹುನ್ನಾರದ ಚಿತ್ರಣವೇ ಕಥೆಯ ಒಳಸುಳಿಯಾಗಿದೆ. ಸ್ವಾತಂತ್ರ್ಯಾನಂತರದ ಆಡಳಿತ ವ್ಯವಸ್ಥೆಯ ಕಾನೂನಿನಲ್ಲಿ ಶಿಸ್ತು, ಎಚ್ಚರ ಇದ್ದರೂ ಅದು ಫಲಪ್ರದವಾಗುವಲ್ಲಿಯ ತೊಡುಕುಗಳು ಇಲ್ಲಿವೆ. ಕಛೇರಿಗಳಲ್ಲಿಯ ಮಾತ್ಸರ್ಯ, ದ್ವೇಷವು ಹಣ ಲಂಪಟತನದಿಂದಲೇ ಉಂಟಾಗುವಂತಹದು ಎಂಬ ಮನುಷ್ಯ ವರ್ತನೆಯ ವಿಶ್ಲೇಷಣೆ ಈ ಕಾದಂಬರಿಯಲ್ಲಿದೆ.

ಈ ಕಾದಂಬರಿಯ ಕೇಂದ್ರ ಪಾತ್ರ ಶ್ರೀನಿವಾಸನ ಕಥೆ ಈ ನಾಡಿನ ಅಧಿಕಾರಿಗಳ ಕಥೆಯೂ ಆಗಿದೆ. ಹಣವು ವ್ಯಕ್ತಿಗಳ ನೈತಿಕ ಬಲವನ್ನು ಕುಸಿಯುವಂತೆ ಮಾಡುವ ದಾರುಣ ವ್ಯವಸ್ಥೆಯ ಚಿತ್ರಣ ಇಲ್ಲಿದೆ. ಬೇರೆಯವರ ಮನೆಯಲ್ಲಿ ದುಡಿದು ಮಗನನ್ನು ಬೆಳೆಸಿದ ತಾಯಿ, ಭಾವ, ತಮ್ಮಂದಿರಿಂದ ಹಣ ಪಡೆದು ಪೋಷಣೆಗೆ ಒಳಗಾಗಿ ವಿದ್ಯಾವಂತನಾಗಿ ಅಧಿಕಾರಿಯಾದ ಶ್ರೀನಿವಾಸ ಜಮೀನುದಾರ ಸೂರಪ್ಪಗೌಡರ ಮಗಳು ಸರೋಜಳನ್ನು ಮದುವೆ ಆದನಂತರ ಬದಲಾಗುತ್ತಾನೆ. ಹೆಂಡತಿಯನ್ನು ಎದುರಿಸಲಾರದ ಶ್ರೀನಿವಾಸ ತಾಯಿಯನ್ನು ಶೆಡ್‌ನಲ್ಲಿ ಕೂಡಿಹಾಕಿ ನಗರೀಕರಣದ ಜೀವಿಗಳ ಅಸಹ್ಯ ಮುಖವಾಗುತ್ತಾನೆ. ತನ್ನ ಮಗನ ಮನೆಯ ಉಸಿರುಗಟ್ಟಿದ ವಾತಾವರಣದಲ್ಲಿ ಅನ್ನಕ್ಕಾಗಿ ಆಶ್ರಯಿಸದೆ ಆ ತಾಯಿ

ತನ್ನೂರಿನ ತನ್ನ ಗುಡಿಸಲು ಮನೆಯಲ್ಲಿ ಪ್ರಾಣ ಬಿಟ್ಟದ್ದು–ಇಂದಿನ ಭಾರತದ ಕೌಟುಂಬಿಕ ವ್ಯವಸ್ಥೆಯಲ್ಲಿ ವರ್ಗಸೃಷ್ಟಿಯ ತಣ್ಣನೆಯ ಕ್ರೌರ್ಯವಾಗಿದೆ.

ಮದುವೆಯಾದ ಹೊಸದರಲ್ಲಿ ಲಂಚದ ರುಚಿಯನ್ನು ಹೆಂಡತಿಗೆ ಉಣಬಡಿಸಿದ ಶ್ರೀನಿವಾಸ, ಪ್ರತಿದಿನವೂ ಆಕೆ ಜೇಬುತಡಕಿ ಇಷ್ಟೇನಾ ತಂದಿದ್ದು ಎಂದು ಕೇಳುವ ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತಾನೆ. ಹಫ್ತಾ ವಸೂಲಿಗಾರಳಂತೆ ಆಕೆ ಶ್ರೀನಿವಾಸನನ್ನು ಹಿಂಸಿಸುವ ರೀತಿ ಓದಿದಾಗ ಕೌಟುಂಬಿಕ ಸಾಮರಸ್ಯ ಕದಡಿ ರಾಡಿಯಾಗಿಸುವ ಲಂಚ ಹಣದ ವಿರಾಟ್ ರೂಪ ಅಸಹ್ಯ ಹುಟ್ಟಿಸುತ್ತದೆ. ಇಂತಹ ಪರಿಸ್ಥಿತಿಗೆ ಒಳಗಾದ ಶ್ರೀನಿವಾಸ, ಸಾಕಿದ ಭಾವನಿಗೆ ಸಹಾಯ ಮಾಡಲಾಗದ; ನಿರುದ್ಯೋಗಿ ತಮ್ಮ ಗೋಪಾಲಪ್ಪನ ಜೀವನ ನಿರ್ವಹಣೆಗೆ ಖಚಿತ ತೀರ್ಮಾನಕ್ಕೆ ಬರಲಾಗದ ಅಸಹಾಯಕನಾಗಿ ನರಳುತ್ತಾನೆ.

ಶ್ರೀನಿವಾಸನು ಕಛೇರಿಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ತನ್ನ ಕೆಲಸಕ್ಕೆ ಗಾಂಭೀರ್ಯದಿಂದಿದ್ದು, ತನ್ನ ಕೆಲಸದ ಕಾನೂನು ತಿಳಿವಳಿಕೆಯ ಪರಿಣತಿ ಹೊಂದಿ, ಸಹೋದ್ಯೋಗಿಗಳಿಂದ ಸೈ ಎನಿಸಿಕೊಂಡಿರುತ್ತಾನೆ. ಯಾವುದೇ ಕೇಸಿನಲ್ಲಿ ಜನ ತಾವಾಗಿ ಹಣ ಕೊಟ್ಟರೆ ತೆಗೆದುಕೊಳ್ಳುವ, ಡಿಮ್ಯಾಂಡ್ ಮಾಡಿ ಪಡೆಯದ ಅಧಿಕಾರಿಯಾಗಿರುತ್ತಾನೆ. ಆಡಳಿತದಲ್ಲಿ ಅಂಗೀಕೃತವಾದ ಜೀಹುಜೂರ್ ವ್ಯವಸ್ಥೆಗೆ ಸೆಡ್ಡು ಹೊಡೆದು; ಯೋಚಿಸಿ, ಪ್ರಶ್ನಿಸುವ ಸಮರ್ಥ ಅಧಿಕಾರಿ ಎನಿಸಿಕೊಂಡದ್ದು ಅವನ ಸಾರ್ವಜನಿಕ ಮುಖವಾಗಿದೆ. ಕಛೇರಿ ಕೆಲಸದಲ್ಲಿ ಸದಾ ಎಚ್ಚರಿಕೆಯಿಂದ ಇರುವ ಶ್ರೀನಿವಾಸನು ವ್ಯಾಪಾರಿ ಸುಬ್ರಾಯ ಶೆಟ್ಟರಿಂದ ಹಳೆಬಾಕಿ ಕಟ್ಟಿಸಿಕೊಂಡದ್ದು; ಬುದ್ಧಿವಂತಿಕೆಯಿಂದ ಇಂಟೆಲಿಜೆನ್ಸ್ ಇನ್ಸ್‌ಪೆಕ್ಟರ್ ರಾಮಸ್ವಾಮಿ ಅವರಿಂದ ಶೆಟ್ಟರ ಅಂಗಡಿ ರೇಡ್ ಮಾಡಿಸಿದ್ದು; ಅಡ್ವೊಕೇಟ್ ನೆಪರುವನ್ನು ಬಗ್ಗುಬಡಿದ ರೀತಿ ಅವನ ಆಡಳಿತದ ಎಚ್ಚರವನ್ನು ಸೂಚಿಸುತ್ತದೆ. ಇದು ಅವನ ಸಂಸಾರ ಮತ್ತು ಕಛೇರಿಯಲ್ಲಿನ ವ್ಯಕ್ತಿತ್ವದ ವಿಭಿನ್ನ ಮುಖವಾಗಿದೆ.

* * *

ಶ್ರೀನಿವಾಸ್ ತನ್ನ ಕಛೇರಿಯ ಇನ್ಸ್‌ಪೆಕ್ಟರ್ ಸಿದ್ಧರಾಮಪ್ಪ, ತನ್ನ ಮೇಲಿನ ಅಧಿಕಾರಿ ಡಿ.ಸಿ. ಗುರುವಾರೆಡ್ಡಿ ಅವರಿಗೆ ಹತ್ತಿರದವನಾಗಿ ಕಛೇರಿ ಕೆಲಸ ಸರಿಯಾಗಿ ಮಾಡದಿರುವುದಕ್ಕೆ ರೋಸಿ ಹೋಗಿರುತ್ತಾನೆ. ಹಲವು ಸಾರಿ ಟಾರ್ಗೆಟ್ ರೀಚ್ ಮಾಡುವುದಕ್ಕಾಗಿ, ಕೆಲಸವನ್ನು ಆಸಕ್ತಿಯಿಂದ ಮಾಡಲು ತಿಳಿಸಿ ಹೇಳುತ್ತಾನೆ. ಅದಕ್ಕೂ ಕೇರ್ ಮಾಡದಿದ್ದಾಗ ಡೈರಿ ರಿವ್ಯೂ ಮಾಡಿ ಡಿಸಿಗೆ ಕಂಪ್ಲೆಂಟ್ ಮಾಡಿ, ಕಮೀಷನರ್‌ನಿಂದ ಆತನು ಸಸ್ಪೆಂಡ್ ಆಗುವಂತೆ ಮಾಡುತ್ತಾನೆ.

ಇಷ್ಟು ಆಡಳಿತ ಸೂಕ್ಷ್ಮತೆ ಹೊಂದಿದ್ದರೂ ತಾನೇ ಸೃಷ್ಟಿಸಿಕೊಂಡ ವೈರಿಗಳಿಂದ ತೊಂದರೆಗೊಳಗಾಗುತ್ತಾನೆ. ಹೊಸ ವ್ಯಾಪಾರದ ರಿಜಿಸ್ಟ್ರೇಷನ್‌ಗಾಗಿ ಬಂದ ವ್ಯಕ್ತಿ, ವ್ಯಾಪಾರದ ಸ್ಥಳವೇ ಇಲ್ಲದೆ–ಹೊಸ ಇನ್ಸ್‌ಪೆಕ್ಟರ್ ರೇವಣಸಿದ್ಧಪ್ಪನಿಂದ ಸುಳ್ಳು ಸ್ಪಾಟ್

ವೆರಿಫಿಕೇಷನ್ ಬರೆಸಿ–ಶ್ರೀನಿವಾಸನನ್ನು ಲೋಕಾಯುಕ್ತರ ಬಲೆಗೆ ಬೀಳಿಸಲು ಪ್ರಯತ್ನಿಸುತ್ತಾರೆ. ಆ ವ್ಯಾಪಾರಿಯ ಮತ್ತು ಅವನ ಹಿಂದೆ ಬಂದಿದ್ದ ವ್ಯಕ್ತಿಗಳ ಚಲನವಲನವನ್ನು ಎಚ್ಚರದಿಂದ ಗಮನಿಸಿದ ಶ್ರೀನಿವಾಸ್ ಅವರ ಜಾಲಕ್ಕೆ ಬೀಳದೆ ಪಾರಾಗುತ್ತಾನೆ. ಇಲ್ಲಿಯ ಪಾತ್ರಗಳು ನಂಬಿಕೆಯ ನೆಲೆಯಲ್ಲಿ ವರ್ತಿಸುತ್ತಲೇ ತಮ್ಮ ಸ್ವಾರ್ಥ ಮುಖ್ಯವಾದಾಗ ವಿದ್ರೋಹದ ಕಡೆಗೆ ಸಜ್ಜಾಗುತ್ತವೆ. ಇದು ಕಾದಂಬರಿಕಾರ ರಾಮದಾಸರು ತಮ್ಮ ಅನುಭವದಿಂದ ನೀಡಿದ ಅಧಿಕಾರಿಗಳ ನೈತ್ಯಾತ್ಮಕ ಮನೋವಿಶ್ಲೇಷಣೆ.

ಶ್ರೀನಿವಾಸನ ಕಛೇರಿಯ ನಿಷ್ಠಾವಂತನಾದ ಕ್ಲಾರ್ಕ್ ಅಹಮದ್ ತನ್ನ ಕೆಲಸದಲ್ಲಿ ಆಕಸ್ಮಾತ್ತಾಗಿ ಎಡವಿದ್ದಕ್ಕೆ ಕಾರಣವಾದ ಸಂದರ್ಭಗಳನ್ನು ಅವಲೋಕಿಸುತ್ತಾ, ತಪ್ಪು ತಿದ್ದಿಕೊಳ್ಳುತ್ತ ಪದೋನ್ನತಿಗೆ ಪ್ರಯತ್ನಿಸುವುದು; ಈ ಕಾದಂಬರಿಯ ಆಡಳಿತ ವ್ಯವಸ್ಥೆಯ ಉತ್ತಮ ವ್ಯಕ್ತಿಗಳ ಚಿತ್ರಣವಾಗಿದೆ.

ಸಿ.ಟಿ.ಓ. ತಗಡೇಗೌಡರಲ್ಲಿ ಟೈಪಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಎಲ್ಲಪ್ಪರೆಡ್ಡಿ ಸಂಜೆ ಕಾಲೇಜಿನಲ್ಲಿ ಓದಿ ಬಿ.ಎ. ಪಾಸು ಮಾಡಿರುತ್ತಾನೆ. ಆತ ಕೆ.ಪಿ.ಎಸ್.ಸಿ.ಯ ಎಫ್.ಡಿ.ಸಿ. ಕೆಲಸಕ್ಕೆ ತನ್ನ ಅರ್ಜಿ ಫಾರ್ವರ್ಡ್ ಮಾಡಲು ಕೇಳಿ ಬೇಸತ್ತು ಶ್ರೀನಿವಾಸ ಅವರಿಂದಲೂ ಹೇಳಿಸುತ್ತಾನೆ. ಮೇಲಧಿಕಾರಿ ಡಿ.ಸಿ. ರೆಡ್ಡಿ ಅವರ ಮಾತನ್ನೂ ಕೇಳದ ತಗಡೇಗೌಡ ಕೊನೆಯ ದಿನವಾದರೂ ಅರ್ಜಿಯನ್ನು ಫಾರ್ವರ್ಡ್ ಮಾಡುವುದಿಲ್ಲ. ತನ್ನ ಆಕಾಂಕ್ಷೆಯ ಬೆಳಕಿಗೆ ಕತ್ತಲಾದ ತಗಡೇಗೌಡನನ್ನು ಎಲ್ಲಪ್ಪರೆಡ್ಡಿ ಕಛೇರಿಯಲ್ಲಿಯೇ ಮೊಚ್ಚಿನಿಂದ ಹೊಡೆಯುತ್ತಾನೆ.

* ** *

ಒಂದೇ ಬ್ಯಾಚಿನಲ್ಲಿ ಅಧಿಕಾರಿಗಳಾದವರು ಅವರವರ ಲಾಭದಾಯಕ ಸ್ಥಾನಕ್ಕೆ ಪ್ರಯತ್ನಿಸುವುದು, ಆರ್ಥಿಕ ಬೆಳವಣಿಗೆ ಸಾಧಿಸುವುದು ಸಹಜ. ಆದರೆ ಒಬ್ಬರು ಇನ್ನೊಬ್ಬರ ಕಾಲನ್ನು ಎಳೆಯುತ್ತಾ ತನ್ನ ಉಳಿವಿಗೆ ಷಡ್ಯಂತ್ರ ರೂಪಿಸುತ್ತಾರೆ. ಹಾಗೆ ರೂಪುಗೊಂಡ ಬಲೆಯಲ್ಲಿ ತಾವೇ ಬೀಳುತ್ತಾರೆ. ಅಂತಹ ಅಧಿಕಾರಿಯಾಗಿ ಮೂರ್ತಿಯನ್ನು ಕಾದಂಬರಿಕಾರರು ಚಿತ್ರಿಸಿರುವ ರೀತಿ ಅವರ ಆಡಳಿತದ ಎಳೆತ ಸೆಳೆತ ಅರಿತ ಅನುಭವವಾಗಿದೆ.

ಸಿ.ಟಿ.ಓ. ಮಾದಯ್ಯ ದಲಿತರು. ಅವರು ಸಾಮಾಜಿಕ ಜಾಗೃತಿಯ ಪ್ರತಿನಿಧಿಯಂತೆ ಇದ್ದು; ಅಂಬೇಡ್ಕರರಿಂದ ದಲಿತರಿಗೆ ವಿದ್ಯೆ, ಸಮಾನತೆ, ಅಧಿಕಾರ ದೊರಕಿದೆ ಎಂಬುದನ್ನು ತಿಳಿದ ಎಚ್ಚೆತ್ತ ವ್ಯಕ್ತಿ. ಸ್ವಲ್ಪ ಒರಟುತನವಿರುವವರು. ಅವರು ಕಮೀಷನರ್ ಗಾವಂಕರರು ಅಕಸ್ಮಾತ್ತಾಗಿ ದಲಿತ ನೌಕರರನ್ನು ಸಸ್ಪೆಂಡ್, ವರ್ಗಾವಣೆ ಮಾಡಿದಾಗ ದಲಿತ ಎಂ.ಎಲ್.ಎ., ಮಿನಿಸ್ಟರ್‌ಗಳನ್ನು ಕಂಡು ಸರ್ಕಾರಕ್ಕೆ ಒತ್ತಡ ತಂದು ಕಮಿಷನರ್‌ರನ್ನು ದಿಢೀರ್ ವರ್ಗಾವಣೆ ಮಾಡಿಸುವರು. ಆಡಳಿತದ ಸಾಂಸ್ಥಿಕ ನೆಲೆಯಲ್ಲಿ ನೌಕರದಾರರಿಗೆ ಸಮಸ್ಯೆಗಳ ಪರಿಹಾರಕ್ಕೆ ಬೇರೆಯೆ ಆದ ಮನ್ನಾರಗಳು, ರಾಜಕೀಯ ಪಟ್ಟುಗಳು ಇವೆ ಎಂಬ ಇಂತಹ ಹಲವಾರು ಘಟನೆಗಳು ಈ ಕಾದಂಬರಿಯಲ್ಲಿ ವರ್ಣಿತವಾಗಿವೆ.

ಭ್ರಷ್ಟಾಚಾರಕ್ಕೆ ಒಳಗಾದ ವ್ಯಕ್ತಿಗಳು, ಕಂಟ್ರಾಕ್ಟರ್‌ಗಳು, ರಾಜಕೀಯದವರು ತಿರುಪತಿ ಧರ್ಮಸ್ಥಳದ ರೆಗ್ಯುಲರ್ ವಿಸಿಟರ್ಸ್ ಆಗಿರುತ್ತಾರೆ. ಅಲ್ಲಿಗೆ ಹೋಗಿ ಬಂದರೆ ಅಲ್ಲಿಯವರೆಗಿನ ಪಾಪ ನವೀಕರಣಗೊಂಡಂತೆ ಎಂಬ ಭಾವ. ಅಧಿಕಾರಿಗಳಾದ ಹನುಮಂತರಾವ್ ಮತ್ತು ಪುಟ್ಟಪ್ಪ ತಿರುಪತಿಗೆ ಹೋಗುವಾಗ ಡ್ರೈವ್ ಮಾಡುತ್ತಿದ್ದ ಪುಟ್ಟಪ್ಪ ಆಕ್ಸಿಡೆಂಟ್‌ನಲ್ಲಿ ಸತ್ತು, ಹನುಮಂತರಾವ್ ಉಳಿಯುತ್ತಾರೆ. ಹೆಣ ನೋಡಲು ಬಂದ ಪುಟ್ಟಪ್ಪನ ಹೆಂಡತಿಯ ತಮ್ಮ ಹೆಣದ ಜೇಬಿನಿಂದ ಕೀ ತೆಗೆದುಕೊಂಡು ದುಡ್ಡು, ಚಿನ್ನ ಸೂಟ್‌ಕೇಸ್ ತುಂಬಿಸಿಕೊಂಡು ಹೋಗುತ್ತಾನೆ. ಹೆಣ ಕಾಯುವ ಕೆಲಸ ಹನುಮಂತರಾವ್‌ದು ಆಗುತ್ತದೆ. ಇಂತಹ ಹಣದ ಅಸಹ್ಯ ತಾಂಡವ ನೃತ್ಯವನ್ನು ಕಾದಂಬರಿಕಾರರು ಕಣ್ಮುಂದೆ ಕುಣಿಸಿದ್ದಾರೆ.

ತನ್ನ ಅಧಿಕಾರದ ಅಂತಸ್ತನ್ನು ಸಾರ್ವಜನಿಕವಾಗಿ ಪ್ರದರ್ಶಿಸುತ್ತ ಬ್ಯಾಡ್ಮಿಟನ್ ಆಡುವಾಗ ತನ್ನ ಸೇವಕರಂತೆ ಕಿರಿಯ ಅಧಿಕಾರಿಗಳನ್ನು ಬಳಸಿಕೊಳ್ಳುವ ಡಿ.ಸಿ. ರೆಡ್ಡಿಯವರ ಪಾಳೆಗಾರಿಕೆ ಇಲ್ಲಿ ಯಥಾವತ್ತಾಗಿ ಮೂಡಿಬಂದಿದೆ. ಆ ಸೇವೆಗೆ ತಯಾರಾಗಿ ನಿಲ್ಲುವ ವ್ಯಕ್ತಿತ್ವ ರಹಿತ ಕ್ಷುಲ್ಲಕ ಅಧಿಕಾರಿಗಳ ಕೋಡಂಗಿ ವರ್ತನೆ ವಾಕರಿಕೆ ತರಿಸುತ್ತದೆ.

ಡಿ.ಸಿ. ಗುರುವಾರೆಡ್ಡಿ ರಿಟೈರ್ಡ್ ಆಗುವಾಗ ಹನುಮಂತರಾವ್ ತಮ್ಮ ಮನೆಯಲ್ಲಿ ಪಾರ್ಟಿಕೊಡುವರು. ರೆಡ್ಡಿ ಸಾಹೇಬರು ವ್ಯಾಟ್ ಸಿಸ್ಟಂ ಬರುತ್ತದೆ. ವ್ಯಾಪಾರಿಗಳ ಲೆಕ್ಕ ಪರಿಶೀಲನೆಗೆ ಅಧಿಕಾರಿಗಳನ್ನು ಇನ್ನು ಮುಂದೆ ಕರೆಯುವಂತಿಲ್ಲ ಎಂದು ಹೇಳುವರು. ಇನ್ನೂ ಹದಿನೈದು ವರ್ಷ ಸರ್ವೀಸ್ ಇದ್ದ ಹನುಮಂತರಾವ್ ಆ ಸುದ್ದಿ ಕೇಳಿ, ಮಿಕ್ಕ ಹದಿನೈದು ವರ್ಷ ಲಂಚ ಇಲ್ಲದೆ ಹೇಗೆ ಇರುವುದೆಂದು ಸಡನ್ ಆಗಿ ಹಾರ್ಟ್ ಅಟ್ಯಾಕ್‌ಗೆ ಒಳಗಾಗಿ ಸಾಯುವರು. ಈ ಕಾದಂಬರಿಯಲ್ಲಿ ಇಂತಹ ದಾರುಣ ಭ್ರಷ್ಟ ಬದುಕು ಓದಿದಷ್ಟು ಅಚ್ಚರಿಯುಂಟಾಗುವುದು.

* * *

ವ್ಯಕ್ತಿ, ಅಧಿಕಾರ, ಕುಟುಂಬ ಈ ತ್ರಿಕೋನ ಕೂಟದಲ್ಲಿ ತುಸು ನಿಷ್ಠಾವಂತ ಅಧಿಕಾರಿ ಎದುರಿಸಬೇಕಾದ ತೊಡಕುಗಳ ಸರಮಾಲೆ ಇಲ್ಲಿ ಕಥೆಯಾಗಿ ಹರಿದಿದೆ. ಈ ಕಥೆಯು ರಾಜ್ಯ ಸರ್ಕಾರದ ಒಂದು ಇಲಾಖೆಯ ಆಡಳಿತ ಸಮುದಾಯದ ವಿವಿಧ ಭವಾವಳಿಗಳ ಭಾವ ಸಂಘರ್ಷವನ್ನು ಅಭಿವ್ಯಕ್ತಿಸುವ ರೀತಿ, ಒಟ್ಟು ಆಡಳಿತ ವ್ಯವಸ್ಥೆಯ ಆಂತರಿಕ ನೋಟದ ಕ್ಷಕಿರಣದಂತಿದೆ. ಶ್ರೀನಿವಾಸನು ಹೆಚ್.ಡಿ.ಸಿ. ಬಂಗಾರಮ್ಮ ಮೇಡಂಗೆ ಕೆ.ಪಿ.ಎಸ್.ಸಿ. ಡಿಪಾರ್ಟ್‌ಮೆಂಟಲ್ ಪರೀಕ್ಷೆಗೆ ಪೇಪರ್ ರೆಡಿ ಮಾಡಿಕೊಡುವುದು. ಆಕೆ ಲೋಕಾಯುಕ್ತರಿಂದ ಕೆಲವರ ಆಸ್ತಿವಿವರ ಕೇಳಿರುವುದರಲ್ಲಿ ಶ್ರೀನಿವಾಸನ ಹೆಸರು ಇರುವುದನ್ನು ಹೇಳಿ ಗೌಪ್ಯತೆ ಕಾಪಾಡಿಕೊಂಡು ಎಚ್ಚರದಿಂದಿರಲು ತಿಳಿಸುವುದು. ಶ್ರೀನಿವಾಸ ತನ್ನ ಹೆಂಡತಿಗೆ ಅವಳ ಮತ್ತು ಮಕ್ಕಳ ಶೂ ಚಪ್ಪಲಿಯನ್ನು ತೊಟ್ಟಿಗೆ ಎಸೆಯಲು ತಿಳಿಸಿ; ಒಡವೆ ವಸ್ತು ನಾದಿನಿಯ ಮನೆಗೆ ಸಾಗಿಸಲು ಹೇಳುವ ಭಯ ಆತಂಕ-ಯಾವುದೇ ಉತ್ಪ್ರೇಕ್ಷೆಗೆ, ಕಲ್ಪನಾ ಕವಚಕ್ಕೆ ಮೊರೆಹೋಗದೆ ಇದ್ದದ್ದು ಇದ್ದಂತೆ ಕಥಾರೂಪ ಪಡೆದಿದೆ.

ಅಧಿಕಾರಿ ಸಹೋದ್ಯೋಗಿಗಳಾದ ಮಾದಯ್ಯ, ನಜಿಬುಲ್ಲಾ, ಹನುಮಂತರಾವ್, ಮಹೇಶ್ ಅವರ ಜೊತೆ ಕಛೇರಿಯಲ್ಲಿ ಬಿಡುವಾದಾಗಲೆಲ್ಲ ಭೇಟಿಮಾಡಿ ಕಾಫಿ ಸೇವಿಸಿ; ಸಂಜೆ ಬಾರ್‌ನಲ್ಲಿ ಕುಡಿದು ಎಲ್ಲವನ್ನು ಅವರ ಜೊತೆ ಚರ್ಚಿಸುವ ಶ್ರೀನಿವಾಸ ಅವರಾರಿಗೂ ಲೋಕಾಯುಕ್ತ ಕುರಿತು ಎಚ್ಚರಿಕೆ ನೀಡುವುದಿಲ್ಲ. ನಜಿಬುಲ್ಲಾ ಮನೆ ರೈಡ್ ಆದಾಗ ತನ್ನ ಸ್ವಾರ್ಥಕ್ಕೆ ವ್ಯಥೆಪಡುತ್ತಾನೆ. ಸ್ನೇಹಿತರಂತೆ ಸೋಗುಹಾಕಿ ಬದುಕುವ ಮತಲಬಿಗಳ ಅನಾವರಣ ಈ ಕಾದಂಬರಿಯಲ್ಲಿದೆ.

ಪುಡಿ ಪತ್ರಿಕೆಗಳು ಸಂಪಾದನೆ ಇರುವ ಇಲಾಖೆಗಳ ಸುತ್ತಲೂ ಠಳಾಯಿಸುತ್ತ ಇಲಾಖೆಯ ಅಧಿಕಾರಿಗಳ ಪರಸ್ಪರ ದ್ವೇಷ, ಅಸೂಯೆಯ ಲಾಭ ಪಡೆಯುತ್ತವೆ. ಅಧಿಕಾರಿಗಳು ಮಾಮೂಲು ಕೊಡದೆ ಇದ್ದರೆ, ಅವರ ಅಕ್ರಮ ಆಸ್ತಿ ವಿವರ ತಿಳಿದು ಆಕ್ಷೇಪಾರ್ಹ ಲೇಖನಗಳನ್ನು ಬರೆಯುತ್ತವೆ. ಹಾಗಿಲ್ಲದಿದ್ದರೆ ಲೈಂಗಿಕ ಆರೋಪಗಳನ್ನು ಅತಿರಂಜಿತವಾಗಿ ಬರೆದು ಸಂಬಂಧಪಟ್ಟವರಿಗೇ ಹಂಚಿ ಕೆಟ್ಟ ಆನಂದಕ್ಕೊಳಗಾಗುತ್ತವೆ. ಹಣಕ್ಕಾಗಿ ಪೀಡಿಸುತ್ತವೆ. ಅಂತಹ ಪತ್ರಿಕೆಯ ಜಾನಕಿ ಪ್ರಸಾದ್ 'ಮಹಿಳಾಧ್ವನಿ' ಪತ್ರಿಕೆಯಲ್ಲಿ ಕಮೀಷನರ್ ಮೇಲೆ ದಲಿತ ವಿರೋಧಿ ಎಂದು ಬರೆದು ಹಂಚಿ; ಇನ್ನೊಮ್ಮೆ ಶ್ರೀನಿವಾಸ ಮತ್ತು ಟೈಪಿಸ್ಟ್ ರಾಗಿಣಿ ಪ್ರೇಮ ಪ್ರಕರಣ ಮುದ್ರಿಸಿರುತ್ತಾನೆ. ಅದು ಶ್ರೀನಿವಾಸನ ಕೌಟುಂಬಿಕ ಪರಿಸರ ಬಿಗಡಾಯಿಸುವುದಕ್ಕೆ ಕಾರಣವಾಗುತ್ತದೆ. ಶ್ರೀನಿವಾಸ ಮನೆ ಬಿಟ್ಟು ಲಾಡ್ಜ್‌ನ ರೂಂನಲ್ಲಿ ಇರಬೇಕಾಗುತ್ತದೆ.

ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಹೆಚ್ಚು ಅಧಿಕಾರಿಗಳು ತಮ್ಮ ಕೈಕೆಳಗಿನ ಮಹಿಳಾ ಟೈಪಿಸ್ಟ್, ಕಿರಿಯ ಸ್ತ್ರೀ ಅಧಿಕಾರಿಗಳನ್ನು ಲೈಂಗಿಕ ಶೋಷಣೆಗೆ ಬಳಸಿಕೊಳ್ಳುವವರಿದ್ದಾರೆ. ಅದರಲ್ಲಿಯೂ ಪೈಪೋಟಿ ಸಾಧಿಸಿದಂತೆ ಮಾನ ಮರ್ಯಾದೆ ರಹಿತವಾಗಿ ವರ್ತಿಸುವ ಸಣ್ಣತನದ ವಿವಿಧ ಘಟನೆಗಳು ಇಲ್ಲಿ ಅನಾವರಣವಾಗಿವೆ. ಶ್ರೀನಿವಾಸನ ಮೇಲಿನ ಅಧಿಕಾರಿ ಡಿ.ಸಿ. ರೆಡ್ಡಿಯವರು ಟಾರ್ಗೆಟ್ ರೀಚ್ ಆಗದಿರುವುದೇ ನೆಪವಾಗಿ, ಕಾರಣ ಕೇಳಿ ಶ್ರೀನಿವಾಸ್‌ಗೆ ನೋಟೀಸ್ ನೀಡುತ್ತಾರೆ. ಶ್ರೀನಿವಾಸ್ ಅದಕ್ಕೆ ಉತ್ತರವಾಗಿ ಡಿ.ಸಿ. ರೆಡ್ಡಿ ಮೊದಲು ತನ್ನ ಸ್ಥಾನದಲ್ಲಿ ಅಧಿಕಾರಿಯಾಗಿದ್ದಾಗ ಸೂಕ್ತ ಕ್ರಮ ತೆಗೆದುಕೊಳ್ಳದೆ ಇದ್ದದ್ದು ಹೆಚ್ಚು ಕೇಸ್ ವಿಲೇವಾರಿ ಆಗದಿರುವುದಕ್ಕೆ ಕಾರಣ ಎಂದು ತಿಳಿಸುತ್ತಾನೆ. ಜೊತೆಗೆ ತನ್ನ ಈಗಿನ ಸಮಾನ ಅಂತಸ್ತಿನ ಅಧಿಕಾರಿಗಳ ಪರ್‌ಫಾರ್‌ಮೆನ್ಸ್ ತನಗಿಂತ ಹೇಗೆ ಉತ್ತಮವಾಗಿಲ್ಲ ಎಂದು ದಾಖಲೆ ಸಹಿತ ಹಾಜರು ಪಡಿಸುತ್ತಾನೆ. ಈ ರೀತಿ ಮೇಲಿನ ಅಧಿಕಾರಿ ರೆಡ್ಡಿ ಅವರು ನೋಟೀಸ್ ನೀಡಲು; ತಾನು ತ್ರೈಮಾಸಿಕ ಮಾಮೂಲಿ ಕೊಡದೆ ಇರುವುದು ಕಾರಣವಾಗಿದೆ, ಎಂದು ಮುಖಕ್ಕೆ ರಾಚಿದಂತೆ ಉತ್ತರರೂಪದಲ್ಲಿ ತಿಳಿಸುತ್ತಾನೆ. ಅದರ ಕಾಪಿಯನ್ನು ಕಮೀಷನರಿಗೂ ಸಲ್ಲಿಸುತ್ತಾನೆ.

ಆಗ ಡಿ.ಸಿ. ಹಂತದವರೆಲ್ಲ ಶ್ರೀನಿವಾಸನನ್ನು ಅವಮಾನಿಸಲು ಸಭೆ ಸೇರಿ, ಅಲ್ಲಿಗೆ ಶ್ರೀನಿವಾಸನನ್ನು ಕರೆದು ಚೇರ್ ಕೊಡದೆ ನಿಲ್ಲಿಸಿದ್ದು ಮೇಲಿನ ಅಧಿಕಾರಿಗಳ ಕೂಟ ವ್ಯವಸ್ಥೆಗೆ ಕನ್ನಡಿ ಹಿಡಿದಂತಿದೆ. ಅಂತಹ ಸಭೆಯ ಬಲೆಯಲ್ಲಿ ಅವರ ಪ್ರಶ್ನೆಗೆ ಚತುರಮತಿಯಾದ

ಶ್ರೀನಿವಾಸ ಸರಿಯಾಗಿ ಉತ್ತರಿಸಿ, ಅವರ ಲೈಂಗಿಕ ಹಗರಣಗಳ ಸರಮಾಲೆಯನ್ನು ಶಾಂತವಾಗಿ ಹೇಳಿ ಅವರು ಹತಮುಖರಾಗುವಂತೆ ಮಾಡುತ್ತಾನೆ. ಇದು ಕೆಳಗಿನ ಅಧಿಕಾರಿಗಳಿಗೆ ಇರಬೇಕಾದ ಆಂತರಿಕ ಕೆಚ್ಚು ಎಂಬುದನ್ನು ಕಾದಂಬರಿಕಾರರು ಜಾಣ ರೀತಿಯಲ್ಲಿ ನೇಯ್ದಿದ್ದಾರೆ.

ಅಧಿಕಾರಿ ಶ್ರೀನಿವಾಸನಿಗೆ ಉದ್ದೇಶಪೂರ್ವಕವಾಗಿ ಪದೋನ್ನತಿಯನ್ನು ತಡೆ ಹಿಡಿಯಲಾಗುತ್ತದೆ. ಡಿ.ಸಿ. ರೆಡ್ಡಿ ಆತನ ಸಿ.ಆರ್. ಕೆಡಿಸಿದ್ದು, ಹಣಕಾಸು ಮಂತ್ರಿ ಬಸವರಾಜಪ್ಪ ತಾನು ಹಿಂದೆ ಎಂ.ಎಲ್.ಎ. ಚುನಾವಣೆಗೆ ನಿಂತಿದ್ದಾಗ ಶ್ರೀನಿವಾಸನು ಚುನಾವಣಾ ನಿಧಿ ಕೊಡಲಿಲ್ಲ ಎಂದು ದ್ವೇಷ ಸಾಧಿಸಿ ಬಡ್ತಿ ತಳ್ಳಿಹಾಕಿದ್ದು–ಭಾರತದ ಆಡಳಿತ ವ್ಯವಸ್ಥೆಯ ಭ್ರಷ್ಟಾಚಾರ ಬುಡದ ತಿಳಿಯಲಾಗದ ಆಳ.

ಬ್ಯಾಚ್‌ಮೇಟ್ಸ್‌ಗಳಲ್ಲಿ ಮೊದಲಿಗನಾಗಿದ್ದು ಪ್ರಮೋಷನ್ ಸಿಗದೆ ಆಗಬಹುದಾದ ಅವಮಾನದ ಅರಿವು ಶ್ರೀನಿವಾಸನನ್ನು ತೀವ್ರವಾಗಿ ಕಾಡುತ್ತದೆ. ಆಗ ಆತ ಕಾನೂನಿನ ರೀತಿ ನ್ಯಾಯಾಲಯದಲ್ಲಿ ತನಗಾದ ಅನ್ಯಾಯ ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಶ್ರೀನಿವಾಸ ತನಗೆ ಅಡ್ವರ್ಸ್ ರಿಪೋರ್ಟ್ ಬರೆದಿರುವ ಪ್ರತಿಯು ಸರ್ಕಾರದಿಂದ ತಲುಪಿದಾಗ, ಆತ ಉತ್ತರ ಕೊಟ್ಟ ರೀತಿ ಅಧೀನ ಅಧಿಕಾರಿಗಳಲ್ಲಿರಬೇಕಾದ ಕಾನೂನು ಪರಿಣತಿಗೆ ಸಾಕ್ಷಿಯಾಗಿದೆ. ಆತ ಕೇಸಿನ ಎಲ್ಲ ಮಗ್ಗುಲುಗಳನ್ನು ಒಂದು ಎಳೆಯೂ ಬಿಡದಂತೆ ಪರಿಶೀಲಿಸಿ, ತನ್ನ ತಪ್ಪು ಇಲ್ಲವೆಂದು ದಾಖಲೆಗಳನ್ನು ಹೊಂದಿಸಿಕೊಳ್ಳುತ್ತಾನೆ. ಅದು ಈ ಬಗೆಯ ದ್ವೇಷಸಾಧನೆಯ ಆಡಳಿತ ವ್ಯವಸ್ಥೆಯಲ್ಲಿ–ತಪ್ಪಿಲ್ಲದೆ, ಅಪರಾಧಿಯೆಂದು ದೂಷಿತರಾಗುವವರಿಗೆ-ಮಾರ್ಗದರ್ಶಿ ಘಟನೆಯಾಗಿದೆ. ಇದು ಕಾದಂಬರಿಕಾರ ರಾಮದಾಸರ ಬೋಧಪ್ರದ ಗುಣವಾಗಿ ಕಥೆಯ ಒಡಲಲ್ಲಿ ಎಚ್ಚರದ ತಿಳಿವು ಹರಿದು, ಆಡಳಿತದ ಒಳಮರ್ಮಭೇದಿಸಿ ಜಯಿಸುವ ಇತ್ಯಾತ್ಮಕ ಧೋರಣೆಯಾಗಿದೆ.

ಕೌಟುಂಬಿಕ ಮತ್ತು ಕಛೇರಿಯ ಕೆಲಸದ ನಿರಾಶೆಯ ಮಡುವಿನಲ್ಲಿ ಬಿದ್ದ ಶ್ರೀನಿವಾಸ ತಾಳ್ಮೆಯಿಂದ ಸೂಕ್ತ ಆಧಾರಗಳೊಂದಿಗೆ ವಕೀಲ ನಾರಾಯಣ್ ಅವರನ್ನು ಕಂಡು ಕೇಸ್ ಹಾಕುತ್ತಾರೆ. ಆಡಳಿತಾತ್ಮಕ ಕುತಂತ್ರ ಭೇದಿಸಿ ನ್ಯಾಯಾಲಯಕ್ಕೆ ಶ್ರೀನಿವಾಸನಿಗೆ ಆದ ಅನ್ಯಾಯತಿಳಿಸುವಲ್ಲಿ ನಾರಾಯಣ್ ಯಶಸ್ವಿಯಾಗುತ್ತಾರೆ. ಶ್ರೀನಿವಾಸ್ ಪರವಾಗಿ ನ್ಯಾಯಾ ಹೊರಬರುವ ಸೂಚನೆ ಸಿಗುತ್ತದೆ.

ಉತ್ತಮ ಕೆಲಸ ನಿರ್ವಹಣೆಯಿಂದ ಹಾಗೂ ಮನೋಸ್ಥೈರ್ಯದಿಂದ ಒಳಿತು ಸಾಧ್ಯವಿದೆ ಎಂಬ ಆಶಾಭಾವನೆಯನ್ನು ಈ ಕಾದಂಬರಿ ಉಂಟು ಮಾಡುತ್ತದೆ. ಕಾದಂಬರಿಕಾರ ರಾಮದಾಸರ ಉತ್ತಮ ನಿರೂಪಣೆಯ ವಾಣಿಜ್ಯ ತೆರಿಗೆ ಇಲಾಖೆಯ ಈ ಕಥೆ 'ಶ್ರೀನಿವಾಸ ಮೇಲೇರುತ್ತಿರುವ ಸೂರ್ಯನನ್ನು ನೋಡಿದ' ಎಂದು ಮುಕ್ತಾಯವಾಗುತ್ತದೆ. ಈ ಮುಕ್ತಾಯದ ನುಡಿ ಉತ್ತಮ ಕಥಾತಂತ್ರವಾಗಿದ್ದು, ಓದುಗನಿಗೆ ಮುಂದಿನ ಒಳಿತುಗಳ ಏರುಮುಖವನ್ನು ಕಲ್ಪಿಸಿಕೊಳ್ಳಲು ಪ್ರಕಾಶಮಾನ ಸೂರ್ಯನನ್ನು ವಿಶಾಲ ಆಕಾಶವನ್ನು ತೋರಿಸುತ್ತಾ ಸಂಭ್ರಮಿಸುತ್ತದೆ. ○

ಲೇಖಕರ ಕೃತಿಗಳು

೧. ಹಾಡುಪಕ್ಕಿ ಅಂಬಿಕಾತನಯದತ್ತ (೧೯೯೫)
ಎರಡನೆ ಆವೃತ್ತಿ ೨೦೦೯

೨. ಡಿ.ಆರ್. ಬೇಂದ್ರೆ (೧೯೯೨)
ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಆಂಗ್ಲ ಕೃತಿ


೩. ನಾಕುತಂತಿ-ಒಂದು ಟಿಪ್ಪಣಿ (೨೦೦೦)
ಎರಡನೆ ಆವೃತ್ತಿ ೨೦೧೦

೪. ರಸ್ತೆ ನಿಯಮಗಳು (೨೦೦೦)
ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕೃತಿ.
ಎರಡನೆ ಆವೃತ್ತಿ ೨೦೧೦

೫. ಹೂತಃದ ಹುಣಸಿ (೨೦೦೦)
(ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ)

೬. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ-ಒಂದು ಅಧ್ಯಯನ (೨೦೦೧)
(ಪಿಎಚ್.ಡಿ. ಮಹಾಪ್ರಬಂಧ)

೭. ಬರೆಹದಲ್ಲಿ ಬೇಂದ್ರೆಯವರ ಬದುಕು (೨೦೦೮)
ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಪ್ರಕಟಿಸಿರುವ ಕೃತಿ.



ಡಾ. ಜಿ. ಕೃಷ್ಣಪ್ಪ ಅವರು ಗ್ರಾಮೀಣ ಸಂಸ್ಕೃತಿ ಸೊಗಡನ್ನು ಮೈಗೂಡಿಸಿಕೊಂಡು ಬಂದ ಹಿರಿಯ ವಿದ್ವಾಂಸರು. ತಂದೆ ಹೆಚ್. ಗಂಗಯ್ಯ ತಾಯಿ ಸಾವಿತ್ರಮ್ಮನವರ ಮಗನಾಗಿ 20–10–1948ರಲ್ಲಿ ಜನಿಸಿದರು. ಓದಿದ್ದು ಬೆಂಗಳೂರಿನಲ್ಲಿ. ಆಟೋಮೊಬಾಯಿಲ್ ಇಂಜಿನೀಯರಿಂಗ್ ಡಿಪ್ಲೋಮಾ, ನಂತರ ಎಲ್‌ಎಲ್‌ಬಿಯನ್ನೂ ಬೆಂಗಳೂರು ವಿಶ್ವವಿದ್ಯಾಲಯದಿಂದ, ಎಂ.ಎಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಮುಗಿಸಿದರು. 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ : ಒಂದು ಅಧ್ಯಯನ', ಪ್ರೌಢ ಪ್ರಬಂದಕ್ಕೆ ಪಿ.ಎಚ್.ಡಿ ಪದವಿ ಪಡೆದಿದ್ದಾರೆ.

ಸಾರಿಗೆ ಇಲಾಖೆಯಲ್ಲಿ ವೃತ್ತಿ ಆರಂಭಿಸಿದ ಡಾ. ಕೃಷ್ಣಪ್ಪನವರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾಗಿ ನಿವೃತ್ತರಾಗಿದ್ದಾರೆ. ವೃತ್ತಿಜೀವನದ ಜೊತೆಗೆ ಸಾಹಿತ್ಯ ಚಿಂತನೆ, ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ಅವರು ಈವರೆಗೆ, ಹಾಡುಹಕ್ಕಿ ಅಂಬಿಕಾತನಯದತ್ತ, 'ನಾಕುತಂತಿ ಒಂದು ಟಿಪ್ಪಣಿ' ಹೂತಾಽದ ಹುಣಸಿ (ದ.ರಾ. ಬೇಂದ್ರೆ ವಿಮರ್ಶಾ ಲೇಖನಗಳು).' 'ಬರೆಹದಲ್ಲಿ ಬೇಂದ್ರೆ ಬದುಕು' ಇವರ ಬೇಂದ್ರೆ ಸಾಹಿತ್ಯ ಕುರಿತಾದ ಮೌಲಿಕ ಕೃತಿಗಳು. ಇವರ 'ಡಿ.ಆರ್.ಬೇಂದ್ರೆ'ಯನ್ನು ಇಂಗ್ಲಿಷ್‌ನಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದೆ.

ಕವಿ ಬೇಂದ್ರೆಯವರ ಕಾವ್ಯವನ್ನು ಆಳವಾಗಿ ಅಧ್ಯಯನ ಮಾಡಿರುವ ಡಾ. ಜಿ. ಕೃಷ್ಣಪ್ಪನವರು ಕುರ್ತುಕೋಟಿಯವರ ನಂತರದಲ್ಲಿ ಬೇಂದ್ರೆ ಕುರಿತು ಅಧಿಕೃತವಾಗಿ ಬರೆಯಬಲ್ಲ ವಿಮರ್ಶಕರೆಂದರೆ ತಪ್ಪಿಲ್ಲ. ಅವರ 'ಅಂತರಂಗದತ್ತ ನಯನ' ಕೃತಿಯು ಬೇಂದ್ರೆಯನ್ನು ಒಳಗೊಂಡಂತೆ ದೇಸಿ ಪ್ರಜ್ಞೆಯಲ್ಲಿ ಬರೆಯುತ್ತಿರುವ ಅನೇಕ ಕವಿಗಳ ಕಾವ್ಯದಲ್ಲಿ ಹುದುಗಿದ ಹಲವು ಅಂಶಗಳನ್ನು ಬಹುಶಿಸ್ತೀಯ ನೆಲೆಗಳಲ್ಲಿ ವಿಮರ್ಶಿಸಿದೆ. ಡಾ. ಕೃಷ್ಣಪ್ಪ ಅವರ ಚಿಂತನೆಗಳಲ್ಲಿ ಚುರುಕಿನ ವಿಮರ್ಶಾ ಗ್ರಹಿಕೆ ನಿಜಕ್ಕೂ ಬೆರಗುಗೊಳಿಸುತ್ತದೆ.

ಡಾ. ಶ್ರೀಶೈಲ ನಾಗರಾಳ

ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು
ಮುಖ್ಯಬೀದಿ, ಗುಲಬರ್ಗಾ - 585 101
ಫೋನ್: 08472-222431 ಮೊಬೈಲ್: 94498 25431
ISBN 81-920007-9-6